# ಕರ್ನಾಟಕ ವಿಕಾಸ

# Karnataka Vikas

ಫೆಬ್ರವರಿ February 2017



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಗ್ರಾಅ ಮತ್ತು ಪಂ.ರಾಜ್ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್‌ರವರು ದಿನಾಂಕ:10.01.2017ರಂದು ನಡೆಸಿದ ಇಲಾಖೆಯ ಮುಖ್ಯಸ್ಥರೊಂದಿಗೆ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಸಮಿತಿ ಸಭೆ.

ಪದ್ಮವಿಭೂಷಣ ಶ್ರೀ ಬಿಂದೇಶ್ವರ ಪಾಟಕ್, ಅಧ್ಯಕ್ಷರು, ಸುಲಬ್ ಇಂಟರ್‌ನ್ಯಾಷನಲ್ ಫೌಂಡೇಶನ್ ಇವರು ರಾಜ್ಯಕ್ಕೆ ಭೇಟಿ ನೀಡಿ ಮಾನ್ಯ ಗ್ರಾಅ ಮತ್ತು ಪಂ.ರಾಜ್ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್ ಅವರೊಂದಿಗೆ ದಿನಾಂಕ: 21.01.2017 ರಂದು ಸಂವಾದ ನಡೆಸಿದರು.









ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಸಿದ್ದರಾಮಯ್ಯ ಹಾಗೂ
ಮಾನ್ಯ ಗ್ರಾಅ ಮತ್ತು ಪಂ.ರಾಜ್
ಸಚಿವರಾದ ಶ್ರೀ ಎಚ್.ಕೆ. ಪಾಟೀಲ್
ಇವರು ದಿನಾಂಕ:10.01.2017
ರಂದು ಕರ್ನಾಟಕ ರಾಜ್ಯ
ವಿಕೇಂದ್ರೀಕರಣ
ಮತ್ತು ಅಭಿವೃದ್ಧಿ
ಸಮಿತಿ ಸಭೆ ನಡೆಸಿದ ಚಿತ್ರಣ.





ಮಾನ್ಯ ಗ್ರಾಅ ಮತ್ತು ಪಂ.ರಾಜ್
ಸಚಿವರಾದ ಶ್ರೀ ಎಚ್.ಕೆ. ಪಾಟೀಲ್
ರವರಿಂದ ಇ–ಸ್ವತ್ತು ಅನುಷ್ಟಾನ ಕುರಿತು
ದಿನಾಂಕ:02.01.2017ರ
ಪತ್ರಿಕಾ ಗೋಷ್ಠಿ.

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಫೆಬ್ರವರಿ 2017 | ಸಂಪುಟ : 58 | ಸಂಚಿಕೆ : 03

February 2017 | Volume : 58 | Issue : 03


## ಈ ಸಂಚಿಕೆಯೊಳಗೆ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಡಾ. ಎನ್. ನಾಗಾಂಬಿಕಾ ದೇವಿ |
| 7 | ವರದಿ | – ಡಿ. ಪ್ರಾಣೇಶ್ ರಾವ್<br>– ಗಂಗಾಧರ್ ಸ್ವಾಮಿ<br>– ನಾಗೇಂದ್ರ ಕುಮಾರ ಜೆ.ಟಿ<br>– ಪ್ರಶಾಂತ್. ಎನ್<br>– ನಿತ್ಯಾನಂದ ಕೆ ಕೆ |
| 22 | ಲೇಖನ | – ನಿಂಗೇಗೌಡ |
| 27 | ಯಶೋಗಾಥೆ | – ಗೋಪಾಲ ಪಿ. ಮಾಳಿ<br>– ವಿಜಯಶೀಲಾ ಎಸ್.<br>– ರಾಚಯ್ಯ ಚೌಕಿಮಠ |
| 41 | ಕವಿಯ(ಕ್ಷ)ಪ್ರಶ್ನೆ | – .ಶ್ರೀನಿವಾಸ ವಿ. |
| 42 | ಕಾವ್ಯ ವಿಕಾಸ | – ಬಿ.ಎ.ರಾಜಪ್ಪ ನಿಬಗೂರ |
| 43 | ಸುತ್ತೋಲೆ | |






ಪ್ರಕಾಶಕರು

**ಎಂ.ಕೆ.ಕೆಂಪೇಗೌಡ**

ನಿರ್ದೇಶಕರು(ಪಂ.ರಾಜ್) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಡಾ|| ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ

**ಮುಬಾರಕ್ ಅಹ್ಮದ್**

ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು

**ಆಗ್ನೇಸ್ ಮೇರಿ**


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ


ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com


### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಜನವರಿ 2017ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ನೂತನ ವರ್ಷದ ಕ್ಯಾಲೆಂಡರ್ ಹೊತ್ತು ಬಂದಿದ್ದು ಚೆನ್ನಾಗಿದೆ. ಕರ್ನಾಟಕ ರಾಜ್ಯವು ಬರದಿಂದ ತುಂಬಾ ತೊಂದರೆಗಳನ್ನು ಅನುಭವಿಸುವಂತಾಗಿದ್ದು ನಿಜಕ್ಕೂ ಖೇದದ ಸಂಗತಿ. ದನಕರುಗಳಿಗೆ ಆಹಾರದ ನಿವಾರಣೆಗೆ ರಾಜ್ಯ ಸರ್ಕಾರವು ನೀರು, ಆಹಾರ ಪೂರೈಕೆಗೆ ಸೂಕ್ತ ವ್ಯವಸ್ಥೆ ಮಾಡುತ್ತಿರುವುದು ಪ್ರಗತಿಯ ಸಂಕೇತ. ತೀವ್ರ ಬರಗಾಲವನ್ನು ಸರಕಾರ ಯುದ್ದೋಪಾದಿಯಲ್ಲಿ ಕೈಗೊಂಡಿದ್ದು ಜನತೆಗೆ ನೆಮ್ಮದಿ ತಂದಿದೆ. ಗ್ರಾಮ ಪಂಚಾಯತಿಗಳು ಕೈಗೊಳ್ಳಲೇಬೇಕಾದ ವಿವಿಧ ಯೋಜನೆಗಳ ಬಗ್ಗೆ ಲೇಖನವು ಮೆಚ್ಚುಗೆಯಾಯಿತು. ಸರ್ಕಾರವು ಕೈಗೊಳ್ಳುವ ಯೋಜನೆಗಳಲ್ಲಿ ಪಾರದರ್ಶಕತ್ವ ಮಾಡಿದಾಗ ಜನಕಲ್ಯಾಣವಾಗುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಎಲ್ಲಾ ಅನುದಾನದ ಹಣವು ಸದ್ಬಳಕೆಯಾಗಿ ರಾಜ್ಯದ ಸರ್ವಾಂಗೀಣ ಪ್ರಗತಿಯಾಗಲೆಂದು ಆಶಿಸುತ್ತೇವೆ.

**ಶ್ರೀ ಕೊತ್ತಲ ಮಹದೇವಪ್ಪ**
ಶಿಕ್ಷಕ, ಸಾಹಿತಿ, ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116.

ಜನವರಿ 2017ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಮುಖಪುಟ ಸರ್ಕಾರದ ನಡಿಗೆ ಬರ ನಿವಾರಿಸುವ ಕಡೆಗೆ ಬಹಳ ಆಕರ್ಷಕವಾಗಿ ಮೂಡಿಬಂದಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಸಚಿವಾಲಯ ಸಂದೇಶ ಕುಡಿಯುವ ನೀಡಿಗೆ ಆದ್ಯತೆ ಜನಸಾಮಾನ್ಯರ ಆಶೋತ್ತರ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಸ್ವಚ್ಛಭಾರತ ಅಭಿಯಾನಕ್ಕೆ ಒಂದು ಹೆಜ್ಜೆ. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ಜೊತೆಗೆ ಶ್ರೀ ಜಿತೇಂದ್ರ ಶಂಕರ ಮಾಥೂರ್ ಭಾಆಸೇ ರವರು ಕರ್ನಾಟಕ ಮುಖ್ಯ ಕಾರ್ಯದರ್ಶಿ ಶ್ರೀ ಸುಭಾಷ್ ಚಂದ್ರ ಕುಂಟಿಯಾ ಭಾಆಸೇ ರವರಿಗೆ ಭಾರತ ಸರ್ಕಾರ ನೋಟು ರದ್ಧತಿ ಕುರಿತು ದೇಶದ ಆರ್ಥಿಕ ವ್ಯವಹಾರದ ವ್ಯವಸ್ಥೆಗೆ ಅರಿವು ಮೂಡಿಸುವ ಸರ್ಕಾರಿ ಯೋಜನೆಗಳ ಸೌಲಭ್ಯದ ಬಗ್ಗೆ ಜನರಿಗೆ ಅರಿವು ಮೂಡಿಸಬೇಕೆಂದು ಪತ್ರ ಬರೆದಿರುವುದನ್ನು ಪ್ರಕಟಿಸಿರುವುದು ಇನ್ನಿತರ ಲೇಖನಗಳು ಗ್ರಾಮೀಣ ಜನರಿಗೆ ಬಹಳ ಉಪಯುಕ್ತವಾಗಿವೆ.

**ಶ್ರೀ ಎ.ಅಬ್ದುಲ್ ನಬಿ,**
ಸೆಂಟ್ರಲ್ ಕೌನ್ಸಿಲ್ ಸದಸ್ಯರು, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಮಂಡಳಿ, ಭಾರತ ಸರ್ಕಾರ, ಶಿರಗುಪ್ಪ, ಬಳ್ಳಾರಿ 583121

ಜನವರಿ 2017ರ ಕರ್ನಾಟಕ ವಿಕಾಸ ಪತ್ರಿಕೆಯ ಮುಖಪುಟಗಳ ವರ್ಣರಂಜಿತ ಬಾವಚಿತ್ರಗಳು, ಸಭೆ, ಸಮಾರಂಭ, ತರಬೇತಿ ಶಿಬಿರ, ವಿವಿಧ ಲೇಖನ, ಯಶೋಗಾಥೆ, ಕವಿಯ(ಕ್ವ)ಪ್ರಶ್ನೆ?, ಕಾವ್ಯ ವಿಕಾಸ, ಸುತ್ತೋಲೆಗಳು ಓದುಗರನ್ನು ಆಕರ್ಷಿಸಿ ಆಸಕ್ತಿ, ಶ್ರದ್ಧೆ, ಉತ್ಸಾಹ, ಪ್ರೇರಣೆ ನೀಡಿವೆ. ಬಡ ರೈತರು ವಲಸೆ ಹೋಗದಂತೆ ಉದ್ಯೋಗದ ಕಾಮಗಾರಿ, ಗ್ರಾಮ ಸ್ವಚ್ಛತೆ ಕಾಮಗಾರಿ ಅರಣ್ಯಾಭಿವೃದ್ಧಿ ಕಾಮಗಾರಿ ವಿವಿಧ ಯೋಜನೆ ಕಾಮಗಾರಿಗಳು ಚಾಲನೆಗೊಂಡಿದ್ದರಿಂದ ಪತ್ರಿಕೆ ಓದಿದ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ರೈತರಿಗೆ ಅರಿವು ಜಾಗ್ರತೆ ಮೂಡಿ ಚೇತನ ಪ್ರೇರಣೆಗೊಂಡಿದ್ದಾರೆ. ಬರ ನಿವಾರಿಸುವ ಯೋಜನೆ ಕಾಮಗಾರಿಗಳ ಉಪಯೋಗದಿಂದ ರೈತರು ಸಂತೋಷಗೊಂಡಿದ್ದಾರೆ.

**ಶ್ರೀ ಮರಿದೇವರ ಸಿದ್ದಪ್ಪ**
ನಿವೃತ್ತ ಶಿಕ್ಷಕರು, ಚೌಡಾಪುರ ಅಂಚೆ,
ಕೂಡ್ಲಿಗಿ ತಾಲೂಕು, ಬಳ್ಳಾರಿ 583135.

# ಸಚಿವಾಲಯದಿಂದ ಸಂದೇಶ



**ಡಾ॥ ಎನ್. ನಾಗಾಂಬಿಕಾ ದೇವಿ**
ಭಾ.ಆ.ಸೇ
**ಸರ್ಕಾರದ ಪ್ರಧಾನ ಕಾರ್ಯದರ್ಶಿ**

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು.**

**ಪ್ರಿಯ ಬಂಧುಗಳೇ,**

ನಾಡಿನ ಜನ ಜಾನುವಾರು, ಪ್ರಾಣಿ-ಸಂಕುಲಗಳಿಗೆ ಕೆರೆ ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳು ನೀರಿನ ಮೂಲ ಸೆಲೆಯಾಗಿವೆ. ನಮ್ಮ ಪೂರ್ವಜರು ಕೆರೆ ಕಟ್ಟೆ ಮುಂತಾದ ನೀರಿನ ಮೂಲಾಧಾರಗಳನ್ನು ತಮ್ಮ ಜೀವನಾಡಿಗಳೆಂದೇ ಪರಿಗಣಿಸಿ ಜತನದಿಂದ ಸಂರಕ್ಷಿಸುವತ್ತ ಹೆಚ್ಚಿನ ಒತ್ತು ನೀಡುತ್ತಿದ್ದರು. ಬದಲಾದ ಹವಮಾನ ವೈಪರಿತ್ಯ, ಬರ, ಪ್ರಕೃತಿ ವಿಕೋಪ, ಆದುನಿಕ ಜೀವನ ಶೈಲಿಯ ನಗರೀಕರಣದ ಪರಿಣಾಮವಾಗಿ ನೀರಿನ ಜೀವ ಸೆಲೆಗಳಾಗಿದ್ದ ಕೆರೆ-ಕಟ್ಟೆ-ಕಲ್ಯಾಣಿಗಳು ಹೂಳು ತುಂಬಿಕೊಳ್ಳುತ್ತಾ ಅಥವಾ ಒತ್ತುವರಿಯಾಗಿ ಗತಿಸುತ್ತಾ ಬಂದು ರಾಜ್ಯಾದ್ಯಂತ ಅದರಲ್ಲೂ ಗ್ರಾಮೀಣ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಗೂ ತತ್ವಾರ ಬಂದೆರಗಿರುವ ಸಂಕಷ್ಟದ ಪರಿಸ್ಥಿತಿ ಎದುರಾಗಿದೆ.

ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆಯು ಬರದೆ ರಾಜ್ಯವು ಬರಗಾಲಕ್ಕೆ ಸಿಲುಕುತ್ತಾ ಬಂದಿದೆ. ಇದರಿಂದ ಶ್ರೀಸಾಮಾನ್ಯ ಕುಡಿಯುವ ನೀರು, ಕೂಲಿಗಾಗಿ ಉದ್ಯೋಗ ಮತ್ತು ಜಾನುವಾರುಗಳ ಮೇವಿನ ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದಾನೆ. ಇವರುಗಳ ಬವಣೆಗಳನ್ನು ಅರಿಯಲು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಚಿವ ಸಂಪುಟದ ಬರ ಪರಿಶೀಲನಾ ಉಪ ಸಮಿತಿಯು ರಾಜ್ಯಾದ್ಯಂತ ಬರ ಪರಿಶೀಲನೆ ಪ್ರವಾಸವನ್ನು ಕೈಗೊಂಡಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿಗಳು ಬರ ಪರಿಸ್ಥಿತಿ ಪರಿಶೀಲನಾ ಪ್ರವಾಸ ಸಂದರ್ಭದಲ್ಲಿ ತಕ್ಷಣವೇ ನಿರ್ಧಾರ ಕೈಗೊಂಡು, ಜೀವ ಸೆಲೆಗಳುಳ್ಳ ಗ್ರಾಮೀಣ ಪ್ರದೇಶಗಳ ಕೆರೆಗಳನ್ನು ಅದರಲ್ಲೂ ಪ್ರಮುಖವಾಗಿ ರಾಜ್ಯದ ಬರ ಪಿಡಿತ ತಾಲ್ಲೂಕುಗಳಲ್ಲಿ ಕೆರೆಗಳ ಪುನಶ್ಚೇತನ ಕಾರ್ಯಕ್ರಮವಾದ "ಕೆರೆ ಸಂಜೀವಿನಿ" ಕಾರ್ಯಕ್ರಮವನ್ನು ತತಕ್ಷಣದಿಂದ ಜಾರಿಗೆ ತಂದು ಕೆರೆಗಳ ಪುನಶ್ಚೆತನಕ್ಕೆ ಮೊದಲ ಆದ್ಯತೆ ನೀಡಿರುತ್ತಾರೆ.

ಅಂತೆಯೇ ಈಗಾಗಲೇ ರಾಜ್ಯದ ಉತ್ತರ ಒಳನಾಡಿನ 12 ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರಪೀಡಿತ ಪ್ರದೇಶಗಳೆಂದು ಘೋಷಿಸಿದ 62 ತಾಲ್ಲೂಕಗಳಲ್ಲಿ ತಲಾ ರೂ. 50.00 ಲಕ್ಷಗಳ ಅನುದಾನದಲ್ಲಿ 410 ಕೆರೆಗಳಲ್ಲಿ ಹಾಗೂ ಇತರೆ 75 ತಾಲ್ಲೂಕುಗಳಲ್ಲಿ ತಲಾ ರೂ. 25.00 ಲಕ್ಷಗಳ ಅನುದಾನದಲ್ಲಿ 415 ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ಇಲಾಖೆಯಿಂದ ಅನುಷ್ಠಾನಗೊಳಿಸಿ ಕೆರೆಗಳ ನೀರಿನ ಸಂಗ್ರಹಣ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಜೆ.ಸಿ.ಬಿ

ಯಂತಹ ಯಂತ್ರೋಪಕರಣಗಳನ್ನು ಬಳಸಿ ತ್ವರಿತವಾಗಿ ಹೂಳೆತ್ತುವ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ. ಈಗಾಗಲೇ 474 ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ರೂ.25.00ಕೋಟಿಗಳ ಅನುದಾನದ ಮಿತಿಯಲ್ಲಿ ಪೂರ್ಣಗೊಳಿಸಲಾಗಿದೆ.

ಆದರೂ ರಾಜ್ಯದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ಬರಗಾಲದ ತೀವ್ರತೆ ವಿಸ್ತರಿಸುತ್ತಲೇ ಇದ್ದ ಪರಿಣಾಮವಾಗಿ ಸರ್ಕಾರವು **"ಕೆರೆ ಸಂಜೀವಿನಿ – 2"** ನೇ ಹಂತದಲ್ಲಿ ರಾಜ್ಯದ ಬರಪೀಡಿತ 139 ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮಕ್ಕೆ ಮತ್ತೊಮ್ಮೆ ಚಾಲನೆ ನೀಡಲಾಗಿದೆ. ಅಲ್ಲದೆ, ಕೆರೆ ಸಂಜೀವಿನಿ–1ರಡಿಯಲ್ಲಿ ಆಯ್ಕೆಯಾಗಿ ಮಳೆಯ ಕಾರಣ ಸ್ಥಗಿತಗೊಂಡಿದ್ದ ಕಾಮಗಾರಿಗಳನ್ನು ಸಹ ಪೂರ್ಣಗೊಳಿಸಲು ಅವಕಾಶ ಕಲ್ಪಿಸಿದೆ.

ಕಾರ್ಯಕ್ರಮದ ಯಶಸ್ಸಿಗೆ ಯೋಜನೆಯ ಸಂಪೂರ್ಣ ವಿವರಗಳನ್ನು ಈ ಪುಸ್ತಕದಲ್ಲಿ ನೀಡಿ ಕೆರೆಗಳ ಹೂಳೆತ್ತಿ ಕೆರೆಗಳನ್ನು ಸಂರಕ್ಷಿಸುವ ಕೆರೆ ಸಂಜೀವಿನಿ ಕಾರ್ಯಕ್ರಮದಡಿಯಲ್ಲಿ ಆಯ್ಕೆಯಾಗಿರುವ ಕೆರೆಗಳ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳಲು ಸೂಚಿಸಿದೆ. ಈ ಮಹತ್ವದ ಕಾರ್ಯದಲ್ಲಿ ತಾವೆಲ್ಲರೂ ಸಕ್ರಿಯವಾಗಿ ಭಾಗವಹಿಸಿ ಸಕಾಲದಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ ಭವಿಷ್ಯದಲ್ಲಿ ಕೆರೆಗಳು ನೀರನ್ನು ಸಂಗ್ರಹಿಸಿಕೊಳ್ಳುವ ಮತ್ತು ಅಂತರ್ಜಲವನ್ನು ಹಿಡಿದ್ದಿಟ್ಟುಕೊಳ್ಳುವ ಈ ಕೆರೆ ಸಂಜೀವಿನಿ ಕಾರ್ಯಕ್ರಮದ ಕಾಮಗಾರಿಗಳು ಜನರಿಗೆ ಉಪಯುಕ್ತವಾಗುವಂತೆ ಮಾಡಲು ಸೂಚಿಸಬಯಸುತ್ತೇನೆ.

(ಡಾ॥ ಎನ್. ನಾಗಾಂಬಿಕಾ ದೇವಿ)

ವರದಿ


# ಗ್ರಾಮೀಣ ಪ್ರದೇಶದಲ್ಲಿ ನಗದು ರಹಿತ ಹಣಕಾಸು ವಹಿವಾಟಿನ ಬಗ್ಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳು



**ಡಿ. ಪ್ರಾಣೇಶ್ ರಾವ್**

ದಿನಾಂಕ 21-22 ಡಿಸೆಂಬರ್ 2016ರಂದು ಎನ್.ಐ.ಆರ್.ಡಿ ಹೈದರಾಬಾದ್‌ನಲ್ಲಿ ತರಬೇತಿ ಪಡೆದ ತಜ್ಞ ಸಂಪನ್ಮೂಲ ವ್ಯಕ್ತಿಗಳು ಅಧಿವೇಶನಗಳನ್ನು ವೇಳಾಪಟ್ಟಿಯ ಪ್ರಕಾರ ನಿರ್ವಹಿಸಿ ತರಬೇತಿಯಲ್ಲಿ ಹಾಜರಿದ್ದವರೊಂದಿಗೆ ಪ್ರಾಯೋಗಿಕ ಚಾಲನೆಯನ್ನು ಪ್ರಾತ್ಯಕ್ಷಿತೆಯನ್ನು ಮಾಡಲಾಯಿತು.

ಭಾರತ ಸರ್ಕಾರ ದಿನಾಂಕ 08/11/2016ರಂದು ರೂ.1,000 ಮತ್ತು ರೂ.500 ಮುಖಬೆಲೆಯ ನೋಟುಗಳನ್ನು ಹಿಂಪಡೆದಿರುವ ಹಿನ್ನೆಲೆಯಲ್ಲಿ ದೇಶದಾದ್ಯಂತ ನಗದು ರಹಿತ ವ್ಯವಹಾರಗಳ ಉತ್ತೇಜನ ನೀಡಲು ಭಾರತ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಬಗ್ಗೆ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಡಿ ಬರುವ ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಅರಿವು ಮೂಡಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು,ರವರ ವತಿಯಿಂದ ಹಮ್ಮಿಕೊಳ್ಳಲು ಸರ್ಕಾರಿ ಸುತ್ತೋಲೆ ಸಂಖ್ಯೆ: ಗ್ರಾಅಪ/1142/ ಗ್ರಾಪಂಅ/2016 ಬೆಂಗಳೂರು, ದಿನಾಂಕ 19/12/2016ರಂದು ಸಂಸ್ಥೆಗೆ ಆದೇಶ ರವಾನಿಸಿದೆ.




ಈ ಕಾರ್ಯಕ್ರಮಗಳನ್ನು ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು, ರವರ ನಿರ್ದೇಶನದಂತೆ ಕೈಗೊಂಡಿದ್ದು, ಸದರಿ ತರಬೇತಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

## 1. ರಾಷ್ಟ್ರ ಮಟ್ಟದ ತರಬೇತುದಾರರ ತರಬೇತಿ – ಎನ್.ಐ.ಆರ್.ಡಿ., ಹೈದರಾಬಾದ್ – 21 ಮತ್ತು 22 ಡಿಸೆಂಬರ್ 2016

ರಾಜ್ಯ ಸರ್ಕಾರವು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರಿನಲ್ಲಿ ಬೋಧಕರಾಗಿ

ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು,



ಕಾರ್ಯನಿರ್ವಹಿಸುತ್ತಿರುವರು ಇಬ್ಬರು ಬೋಧಕರು ಶ್ರೀ. ಖಾನ್ ಪರವೇಜ್ ಮತ್ತು ಶ್ರೀ.ಕೆ.ಆರ್. ಶಂಕರ್,ರವರನ್ನು ಎನ್.ಐ. ಆರ್. ಡಿ. ಹೈದರಾಬಾದ್‌ನಲ್ಲಿ ಆಯೋಜಿಸಲಾದ ಗ್ರಾಮೀಣ ಪ್ರದೇಶದಲ್ಲಿ ನಗದು ರಹಿತ ಹಣಕಾಸು ವಹಿವಾಟಿನ ಕುರಿರತು 21 ಮತ್ತು 22 ಡಿಸೆಂಬರ್ 2016ರಂದು ತರಬೇತುದಾರರ ತರಬೇತಿಗೆ ನಿಯೋಜಿಸಿ, ಸದರಿಯವರು ತರಬೇತಿಯಲ್ಲಿ ಭಾಗವಹಿಸಿದರು.

### 2. ರಾಜ್ಯ ಮಟ್ಟದ ತರಬೇತುದಾರರ ತರಬೇತಿ – ದಿನಾಂಕ 24/12/2016

ಸ್ಥಳ: ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು

ಸರ್ಕಾರದ ಆದೇಶದ ಪ್ರಕಾರ ದಿನಾಂಕ 21/12/2016ರಂದು ರಾಜ್ಯ 30 ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತರಬೇತಿಗೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳನ್ನು ನಿಯೋಜಿಸಲು ಕೋರಿದ್ದು, ಈ ಪ್ರಯುಕ್ತ ದಿನಾಂಕ 24/12/2016ರಂದು, ಒಟ್ಟು 44 ಶಿಬಿರಾರ್ಥಿಗಳಿಗೆ ತರಬೇತುದಾರರ ತರಬೇತಿಯನ್ನು ನೀಡಲಾಯಿತು. ಸದರಿ ತರಬೇತಿಯ ವೇಳಾಪಟ್ಟಿ ಯನ್ನು ನಿರ್ದೇಶಕ ರವರಾದ ಶ್ರೀ. ಡಿ.ಪ್ರಾಣೇಶ್ ರಾವ್, ರವರು ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ನಿರ್ದೇಶಕರು ಪಂ.ರಾಜ್–1 ರವರೊಂದಿಗೆ ಸಮಾಲೋಚಿಸಿ ಅಂತಿಮಗೊಳಿಸಿದ ವೇಳಾಪಟ್ಟಿ ಯನ್ನು ವರದಿಗೆ ಲಗತ್ತಿಸಲಾಗಿದೆ.

ಸದರಿ ತರಬೇತಿಯಲ್ಲಿ ಸಂಸ್ಥೆಯ ನಿರ್ದೇಶಕರು ಹಾಗೂ ನಿರ್ದೇಶಕರು ಪಂ.ರಾಜ್ – 1 ರವರು ಭಾಗವಹಿಸಿದ್ದು, ನಗದು ರಹಿತ ಹಣಕಾಸಿನ

| ದಿನಾಂಕ | ಕಾರ್ಯಕ್ರಮ | ಸ್ಥಳ | ಭಾಗವಹಿಸುವವರು |
|---|---|---|---|
| 20–21/12/2016 | ರಾಷ್ಟ್ರ ಮಟ್ಟದ ತರಬೇತುದಾರರ ತರಬೇತಿ | ಎನ್.ಐ.ಆರ್.ಡಿ, ಹೈದರಾಬಾದ್ | ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು , ರವರು ಎನ್.ಐ.ಆರ್.ಡಿ. ಹೈದರಾಬಾದ್ ನಲ್ಲಿ ಆಯೋಜಿಸಲಾದ ತರಬೇತುದಾರರ ತರಬೇತಿಗೆ ಇಬ್ಬರು ಬೋ ಧಕರು ಶ್ರೀ.ಖಾನ್ ಪರವೇಜ್ ಮತ್ತು ಶ್ರೀ.ಕೆ.ಆರ್.ಶಂಕರ್, ನಿಯೋಜಿಸಿ, ಸದರಿಯವರು 21 ಮತ್ತು 22 ಡಿಸೆಂಬರ್ 2016ರಂದು ಭಾಗವಹಿಸಿದರು. |
| 24/12/2016 | ತರಬೇತುದಾರರ ತರಬೇತಿ | ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು | ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು, ಬೋಧಕರು, ಅ.ನ.ಸಾ.ರಾ.ಗ್ರಾ ಮತ್ತು ಪಂ.ರಾಜ್ ಸಂಸ್ಥೆ |
| 27/12/2016 | ಸ್ಯಾಟ್ ಕಾಂ ಮುಖಾಂತರ ತರಬೇತಿ – ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರ | ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರ | ಎಲ್ಲಾ ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಎಲ್ಲಾ ಸದಸ್ಯರು, ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಎಲ್ಲಾ ಬ್ಯಾಂಕ್‌ಗಳ ವ್ಯವಸ್ಥಾಪಕರುಗಳು |
| 28/12/2016 | ಸ್ಯಾಟ್ ಕಾಂ ಮುಖಾಂತರ ತರಬೇತಿ – ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರ | ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರ | ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಎಲ್ಲಾ ಬ್ಯಾಂಕ್‌ಗಳ ವ್ಯವಸ್ಥಾಪಕರುಗಳು |



ವಹಿವಾಟಿಗೆ ಸಂಬಂಧಿಸಿದಂತೆ ಪ್ರಚಲಿತ ಅವಶ್ಯಕತೆಗಳು ಹಾಗೂ ಅನಾಣ್ಯೀಕರಣದ ಹಿನ್ನಲೆಯಲ್ಲಿ ನಗದು ರಹಿತ ವಹಿವಾಟುಗಳ ಬೇಡಿಕೆ ಕುರಿತು ವಿಶ್ಲೇಷಿಸಿದರು ಹಾಗೂ ತರಬೇತುದಾರರಿಗೆ ಇದನ್ನು ಸರ್ಕಾರದ ಆದೇಶದ ಪ್ರಕಾರ ತಮ್ಮ ತಮ್ಮ ಜಿಲ್ಲೆಯಲ್ಲಿ ದಿನಾಂಕ 26/12/2016ರಂದು ತರಬೇತಿಗಳನ್ನು ಆಯೋಜಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಿದರು.

ನಗದು ರಹಿತ ಹಣಕಾಸಿನ ವಹಿವಾಟುಗಳಿಗೆ ಸಂಬಂಧಿಸಿದ ವಿದ್ಯುನ್ಮಾನಗಳನ್ನು ಪಟ್ಟಿ ಮಾಡಿ ಪ್ರತ್ಯೇಕವಾಗಿ ಅವುಗಳ ಉಪಯೋಗ ಮತ್ತು ಚಾಲನೆಯಲ್ಲಿ ತರುವ ವಿಧಾನಗಳನ್ನು ದಿನಾಂಕ 21–22 ಡಿಸೆಂಬರ್ 2016ರಂದು ಎನ್.ಐ.ಆರ್.ಡಿ ಹೈದರಾಬಾದ್‌ನಲ್ಲಿ ತರಬೇತಿ ಪಡೆದ ತಜ್ಞ ಸಂಪನ್ಮೂಲ ವ್ಯಕ್ತಿಗಳು ಅಧಿವೇಶನಗಳನ್ನು ವೇಳಾಪಟ್ಟಿಯ ಪ್ರಕಾರ ನಿರ್ವಹಿಸಿ ತರಬೇತಿಯಲ್ಲಿ ಹಾಜರಿದ್ದವರೊಂದಿಗೆ ಪ್ರಾಯೋಗಿಕ ಚಾಲನೆಯನ್ನು ಪ್ರಾತ್ಯಕ್ಷಿತೆಯನ್ನು ಮಾಡಲಾಯಿತು.

ಸ್ಥಳೀಯ ಬ್ಯಾಂಕಿನ ವ್ಯವಸ್ಥಾಪಕರುಗಳನ್ನು ಆಹ್ವಾನಿಸಿ ನಗದು ರಹಿತ ಹಣಕಾಸು ವಹಿವಾಟುಗಳಲ್ಲಿ ಕ್ಷೇತ್ರೀಯ ಮಟ್ಟದ

ತರಬೇತಿಯಲ್ಲಿ ಜಿಲ್ಲಾ ಮಟ್ಟದ ತರಬೇತುದಾರರಿಗೆ ತರಬೇತಿ ನೀಡುವ ವಿಧಾನಗಳು ಹಾಗೂ ವಿದ್ಯುನ್ಮಗಳ ಕುರಿತು ನಿರ್ದೇಶನಗಳನ್ನು ನೀಡಿ ತರಬೇತಿಯನ್ನು ಅಂತಿಮಗೊಳಿಸಲಾಯಿತು.

ಸದರಿ ತರಬೇತಿಯಲ್ಲಿ ಸರ್ಕಾರದ ನಿರ್ದೇಶನದಂತೆ ಸಂಸ್ಥೆಯ ಹಾಗೂ ಜಿಲ್ಲಾ ಮಟ್ಟದ ಶಿಬಿರಾರ್ಥಿ ಗಳು ಹಾಜರಾಗಿದ್ದು, ಸದರಿ ಹಾಜರಾತಿಯ ವಹಿಯನ್ನು ವರದಿಗೆ ಲಗತ್ತಿಸಿದೆ.

### ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಗಳು

ಸದರಿ ತರಬೇತಿಗಳಿಗೆ ಸಂಬಂಧಕಪಟ್ಟಂತೆ ದಿನಾಂಕ 23–26/12/2016ರವರೆಗೆ ಸದರಿ ಕಾರ್ಯಕ್ರಮಗಳ ಕುರಿತು ಈ ಕೆಳಗಿನ ಕ್ರಮಗಳನ್ನು ನಿರ್ವಹಿಸಲಾಯಿತು.

1. ರಾಜ್ಯದ 30 ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತರಬೇತಿಗೆ ಸಂಬಂಧಪಟ್ಟವರನ್ನು ನಿಯೋಜಿಸಲು ಪತ್ರವನ್ನು ಸಿದ್ಧಪಡಿಸಿ ಉಪ ನಿರ್ದೇಶಕರ ಸಹಿಯೊಂದಿಗೆ ಇ–ಮೇಲ್ ಮುಖಾಂತರ ರವಾನಿಸಲಾಯಿತು.
2. ಸದರಿ ತರಬೇತಿಗಳಿಗೆ ಸಂಬಂಧಪಟ್ಟಂತೆ ಸುತ್ತೋಲೆಯನ್ನು ಸಿದ್ಧಪಡಿಸಿ 175 ತಾಲ್ಲೂಕು ಪಂಚಾಯತಿಗಳಿಗೆ ಇ–ಮೇಲ್ ಮುಖಾಂತರ ರವಾನಿಸಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡಲಾಯಿತು.
3. ತರಬೇತಿಗಳ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಅನುಮೋದನೆ ಪಡೆದು ಸಂಬಂಧಪಟ್ಟ ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಲಾಯಿತು.. ಸದರಿ ವೇಳಾಪಟ್ಟಿಯನ್ನು ವರದಿಗೆ ಲಗತ್ತಿಸಿದೆ

| ದಿನಾಂಕ | ಕಾರ್ಯಕ್ರಮ | ಭಾಗವಹಿಸುವವರು | ಸ್ಥಳ | ವ್ಯವಸ್ಥೆ |
|---|---|---|---|---|
| 27/12/2016 | ಸ್ಯಾಟ್ ಕಾಂ ಮುಖಾಂತರ ತರಬೇತಿ – ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರ | ಎಲ್ಲಾ ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಎಲ್ಲಾ ಸದಸ್ಯರು, ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಎಲ್ಲಾ ಬ್ಯಾಂಕ್‌ಗಳ ವ್ಯವಸ್ಥಾಪಕರುಗಳು | ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರ | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ |

4. ದಿನಾಂಕ 27/12/2016ರಂದು ಬೆಳ್ಳಗ್ಗೆ 10.40 ಕ್ಕೆ ಮಾನ್ಯ ನಿರ್ದೇಶಕರು ಸಂಸ್ಥೆಯ ಮಂಗಳೂರು ಉಪ ಸ್ಟುಡಿಯೋದಿಂದ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತಾನಾಡಿದ್ದು ಈ ಕುರಿತು ಮಂಗಳೂರು ಉಪ ಸ್ಟುಡಿಯೋದಿಂದ ಮೈಸೂರು ಸ್ಟುಡಿಯೋಕ್ಕೆ ನೇರ ಸಂಪರ್ಕ ಮಾಡಲಾಯಿತು.

5. ರಾಜ್ಯದ 175 ಸ್ವೀಕೃತಿ ಕೇಂದ್ರಗಳು ಚಾಲ್ತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಲಾಯಿತು.

ದಿನಾಂಕ 27/12/2016ರಂದು ಆಯೋಜಿಸಲಾದ ತರಬೇತಿಯಲ್ಲಿ ಮಾನ್ಯ ನಿರ್ದೇಶಕರು ಶಿಬಿರಾರ್ಥಿಗಳನ್ನು ಉದ್ದೇಶಿಸಿದ ತರಬೇತಿಯ ಉದ್ದೇಶಗಳು ಹಾಗೂ ಅವಶ್ಯಕತೆಗಳ ಕುರಿತು ಪರಿಣಾಮಕಾರಿಯಾಗಿ ಅಧಿವೇಶನ ನಡೆಸಿದರು. ಈ ತರಬೇತಿಯಲ್ಲಿ ಕಿರು ಚಿತ್ರಗಳನ್ನು ಉಪಯೋಗಿಸಿ ಬೇರೆ ಬೇರೆ ವಿದ್ಯುನ್ಮಾನಗಳ ಬಗ್ಗೆ ವಿವರಿಸಲಾಯಿತು. ಮುಂದುವರೆದು ವಿಜಯಾ ಬ್ಯಾಂಕ್, ರವರು ಡಿಜಿಟಲ್ ಹಳ್ಳಿಗಳನ್ನು ಸೃಜನೆಗೊಳಿಸಿರುವುದರಿಂದ ಸದರಿ ಬ್ಯಾಂಕಿನ ವ್ಯವಸ್ಥಾಪಕರನ್ನು ಆಹ್ವಾನಿಸಿ ಸದರಿ ವಿಷಯವನ್ನು ಶಿಬಿರಾರ್ಥಿಗಳೀಗೆ ತಿಳಿಸಿ ನಗದು ರಹಿತ ವ್ಯವಹಾರ ಸಾಧ್ಯವೆಂದು ಪ್ರೇರೇಪಿಸಲಾಯಿತು.

ಸದರಿ ತರಬೇತಿಯ ತಜ್ಞ ಸಂಪನ್ಮೂಲ ವ್ಯಕ್ತಿಗಳು ಬೇರೆ ಬೇರೆ ವಿದ್ಯುನ್ಮಾನಗಳನ್ನು ಚಾಲನೆಯಲ್ಲಿ ತರುವ ಪ್ರಾತ್ಯಕ್ಷಿತೆಯನ್ನು ಬಿಡಿ ಬಿಡಿಯಾಗಿ ತಿಳಿಸಿರರು. ಶಿಬಿರಾಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಇದರಲ್ಲಿ ಉತ್ತಮ ಪ್ರಕ್ರಿಯೆ ಮೂಡಿಬಂದಿದ್ದು, ಸದರಿ ಪ್ರಶ್ನೋತ್ತರ ವೇಳೆಯಲ್ಲಿ ನೈಪುಣ್ಯತೆ ಹೊಂದಿದ ಬ್ಯಾಂಕ್ ಅಧಿಕಾರಿಗಳನ್ನು ಶಿಬಿರಾರ್ಥಿಗಳಿಂದ ಬರುವ ಪ್ರಶ್ನೆಗಳಿಗೆ ಪರಿಣಾಮಕಾರಿಯಾಗಿ ನೀಡಲಾಯಿತು.

ಪ್ರತಿ ಸಾಮರ್ಥ್ಯ ಸೌಧಗಳಲ್ಲಿ 70 ಜನರಿಗೆ ಅವಕಾಶ ಜನರಿಗೆ ಅವಕಾಶ ಕಲ್ಪಿಸಲಾಗಿದ್ದು, ಸದರಿ ತರಬೇತಿಯಲ್ಲಿ ಒಟ್ಟು ಹಾಜರಾತಿ 12320 ನಿರೀಕ್ಷಿಸಿದೆ. ಸಾಮಾನ್ಯವಾಗಿ ತೃಪ್ತಿಕರ ಹಾಜರಾತಿಯನ್ನು ನಿರೀಕ್ಷಿಸಲಾಗಿದ್ದು, ಹಾಜರಾತಿ ಪಡೆಯುವ ಪ್ರಕ್ರಿಯೆಯನ್ನು ಜಾರಿಯಲ್ಲಿದ್ದು, ಸದರಿ ಹಾಜರಾತಿಯ ವಿವರಗಳನ್ನು ವ್ಯಾಟ್ಸ್ ಆಪ್ ಮುಖಾಂತರ ಪಡೆಯಲಾಗಿ ಕಾರ್ಯಕ್ರಮದಲ್ಲಿ ಪ್ರಸರಣಗೊಳಿಸ ಲಾಗಿದೆ.

ದಿನಾಂಕ 28/12/2016ರಂದು ಆಯೋಜಿಸಲಾದ ತರಬೇತಿಯಲ್ಲಿ ಮಾನ್ಯ ನಿರ್ದೇಶಕರು



ಶಿಬಿರಾರ್ಥಿಗಳನ್ನು ಉದ್ದೇಶಿಸಿದ ತರಬೇತಿಯ ಉದ್ದೇಶಗಳು ಹಾಗೂ ಅವಶ್ಯಕತೆಗಳ ಕುರಿತು ಪರಿಣಾಮಕಾರಿಯಾಗಿ ಅಧಿವೇಶನ ನಡೆಸಿದರು. ಈ ತರಬೇತಿಯಲ್ಲಿ ಕಿರು ಚಿತ್ರಗಳನ್ನು ಉಪಯೋಗಿಸಿ ಬೇರೆ ಬೇರೆ ವಿದ್ಯುನ್ಮಾನಗಳ ಬಗ್ಗೆ ವಿವರಿಸಲಾಯಿತು. ಮುಂದುವರೆದು ವಿಜಯಾಬ್ಯಾಂಕ್, ರವರು ಡಿಜಿಟಲ್ ಹಳ್ಳಿಗಳನ್ನು ಸೃಜನೆಗೊಳಿಸಿರುವುದರಿಂದ ಸದರಿ ಬ್ಯಾಂಕಿನ ವ್ಯವಸ್ಥಾಪಕರನ್ನು ಆಹ್ವಾನಿಸಿ ಸದರಿ

| ದಿನಾಂಕ | ಕಾರ್ಯಕ್ರಮ | ಭಾಗವಹಿಸುವವರು | ಸ್ಥಳ | ವ್ಯವಸ್ಥೆ |
|---|---|---|---|---|
| 28/12/2016 | ಸ್ಯಾಟ್ ಕಾಂ ಮುಖಾಂತರ ತರಬೇತಿ – ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರ | ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಎಲ್ಲಾ ಬ್ಯಾಂಕ್‌ಗಳ ವ್ಯವಸ್ಥಾಪಕರುಗಳು | ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರ | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ |

ವಿಷಯವನ್ನು ಶಿಬಿರಾರ್ಥಿಗಳೀಗೆ ತಿಳಿಸಿ ನಗದು ರಹಿತ ವ್ಯವಹಾರ ಸಾಧ್ಯವೆಂದು ಪ್ರೇರೇಪಿಸಲಾಯಿತು.

ಸದರಿ ತರಬೇತಿಯ ತಜ್ಞ ಸಂಪನ್ಮೂಲ ವ್ಯಕ್ತಿಗಳು ಬೇರೆ ಬೇರೆ ವಿದ್ಯುನ್ಮಾನಗಳನ್ನು ಚಾಲನೆಯಲ್ಲಿ ತರುವ ಪ್ರಾತ್ಯಕ್ಷಿತೆಯನ್ನು ಬಿಡಿ ಬಿಡಿಯಾಗಿ ತಿಳಿಸಿರರು. ಶಿಬಿರಾಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಇದರಲ್ಲಿ ಉತ್ತಮ ಪ್ರಕ್ರಿಯೆ ಮೂಡಿಬಂದಿದ್ದು, ಸದರಿ ಪ್ರಶ್ನೋತ್ತರ ವೇಳೆಯಲ್ಲಿ ನೈಪುಣ್ಯತೆ ಹೊಂದಿದ ಬ್ಯಾಂಕ್ ಅಧಿಕಾರಿಗಳನ್ನು ಶಿಬಿರಾರ್ಥಿಗಳಿಂದ ಬರುವ ಪ್ರಶ್ನೆಗಳಿಗೆ ಪರಿಣಾಮಕಾರಿಯಾಗಿ ನೀಡಲಾಯಿತು.

ಪ್ರತಿ ಸಾಮರ್ಥ್ಯ ಸೌಧಗಳಲ್ಲಿ ಒಂದು ಗ್ರಾಮ ಪಂಚಾಯತಿಗೆ ತಲಾ ಮೂರರಂತೆ ಒಟ್ಟು 18066 ಜನರಿಗೆ ಅವಕಾಶ ಜನರಿಗೆ ಅವಕಾಶ ಕಲ್ಪಿಸಲಾಗಿದ್ದು, ಸಾಮಾನ್ಯವಾಗಿ ತೃಪ್ತಿಕರ ಹಾಜರಾತಿಯನ್ನು ನಿರೀಕ್ಷಿಸಲಾಗಿದ್ದು, ಹಾಜರಾತಿ ಪಡೆಯುವ ಪ್ರಕ್ರಿಯೆಯನ್ನು ಜಾರಿಯಲ್ಲಿದ್ದು, ಸದರಿ ಹಾಜರಾತಿಯ ವಿವರಗಳನ್ನು ವ್ಯಾಟ್ಸ್ ಆಪ್ ಮುಖಾಂತರ ಪಡೆಯಲಾಗಿ ಕಾರ್ಯಕ್ರಮದಲ್ಲಿ ಪ್ರಸರಣಗೊಳಿಸಲಾಗಿದೆ.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು, ಇವರು ಆದೇಶಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಸಂಸ್ಥೆಯು ಯಶಸ್ವಿಯಾಗಿ ಪೂರೈಸಿರುತ್ತದೆ:

1. ಸರ್ಕಾರದ ಆದೇಶದಂತೆ ಸಂಸ್ಥೆಯ ಇಬ್ಬರು ಬೋಧಕರನ್ನು ರಾಷ್ಟ್ರ ಮಟ್ಟದ ತರಬೇತುದಾರರ ತರಬೇತಿಗೆ ದಿನಾಂಕ 21–22 ಡಿಸೆಂಬರ್ 2016ಗಳಂದು ಎನ್.ಐ.ಆರ್.ಡಿ ಹೈದಾರಾಬಾದ್ ನಿಯೋಜಿಸಲಾಯಿತು.

2. ದಿನಾಂಕ 24/12/2016, ರಾಜ್ಯ ಮಟ್ಟದ



ತರಬೇತುದಾರರ ತರಬೇತಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರಿನಲ್ಲಿ ಆಯೋಜಿಸಲಾಯಿತು.

3. ದಿನಾಂಕ 27/12/2016 ಸ್ಯಾಟ್ ಕಾಂ ಮುಖಾಂತರ ತರಬೇತಿ – ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರಗಳಲ್ಲಿ ಎಲ್ಲಾ ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಎಲ್ಲಾ ಸದಸ್ಯರು, ಕಾರ್ಯ ನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಎಲ್ಲಾ ಬ್ಯಾಂಕ್‌ಗಳ ವ್ಯವಸ್ಥಾಪಕರುಗಳ ಉಪಗ್ರಹ ಆಧಾರಿತ ಕಾರ್ಯಕ್ರಮವನ್ನು ಬೆ.10.30 ರಿಂದ ಸಾ.05.30 ರವರೆಗೆ ಆಯೋಜಿಸಲಾಯಿತು.

4. ದಿನಾಂಕ 28/12/2016 ಸ್ಯಾಟ್ ಕಾಂ ಮುಖಾಂತರ ತರಬೇತಿ – ತಾಲ್ಲೂಕು ಪಂಚಾಯತ್ ಸ್ಯಾಟ್ ಕಾಂ ಕೇಂದ್ರಗಳಲ್ಲಿ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಎಲ್ಲಾ ಬ್ಯಾಂಕ್‌ಗಳ ವ್ಯವಸ್ಥಾಪಕರುಗಳು ಉಪಗ್ರಹ ಆಧಾರಿತ ಕಾರ್ಯಕ್ರಮವನ್ನು ಬೆಳಗ್ಗೆ 10.30 ರಿಂದ ಸಾಯಂಕಾಲ 05.30 ರವರೆಗೆ ಆಯೋಜಿಸ ಲಾಯಿತು.

**ವರದಿ**

# ಪಂಚಾಯತ್‌ರಾಜ್ ಮಾನ್ಯ ಸಚಿವರಾದ ಶ್ರೀ ಎಚ್. ಕೆ. ಪಾಟೀಲ್‌ರವರಿಂದ ನೈಸರ್ಗಿಕ ಸಂಪನ್ಮೂಲ ಅತಿಬಳಕೆ ಕಡಿವಾಣಕ್ಕೆ ಕರೆ:

– ಗಂಗಾಧರ್ ಸ್ವಾಮಿ
– ನಾಗೇಂದ್ರ ಕುಮಾರ ಜೆ.ಬಿ

ಸತತವಾಗಿ ಎದುರಾಗುತ್ತಿರುವ ಬರಗಾಲದಿಂದ ನೈಸರ್ಗಿಕ ಸಂಪನ್ಮೂಲದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದ್ದು, ನೈಸರ್ಗಿಕ ಸಂಪನ್ಮೂಲ ಅತಿಬಳಕೆಗೆ ಕಡಿವಾಣ ಹಾಕಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಾನ್ಯ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್‌ರವರು ಕರೆ ನೀಡಿದರು. ಅವರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಆಯೋಜಿಸಿದ್ದ ರಾಜ್ಯ ಮಟ್ಟದ ಜಲ ಸಂರಕ್ಷಣಾ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.




> ನೈಸರ್ಗಿಕ ಸಂಪನ್ಮೂಲ ಅತಿಬಳಕೆ ಕಡಿಮೆ ಗೊಳಿಸಬೇಕಾದರೆ ಅವುಗಳ ಪುನರುಜ್ಜೀವನ ಅವಶ್ಯಕತೆ ಇದೆ. ರಾಜ್ಯ ಸರ್ಕಾರವು ಪ್ರತಿ ಗ್ರಾಮ ಪಂಚಾಯಿತಿಗೊಂದು ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಸೂಚನೆ ನೀಡಿದೆ.

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯವು ಸಮಗ್ರ ಜಲಾನಯನ ಅಭಿವೃದ್ಧಿ ಯೋಜನೆ (ಐಡಬ್ಲ್ಯೂಎಮ್‌ಪಿ) ಮತ್ತು ಪ್ರಧಾನ್ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಸಹಯೋಗದಲ್ಲಿ ದಿ:28.12.2016 ರಂದು ರಾಜ್ಯಮಟ್ಟದ ಜಲ ಸಂರಕ್ಷಣಾ ಕಾರ್ಯಾಗಾರವನ್ನು ಆಯೋಜಿಸಿತ್ತು. ಕಾರ್ಯಾಗಾರವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಾನ್ಯ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್‌ರವರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ರಾಜ್ಯದಲ್ಲಿ ಉಂಟಾಗಿರುವ ಬರಗಾಲದಿಂದ ನೈಸರ್ಗಿಕ ಸಂಪನ್ಮೂಲ ಬಳಕೆ ಹೆಚ್ಚಾಗುತ್ತಿದೆ. ಇದನ್ನು ಪುನರುಜ್ಜೀವನಗೊಳಿಸುವ ಅಗತ್ಯತೆ ಕಂಡುಬಂದಿದೆ. ಈ ಹಿನ್ನಲೆಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಜಲಸಂರಕ್ಷಣಾ ಕಾರ್ಯಾಗಾರವನ್ನು ಆಯೋಜಿಸಿರುವುದು ಪ್ರಶಂಸನೀಯ.

ಜಂಟಿ ನಿರ್ದೇಶಕರು(ತೋಟಗಾರಿಕೆ) / ರಾಜ್ಯ ಐಇಸಿ ಸಂಯೋಜಕರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸಚಿವ ಸಂಪುಟ ಸಮಿತಿಗಳು ರಾಜ್ಯಾದ್ಯಂತ ಬರಗಾಲದ ಜಿಲ್ಲೆಗಳ ಪ್ರವಾಸ ಕೈಗೊಳ್ಳುತ್ತಿದ್ದು, ಅದರಲ್ಲಿ ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಬರಗಾಲ ವೀಕ್ಷಣೆ ಮಾಡಿ ಬಂದಿದ್ದೇನೆ ಎಂದರು. ಸದರಿ ಜಿಲ್ಲೆಗಳಲ್ಲಿ ಜನರು ಉತ್ಸಾಹ ಕಳೆದುಕೊಳ್ಳದೆ ಬರಗಾಲದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳಲ್ಲಿ ಭಾಗಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಉತ್ಸಾಹ ನಮ್ಮನ್ನು ಇನ್ನಷ್ಟು ಇಮ್ಮಡಿಗೊಳಿಸಿದ್ದು ಕೂಲಿ ನಿರ್ವಹಿಸಿದ ಕಾರ್ಮಿಕರಿಗೆ ಸಕಾಲದಲ್ಲಿ ಕೂಲಿ ಪಾವತಿ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ಕೂಡ ನೀಡಿದ್ದೇನೆ.

ಹಾಗೆಯೇ ರಾಯಚೂರು ಜಿಲ್ಲೆಯಲ್ಲಿ ಯೋಜನೆಯಡಿ ನಿರ್ವಹಿಸಲಾದ ಕೃಷಿ ಹೊಂಡ ಸದ್ಯ ಯಾವುದೇ ಆಕರ್ಷಣೆಯಾಗದಿದ್ದರು, ಈ ಹಿಂದೆ ನೀರು ತುಂಬಿದಾಗ ಆಡು ಮತ್ತು ಕುರಿಗಳು ನೀರಿನ ದಾಹವನ್ನು ತೀರಿಸಿಕೊಳ್ಳುತ್ತಿರುವ ಛಾಯಚಿತ್ರ ನೋಡಿ ಕಾಮಗಾರಿ ಅನುಷ್ಠಾನ ಸಾರ್ಥಕವಾಗಿದೆ ಎನಿಸಿತು. ಇಂತಹ ಕಾಮಗಾರಿ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಇದರಲ್ಲಿ ಪ್ರಮುಖ ಕಾಮಗಾರಿಗಳನ್ನು ಅನುಷ್ಠಾನಿಸುತ್ತಿದ್ದು ಅದರಲ್ಲೂ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

### ಪ್ರತಿ ಗ್ರಾಮ ಪಂಚಾಯಿತಿಗೊಂದು ಕೆರೆ ಅಭಿವೃದ್ಧಿ:

ನೈಸರ್ಗಿಕ ಸಂಪನ್ಮೂಲ ಅತಿಬಳಕೆ ಕಡಿಮೆ ಗೊಳಿಸಬೇಕಾದರೆ ಅವುಗಳ ಪುನುರಜ್ಜೀವನ ಅವಶ್ಯಕತೆ ಇದೆ. ರಾಜ್ಯ ಸರ್ಕಾರ ಪ್ರತಿ ಗ್ರಾಮ ಪಂಚಾಯಿತಿಗೊಂದು ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಸೂಚನೆ ನೀಡಲಾಗಿತ್ತು. ಆದರೆ ಕೆಲ ಜಿಲ್ಲೆಗಳಲ್ಲಿ ಇನ್ನೂ ಸಮಗ್ರ ಕೆರೆ ಅಭಿವೃದ್ಧಿ ಗೊಂಡಿಲ್ಲ, ಹಾಗಾಗಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗೊಂದು ಕೆರೆ ಸಮಗ್ರ ಅಭಿವೃದ್ಧಿಗೊಳಿಸಲು ಈ ಕಾರ್ಯಾಗಾರ ದಲ್ಲಿ ಚರ್ಚಿಸಬೇಕು. ಗ್ರಾಮೀಣ ಜನರಿಗೆ ನೆರವಾಗುವ ನೈಸರ್ಗಿಕ ನಿರ್ವಹಣೆ ಕ್ರಿಯಾ ಯೋಜನೆ ತಯಾರಿಸಬೇಕು.



### ಕೂಲಿ ಪಾವತಿ ವಿಳಂಬ ಸಹಿಸಲ್ಲ:

ನರೇಗಾ ಯೋಜನೆಯಡಿ ನಿರ್ವಹಿಸಿದ ಕೂಲಿ ಕಾರ್ಮಿಕರಿಗೆ ಸಕಾಲದಲ್ಲಿ ಪಾವತಿಯಾಗದಿರುವುದು ದೂರು ಕೇಳಿ ಬರುತ್ತಿದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಬಿಡುಗಡೆ ಮಾಡಬೇಕಾಗಿದ್ದ ಕೂಲಿ ಮೊತ್ತ ಕಳೆದ ಮೂರು ತಿಂಗಳಿನಿಂದ ಬಿಡುಗಡೆಯಾಗಿಲ್ಲ, ಈ ನಡುವೆ ರಾಜ್ಯ ಸರ್ಕಾರವೇ ಉದ್ಯೋಗ ನಿರಂತರತೆ ಕಾಯ್ದುಕೊಳ್ಳಲು ರೂ.862.00 ಕೋಟಿ ಮುಂಗಡ ಹಣವನ್ನು ಬಿಡುಗಡೆಗೊಳಿಸಿದೆ. ಸಾಮಗ್ರಿ ಮೊತ್ತವನ್ನು ಅನುದಾನದ ಕೊರತೆಯಿಂದ ಕಳೆದ ನಾಲ್ಕು ತಿಂಗಳಿನಿಂದ ನಿಲ್ಲಿಸಲಾಗಿದೆ ಎಂದರು.

ರಾಜ್ಯದಲ್ಲಿ ಬರಗಾಲವಿದ್ದು ಯೋಜನೆಯ ನಿಯಮದಂತೆ ಉದ್ಯೋಗದ ನಿರಂತರತೆ ಕಾಯ್ದುಕೊಳ್ಳಲು ಅನುದಾನವನ್ನು ಬಿಡುಗಡೆ ಮಾಡುವಂತೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯಕ್ಕೆ ನಮ್ಮ ಮನವಿಯನ್ನು ಸಲ್ಲಿಸುವಂತೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ ಆಗಮಿಸಿದ್ದ ಶ್ರೀ ರಂಜಿತ್ ಜಾದವ್‌ರವರಿಗೆ ಕೋರಿದರು. ಒಂದು ವೇಳೆ ಕೇಂದ್ರ ಹಣ ಬಿಡುಗಡೆ ಮಾಡುವಲ್ಲಿ ವಿಳಂಬವಾದಲ್ಲಿ ರಾಜ್ಯ ಸರ್ಕಾರವೇ ಪರಿಹಾರ ಭತ್ಯೆ 0.05% ಮೊತ್ತವನ್ನು ಪಾವತಿಸಲಿದೆ ಎಂದರು.

ಅಧಿಕಾರಿಗಳು ಉದ್ಯೋಗ ಖಾತರಿ ಖಾತೆ ಯಲ್ಲಿರುವ ಕೂಲಿ ಮೊತ್ತವನ್ನು 15 ದಿನದೊಳಗೆ ಕಾರ್ಮಿಕರಿಗೆ ಸಕಾಲದಲ್ಲಿ ದೊರೆಯುವಂತೆ ಮಾಡಬೇಕು. ಕೂಲಿ ಪಾವತಿಯಲ್ಲಿ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸ ಲಾಗುವುದು ಇಲ್ಲವೆ ಸಂಬಂಧಿಸಿದ ಅಧಿಕಾರಿಗಳಿಂದ ವಸೂಲಿ ಮಾಡುವುದಾಗಿ ಎಚ್ಚರಿಕೆಯನ್ನು

ಕೂಡ ನೀಡಿದರು.

ಕೃಷಿ ಆಯುಕ್ತ ಶ್ರೀ ಸತೀಶ್‌ರವರು ಮಾತನಾಡಿ ಈಗಾಗಲೇ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಮತ್ತು ಮಹಾತ್ಮಗಾಂಧಿ ನರೇಗಾ ಯೋಜನೆ ಮತ್ತು ಇತರೆ ಇಲಾಖೆಗಳ ಒಗ್ಗೂಡಿಸುವಿಕೆಯಲ್ಲಿ ರೂ.23 ಕೋಟಿಗಳಿಗೆ ಕ್ರಿಯಾ ಯೋಜನೆ ತಯಾರಿಸಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗಾಗಿ ಬಹುಕಮಾನು ತಡೆಗೋಡೆ ಕಾಮಗಾರಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಮಾಹಿತಿ ನೀಡಿದರು.



ಕಾರ್ಯಾಗಾರದಲ್ಲಿ ಶ್ರೀ.ಉಪೇಂದ್ರ ಪ್ರತಾಪ್ ಸಿಂಗ್, ವಿಶೇಷ ಆಯುಕ್ತರುರವರು ಗಣ್ಯರನ್ನು ಸ್ವಾಗತಿಸಿದರು. ಡಾ॥ ಬೂವನಹಳ್ಳಿ ನಾಗರಾಜ್, ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆರವರು ನಿರೂಪಿಸಿದರು. ಶ್ರೀ.ವಿಫುಲ್ ಬನ್ಸಾಲ್, ಆಯುಕ್ತರು ಗ್ರಾಮೀಣಾಭಿವೃದ್ಧಿ, ಶ್ರೀ.ಹೆಚ್.ಪಿ. ಪ್ರಕಾಶ್, ಆಯುಕ್ತರು, ಗ್ರಾಮೀಣ ನೀರು ಸರಬರಾಜು ಇಲಾಖೆ, ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಸಮಾಲೋಚಕ ಶ್ರೀ.ರಂಜಿತ್ ಜಾದವ್, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಅಧ್ಯಕ್ಷರುಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಅನುಷ್ಠಾನ ಇಲಾಖೆ ಅಧಿಕಾರಿಗಳು ಮತ್ತು ಅತಿಬಳಕೆ ಬ್ಲಾಕ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಭಾಗವಹಿಸಿದ್ದರು.

### ಕಾರ್ಯಾಗಾರದ ಮುಖ್ಯಾಂಶಗಳು:

ಕೇಂದ್ರ ಭೂ ಅಂತರ್ಜಲ ಮಂಡಳಿಯು ನಡೆಸಿರುವ ಅಧ್ಯಯನದಲ್ಲಿ ರಾಜ್ಯದ 18 ಜಿಲ್ಲೆಗಳ 60 ಬ್ಲಾಕ್‌ಗಳನ್ನು ನೈಸರ್ಗಿಕ ಸಂಪನ್ಮೂಲ ಅತಿ ಬಳಕೆಯಲ್ಲಿರುವುದನ್ನು ಗುರುತಿಸಿದ್ದು, ಈ ಬ್ಲಾಕ್‌ಗಳಲ್ಲಿ ನೈಸರ್ಗಿಕ ನಿರ್ವಹಣೆಯ ಕಾಮಗಾರಿಗಳನ್ನು ಒಗ್ಗೂಡಿಸುವಿಕೆ ಮೂಲಕ ಅನುಷ್ಠಾನಗೊಳಿಸಲು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಸೂಚನೆ ನೀಡಿರುತ್ತದೆ. ಈ ಹಿನ್ನಲೆಯಲ್ಲಿ ಪಿಎಮ್‌ಕೆಎಸ್‌ವೈ ಮತ್ತು ಐಡಬ್ಲೂಎಮ್ ಒಗ್ಗೂಡಿಸುವಿಕೆಯಲ್ಲಿ ಜಿಲ್ಲಾ ಜಲ ಸಂರಕ್ಷಣಾ ಕ್ರಿಯಾ ಯೋಜನೆಯನ್ನು ತಯಾರಿಸುವ ಬಗ್ಗೆ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳು ಮಾಹಿತಿ ವಿನಿಮಯ ಮಾಡಿಕೊಂಡರು.

### ಜಿಲ್ಲಾ ಜಲ ಸಂರಕ್ಷಣಾ ಕ್ರಿಯಾಯೋಜನೆಯಲ್ಲಿ ಮಹಾತ್ಮ ಗಾಂಧಿ ನರೇಗಾ ಕ್ರಿಯಾ ಯೋಜನೆ ರಚಿಸುವ ಬಗ್ಗೆ : ಶ್ರೀ ರಂಜಿತ್ ಜಾದವ್ ಸಮಾಲೋಚಕರು (MoRD)

2017-18 ನೇ ಸಾಲಿನಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ನೈಸರ್ಗಿಕ ಸಂಪನ್ಮೂಲ ಅತಿಬಳಕೆ ತಾಲ್ಲೂಕುಗಳಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯನ್ನು ಒಗ್ಗೂಡಿಸುವಿಕೆಯಲ್ಲಿ ಅನುಷ್ಠಾನಕ್ಕೆ ಆದ್ಯತೆ ನೀಡಲಾಗುತ್ತಿದೆ. ಇದರ ಮುಖ್ಯ ಉದ್ದೇಶ ಅಂತರ್ಜಲವನ್ನು ವೃದ್ಧಿಸಲು ದಿಬ್ಬ ಕಣಿವೆ (Ridge-to-Valley) ಕಾಮಗಾರಿಗಳನ್ನು



ಅನುಷ್ಠಾನಗೊಳಿಸುವುದು. ಈಗಾಗಲೇ ಯೋಜನೆಯಡಿ ಕೆಲ ರಾಜ್ಯಗಳಲ್ಲಿ ವಿನೂತನ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳಾದ " ಮುಖ್ಯ ಮಂತ್ರಿ ಜಲ ಸ್ವಾವಲಂಬನ ಅಭಿಯಾನ", "ದೋಭಾ" (ಕೃಷಿ ಹೊಂಡ) ಜಾರ್ಖಂಡ್, "ಕಾಕತೀಯ ಅಭಿಯಾನ" ತೆಲಂಗಾಣ, "ನೀರು ಚೇತು" ಆಂದ್ರ ಪ್ರದೇಶ, "ಕಪಿಲ್ ಧಾರ" ಮಧ್ಯಪ್ರದೇಶ, " ಕೊಳವೆ ಬಾವಿ ಮರುಪೂರಣ ಘಟಕ ನಿರ್ಮಾಣ" ಕರ್ನಾಟಕ,

"ಜಲಯುಕ್ತ ಶಿವಾರ್" ಮಹಾರಾಷ್ಟ್ರ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ.

ಐಟಟಿ, ಎನ್‌ಐಟಿ, ಕೃಷಿ ವಿಶ್ವವಿದ್ಯಾಲಯ, ರಾಜ್ಯ ತಾಂತ್ರಿಕ ಸಂಸ್ಥೆಗಳ ತಾಂತ್ರಿಕ ಸಹಾಯದೊಂದಿಗೆ ಜಿಲ್ಲಾ ಜಲ ಸಂರಕ್ಷಣ ಕ್ರಿಯಾ ಯೋಜನೆಗಳನ್ನು ರಚಿಸಬೇಕು. ಕೇಂದ್ರ ಭೂ ಅಂತರ್ಜಲ ಮಂಡಳಿಯು ಅಂತರ್ಜಲ ನೀರಿನ ಬಗ್ಗೆ ನಡೆಸಿರುವ ನೀರಿನ ಪೊಟರೆಗಳ ನಕ್ಷೆಗಳನ್ನು ಸಿದ್ಧಪಡಿಸಿದ್ದು ಸದರಿ ಇಲಾಖೆಯಲ್ಲಿ ಲಭ್ಯವಿರುತ್ತದೆ. ಇದರ ಆಧಾರದ



ಮೇಲೆ ಅವಶ್ಯಕ ಅಂತರ್ಜಲ ಮರುಪೂರಣ ಕಾಮಗಾರಿಗಳನ್ನು ಸಿದ್ಧಪಡಿಸಲು ಸಮಾಲೋಚಕ ಶ್ರೀ ರಂಜಿತ್‌ಜಾದವ್ ರವರು ತಿಳಿಸಿದರು.

## ಅಂತರ್ಜಲ ಲಭ್ಯತೆ:

ಕೇಂದ್ರ ಭೂ ಅಂತರ್ಜಲ ಮಂಡಳಿ (CGWB) ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಮತ್ತು ಗೌರಿಬಿದನೂರು ತಾಲ್ಲೂಕಿನಲ್ಲಿ ಮಳೆಯ ಪ್ರಮಾಣ ಮತ್ತು ಭೂ ಅಂತರ್ಜಲ ಅಧ್ಯಯನ ನಡೆಸಿರುವ ಬಗ್ಗೆ ವಿಜ್ಞಾನಿಗಳು ಪಿಪಿಟಿ ಮೂಲಕ ವಿವರಿಸಿದರು. ಸದರಿ ಅಧ್ಯಯನವು ಜಿಲ್ಲಾ ಜಲ ಸಂರಕ್ಷಣಾ ಕ್ರಿಯಾ ಯೋಜನೆಗೆ ಅವಶ್ಯಕವಾಗಿದೆ. ಈ ಮಧ್ಯೆ ಕರ್ನಾಟಕ ರಾಜ್ಯ ದೂರು ಸಂವೇದಿ ಅನ್ವಯಿಕ ಕೇಂದ್ರದ ನಿರ್ದೇಶಕರು ಕಾರ್ಯಾಗಾರದಲ್ಲಿ ನೀರಿನ ಪೊಟರೆಗಳ ಆಧಾರದ ಮೇಲೆ ಕಾಮಗಾರಿಗಳ ಆಯ್ಕೆ ಮಾಡುವ ಬಗ್ಗೆ ಅಧ್ಯಯನ ನಡೆಸಲಾಗಿದೆ. ಸದರಿ ಅಧ್ಯಯನವನ್ನು ಜಲಾನಯನ ಇಲಾಖೆಗೆ ಒದಗಿಸಲಾಗಿದ್ದು, ಇದರ ಆಧಾರದ ಮೇಲೆ ಜಿಲ್ಲಾ ಜಲ ಸಂರಕ್ಷಣಾ ಕ್ರಿಯಾ ಯೋಜನೆ ರಚಿಸಲಾಗುತ್ತಿದೆ ಎಂದು ನಿರ್ದೇಶಕರು ತಿಳಿಸಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು ಕಾರ್ಯಾಗಾರದಲ್ಲಿ ಜಿಲ್ಲಾ ಜಲ ಸಂರಕ್ಷಣ ಕ್ರಿಯಾ ಯೋಜನೆಯ ಎಲ್ಲಾ ಜಿಲ್ಲೆಗಳು ಜಿಲ್ಲಾಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಇದರಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯ ಒಗ್ಗೂಡಿಸುವ ಕಾಮಗಾರಿಗಳನ್ನು ಕೂಡ ಇದರಲ್ಲಿ ಸೇರ್ಪಡೆ ಮಾಡಲಾಗಿದೆ. ಈ ಕ್ರಿಯಾ ಯೋಜನೆಯಲ್ಲಿ ಕಾಮಗಾರಿ ಅನುಷ್ಠಾನ ಬಜೆಟ್ ಕೂಡ ಸಿದ್ಧಪಡಿಸಿ ಇದರಲ್ಲಿ ಸೇರ್ಪಡೆ ಮಾಡಿರುವುದಾಗಿ ತಿಳಿಸಿದರು.

ಶ್ರೀ. ಪ್ರಭಾಷ್‌ಚಂದ್ರ ರೇ, ಆಯುಕ್ತರು, ತೋಟಗಾರಿಕೆರವರು ಕಾರ್ಯಾಗಾರದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಆಶಯದಂತೆ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳ ಅನುಷ್ಠಾನವನ್ನು ಒಗ್ಗೂಡಿಸುವಿಕೆಯಲ್ಲಿ ರಚಿಸಬೇಕು. ಬೆಳಗಾವಿ ಜಿಲ್ಲೆ–ಜಲಾಮೃತ ಮತ್ತು ಚಿತ್ರದುರ್ಗ ಜಿಲ್ಲೆ–ಕೊಳವೆ ಬಾವಿ ಮರುಪೂರಣ, ಚಿಕ್ಕಮಗಳೂರು,




ಹಾಸನ, ಚಿತ್ರದುರ್ಗ ಜಿಲ್ಲೆಗಳಲ್ಲಿ–ನದಿಪುನಶ್ಚೇತನ ಕಾಮಗಾರಿಗಳನ್ನು ಅನುಷ್ಠಾನಿಸಲಾಗುತ್ತಿದೆ. ಉಳಿದ ಜಿಲ್ಲೆಗಳಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಿರುವುದಿಲ್ಲ. ಈ ಕಾರ್ಯಾಗಾರ ಮೂಲಕ ಇನ್ಮುಂದೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನ ಇಲಾಖೆಗಳನ್ನು ಒಗ್ಗೂಡಿಸಿಕೊಂಡು ಜಿಲ್ಲೆಗಳಲ್ಲಿ ಜಲ ಸಂರಕ್ಷಣ ಕ್ರಿಯಾ ಯೋಜನೆ ಸಿದ್ಧಪಡಿಸಲು ತಿಳಿಸಿದರು.

ವರದಿ

# ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ವಸ್ತುಸ್ಥಿತಿಯ ಬಗ್ಗೆ ಚಿಕ್ಕಬಳ್ಳಾಪುರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಗೆ ಲೋಕಸಭಾ ಸ್ಥಾಯಿ ಸಮಿತಿ ಭೇಟಿ



ಪ್ರಶಾಂತ್. ಎನ್

ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಪರಿಶೀಲನೆ ಮಾಡಿದ ಸಂಸದೀಯ ಸ್ಥಾಯಿ ಸಮಿತಿ ತಂಡದ ಸದಸ್ಯರು ಹೊಸಹುಡ್ಯ ಗ್ರಾಮ ಪಂಚಾಯಿತಿಯಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಮೇಲೂರು ಹಾಗೂ ಕೇಶವಾರ ನಡುವೆ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾರ್ಯವನ್ನು ಪರಿಶೀಲಿಸಿದರು.

ಕೇಂದ್ರ ಸರ್ಕಾರದ ಯೋಜನೆಗಳ ವಸ್ತು ಸ್ಥಿತಿಯ ಪರಿಶೀಲನೆಗೆ ಚಿಕ್ಕಬಳ್ಳಾಪುರ ಜಿಲ್ಲೆಗೆ ಭೇಟಿ ನೀಡಿದ್ದ ಕೇಂದ್ರ ತಂಡವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸ್ವಚ್ಛ ಭಾರತ್ ಮಿಷನ್, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ವಸತಿ ಯೋಜನೆಗಳು ಸೇರಿದಂತೆ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿರುವ ಇತರೆ ಕೇಂದ್ರ ಪುರಸ್ಕೃತ ಯೋಜನೆಗಳ ಪರಿವೀಕ್ಷಣೆಗೆ ದಿನಾಂಕ:22/12/2016 ರ ಗುರುವಾರದಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷ ಪಿ. ವೇಣುಗೋಪಾಲ್



ರವರ ನೇತೃತ್ವದಲ್ಲಿ 15 ಮಂದಿ ಸಮಿತಿಯ ಸಂಸದರು ಮತ್ತು ಅಧಿಕಾರಿಗಳ ತಂಡ ಜಿಲ್ಲೆಗೆ ಭೇಟಿ ನೀಡಿತ್ತು. ಈ ತಂಡಕ್ಕೆ ಜಿಲ್ಲಾಡಳಿತದಿಂದ ಪೂರ್ಣಕುಂಭ ಹೊತ್ತ ಮಹಿಳೆಯರು, ತಳಿರು ತೋರಣ, ರಂಗೋಲಿ, ಡೊಳ್ಳು ಕುಣಿತಗಳ ನಡುವೆ ಭವ್ಯ ಸ್ವಾಗತ ಕೋರಲಾಯಿತು.

ಕೇಂದ್ರದ ಗ್ರಾಮೀಣಾಭಿವೃದ್ಧಿ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷ ಪಿ. ವೇಣುಗೋಪಾಲ್ ಅವರ ನೇತೃತ್ವದಲ್ಲಿ ಸಮಿತಿಯ ಸದಸ್ಯರಾದ ಜುಗಲ್ ಕಿಶೋರ್, ಡಾ|| ಯಶ್ವಂತ್‌ಸಿಂಗ್, ವಿಜಯ್‌ಕುಮಾರ್, ಹರಿಶ್ಚಂದ್ರ ಚವ್ಹಾಣ್, ಶಮೀರ್‌ಸಿಂಗ್ ದುಲ್ಲೋ, ಸಂಜಯದೋತ್ರೆ, ಲಾದುಕಿಶೋರ್ ಸ್ವನ್, ಬಲ್ಕಸುಮನ್, ನಾರಾಯಣ್‌ಲಾಲ್‌ಪಂಚಾರ್ಯ, ಗೋಕರಾಜ್ ಗಂಗಾರಾಜ್, ಮತ್ತಿತರ 15 ಮಂದಿ ಸದಸ್ಯರ ತಂಡ ಮೊದಲಿಗೆ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕೋನಂಪಲ್ಲಿ ಗ್ರಾಮ ಪಂಚಾಯಿತಿಗೆ ಬೇಟಿ ನೀಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ

ಜಿಲ್ಲಾ ಐ.ಇ.ಸಿ ಸಂಯೋಜಕರು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.



ನಿರ್ಮಿಸಿರುವ ಅಂಗನವಾಡಿ ಕಟ್ಟಡ, ದಾಸ್ತಾನು ಕೊಠಡಿ, ಐಎವೈ ಯೋಜನೆಯಡಿ ರಾಜೇಶ್ವರಿ ಹಾಗೂ ಅಂಜಿನಮ್ಮ ಎಂಬುವವರು ನಿರ್ಮಿಸಿರುವ ವಸತಿ ಕಾಮಗಾರಿಗಳು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ನಿರ್ಮಿಸಿರುವ ಶೌಚಾಲಯ, ಕುಡಿಯುವ ನೀರಿನ ಶುದ್ಧೀಕರಣ ಘಟಕ ಚರಂಡಿ ಕಾಮಗಾರಿ, ಹಾಗೂ 14ನೇ ಹಣಕಾಸು ಯೋಜನೆಯಡಿ ನಿರ್ಮಿಸಿರುವ ಗ್ರಾಮೀಣ ಮೂಲ ಸೌಕರ್ಯಗಳ ಗುಣಮಟ್ಟವನ್ನು ಖುದ್ದು ಪರಿಶೀಲನೆ ನಡೆಸಿದರು. ಹಾಗೂ ಅಂಗನವಾಡಿ ಕಟ್ಟಡದ ಮುಂಭಾಗದಲ್ಲಿ ಗಿಡಗಳನ್ನು ನೆಟ್ಟು ನೀರುಣಿಸಿದರು.

ಸಂದರ್ಭದಲ್ಲಿ ಸ್ಥಳೀಯ ಚುನಾಯಿತ ಜನ ಪ್ರತಿನಿಧಿಗಳೊಂದಿಗೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನರೊಂದಿಗೆ ಸ್ಥಾಯಿ ಸಮಿತಿ ತಂಡ ಕುಂದು ಕೊರತೆಗಳ ಬಗ್ಗೆ ಸಂವಾದ ನಡೆಸಿದರು. ಈ ವೇಳೆ ಚಿಂತಾಮಣಿ ಶಾಸಕರಾದ ಜೆ.ಕೃಷ್ಣಾರೆಡ್ಡಿ ಮಾತನಾಡಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಪೂರಕವಾಗಿರುವ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಸ್ಥಗಿತಗೊಳಿಸಬಾರದು ಎಂದು ಸಮಿತಿಯ ಸದಸ್ಯರಲ್ಲಿ ಮನವಿ ಮಾಡಿದರು. ಪ್ರಧಾನಮಂತ್ರಿ ಆವಾಸ್ ಯೋಜನೆ ಸೇರಿದಂತೆ ಮತ್ತಿತರ ವಸತಿ ಯೋಜನೆಗಳಡಿಯಲ್ಲಿ ನೀಡುತ್ತಿರುವ ಸಹಾಯಧನವನ್ನು ಹೆಚ್ಚಿಸಲು ಸಮಿತಿ ಸದಸ್ಯರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಪಂಚಾಯತಿ ಸದಸ್ಯರಾದ ಪಿ.ಎನ್. ಕೇಶವರೆಡ್ಡಿಯವರು ಜಿಲ್ಲೆಯಲ್ಲಿ ತೀವ್ರ ಬರ ಆವರಿಸಿದೆ ಆದ್ಧರಿಂದ ಕೂಡಲೇ ಜಿಲ್ಲೆಗೆ ಬರ ಪರಿಹಾರ ಕೊಡಿಸಿ ಎಂದು ಮನವಿ ಮಾಡಿದರು. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಶೌಚಾಲಯ ನಿರ್ಮಾಣಕ್ಕೆ ಕೊಡುತ್ತಿರುವ 12 ರಿಂದ 15 ಸಾವಿರ ರೂ.ಗಳು ಸಾಕಾಗುತ್ತಿಲ್ಲ 20 ರಿಂಧ 25 ಸಾವಿರ ರೂ.ಗಳು ನೀಡುವಂತೆ ಮನವಿ ಮಾಡಿದರು. ಅಲ್ಲದೆ ಜಿಲ್ಲೆಯಲ್ಲಿ 500 ಕ್ಕೂ ಹೆಚ್ಚು ಕುಟುಂಬಗಳು ಬಂಡೆಯ ಮೇಲೆ ವಸತಿ ನಿರ್ಮಿಸಿಕೊಂಡಿದ್ದು, ಅವರಿಗೆ ಶೌಚಾಲಯ




ನಿರ್ಮಿಸಿಕೊಡುವುದು. ಇದಕ್ಕೆ ಪರಿಹಾರ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿ ಮಾಡಿದರು ಹಾಗೂ ಪಿ.ಎಂ.ಜಿ.ಎಸ್.ವೈ ಯೋಜನೆಯಡಿ ನಿರ್ಮಿಸಿರುವ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಹಾಗಾಗಿ ಅವುಗಳ ನಿರ್ವಹಣೆಯನ್ನು ಗುತ್ತಿಗೆದಾರರು ವಹಿಸುವಂತೆ ಕ್ರಮ ಕೈಗೊಳ್ಳಬೇಕೆಂದರು.

ಕೋನಂಪಲ್ಲಿ ಗ್ರಾಮ ಪಂಚಾಯಿತಿಯಲ್ಲಿ ವಿವಿದ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಪರಿಶೀಲನೆ ಮಾಡಿದ ಬಳಿಕ ಚಿಕ್ಕಬಳ್ಳಾಪುರ ತಾಲ್ಲೂಕಿನ ಹೊಸಹುಡ್ಯ ಗ್ರಾಮ ಪಂಚಾಯಿತಿಯಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಮೇಲೂರು ಹಾಗೂ ಕೇಶವಾರ ನಡುವೆ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾರ್ಯವನ್ನು ಸಂಸದೀಯ ಸ್ಥಾಯಿ ಸಮಿತಿ ತಂಡದ ಸದಸ್ಯರು ಪರಿಶೀಲಿಸಿದರು. ಕಾಮಗಾರಿ ಗುಣಮಟ್ಟದಿಂದ

ಕೂಡಿರುವುದಕ್ಕೆ ಮೆಚ್ಚುಗೆ ಸೂಚಿಸಿದರು. ತದನಂತರ ಅಜ್ಜವಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಯನಹಳ್ಳಿಯಲ್ಲಿ ಜಿಲ್ಲಾ ಪಂಚಾಯತಿ ವತಿಯಿಂದ ಅಳವಡಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಪರಿಶೀಲಿಸಿದರು ಈ ವೇಳೆ ಸ್ಥಳೀಯ ಗ್ರಾಮ ಪಂಚಾಯಿತಿ ಸದಸ್ಯರು ಜಿಲ್ಲೆಯಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಅಧಿಕವಾಗಿದೆ. ಪ್ರತಿ ಹಳ್ಳಿಯಲ್ಲೂ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಬೇಕೆಂದು ತಂಡದ ಸದಸ್ಯರಲ್ಲಿ ಮನವಿ ಮಾಡಿದರು.

ತದನಂತರ ನೇರವಾಗಿ ನಂದಿಗಿರಿಧಾಮಕ್ಕೆ ತೆರಳಿ ಭೋಜನ ಕೂಟದಲ್ಲಿ ಪಾಲ್ಗೊಂಡರು ಈ ಸಮಯದಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕುಗಳ ಗ್ರಾಮೀಣಾಭಿವೃದ್ಧಿ ಕಾಮಗಾರಿಗಳ ಪೋಟೋ ಮತ್ತು ವಿಡಿಯೋ ಚಿತ್ರಣವನ್ನು ವಿಕ್ಷಿಸಿದರು.

ನಂತರ ನಂದಿಗಿರಿಧಾಮದ ತಪ್ಪಲಿನಲ್ಲಿರುವ ಭೋಗ ನಂದಿಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಅಲ್ಲಿನ ವೈವಿದ್ಯತೆ ಬಗ್ಗೆ ಮಾಹಿತಿ ಪಡೆದರು. ತದನಂತರ



ನೇರವಾಗಿ ಕೆನರಾ ಬ್ಯಾಂಕ್ ವತಿಯಿಂದ ರುಡ್ ಸೆಟ್‌ನಲ್ಲಿ ನಡೆಯುವ ತರಭೇತಿ ಕಾರ್ಯಾಗಾರವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ॥ ಎನ್. ನಾಗಾಂಬಿಕಾದೇವಿ, ಜಿಲ್ಲಾ ಪಂಚಾಯತಿ ಅಧ್ಯಕ್ಷ, ಪಿ.ಎನ್. ಕೇಶವರೆಡ್ಡಿ, ಜಿಲ್ಲಾ ಪಂಚಾಯತಿ ಉಪಾಧ್ಯಕ್ಷೆ ಪಿ. ನಿರ್ಮಲ, ಜಿಲ್ಲಾಧಿಕಾರಿ ದೀಪ್ತಿ ಆದಿತ್ಯ ಕಾನಡೆ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣ ಅಧಿಕಾರಿ ಜೆ. ಮಂಜುನಾಥ್, ಉಪಕಾರ್ಯದರ್ಶಿ ಡಾ॥ ಸಿ.ಸಿದ್ದರಾಮಯ್ಯ,



ಮುಖ್ಯ ಲೆಕ್ಕಾಧಿಕಾರಿ ಡಾ॥ ಎಮ್.ಎಚ್. ನಾಗೇಶ್, ಸಹಾಯಕ ಕಾರ್ಯದರ್ಶಿ ಬಿ.ಹೆಚ್. ರಾಮಕೃಷ್ಣಾರೆಡ್ಡಿ, ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಿರಿಯ ಅಧಿಕಾರಿಗಳು ಮಹಾತ್ಮ ಗಾಂಧಿ ನರೇಗಾ ಜಿಲ್ಲಾ ಸಂಯೋಜಕರುಗಳಾದ ಜಗದೀಶ್.ವಿ, ಮಧು.ಜಿ.ಎಲ್, ಪ್ರಶಾಂತ್.ಎನ್, ಉಪಸ್ಥಿತರಿದ್ದರು.

ಅಂತರ್ಜಲವೃದ್ಧಿ, ಕುಡಿಯುವ ನೀರು ಪೂರೈಕೆ, ರಸ್ತೆ, ಸಾಲ ಸೌಲಭ್ಯ, ವಸತಿ, ನೈರ್ಮಲ್ಯ ಮತ್ತಿತರ ಮೂಲಭೂತ ಸೌಕರ್ಯಗಳ ಬಗ್ಗೆ, ಜಿಲ್ಲೆಯ ಜನತೆ ಸಂಸದೀಯ ಸ್ಥಾಯಿ ಸಮಿತಿ ಮುಂದೆ ಸಲ್ಲಿಸಿರುವ ಅಹವಾಲುಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ ಅವುಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ ಪಿ.ವೇಣುಗೋಪಾಲ್ ಭರವಸೆ ನೀಡಿದರು.

ವರದಿ

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾರ್ವಜನಿಕ ಬಾವಿ ಅನುಷ್ಠಾನ ಕಾರ್ಯಾಗಾರ

– ನಿತ್ಯಾನಂದ ಕೆ ಕೆ

ಕವಿದ ಕಾರ್ಮೋಡ, ಎಡೆಬಿಡದೆ ಸುರಿಯುವ ಮುಸಲಧಾರೆ, ಭೋರ್ಗರೆಯುವ ಜಲಪಾತಗಳು, ಕೈ ಬೀಸಿ ಕರೆಯುವ ನಿಸರ್ಗತಾಣಗಳನ್ನು ಹೊಂದಿರುವ ಮಲೆನಾಡು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನಲ್ಲಿ ಜನರ ದಾಹವನ್ನು ನೀಗಿಸುವುದು ತೆರೆದ ಬಾವಿಗಳು. ನೈಸರ್ಗಿಕ ಸಂಪನ್ಮೂಲದಿಂದ ಸಮೃದ್ಧ ಅಂತರ್ಜಲ ಹೊಂದಿದ್ದರು ಕುಡಿಯಲು ಶುದ್ಧ ನೀರನ್ನು ಪಡೆಯಲು ಈ ಬಾವಿಗಳೇ ಬೇಕು. ತೆರೆದ ಬಾವಿಗಳ ಪರ್ಯಾಯವಾಗಿ ಕೊಳವೆ ಬಾವಿಗಳನ್ನು ತೋಡಿಸಿದರು ಸಕ್ಸಸ್ ಆಗುವುದು ಕೇವಲ ಕೆಲವು.

ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ಸಾರ್ವಜನಿಕ ಬಾವಿಗಳನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದರಿಂದ ಸಮುದಾಯದ ಎಲ್ಲಾ ವರ್ಗದ ಜನರಿಗೆ ಕುಡಿಯುವ ನೀರನ್ನು ತಲುಪಿಸುವುದರ ಜೊತೆಗೆ ಉದ್ಯೋಕಾಂಕ್ಷಿಗಳಿಗೆ ಉದ್ಯೋಗ ನೀಡಿ ಆ ಮೂಲಕ ನಿರುದ್ಯೋಗ ಪ್ರಮಾಣ ಕಡಿಮೆಗೊಳಿಸ ಲಾಗುತ್ತಿದೆ.





ಚೆದುರಿದ ಮನೆಗಳಿಗೆ ನೀರು ಒದಗಿಸುವುದು ಬಲು ಕಷ್ಟವಾದ್ದರಿಂದ ಕುಟುಂಬಗಳೇ ಮನೆಗೊಂದರಂತೆ ತೆರೆದ ಬಾವಿಗಳನ್ನು ತೋಡಿಕೊಂಡಿದ್ದಾರೆ. ಈ ವರ್ಷ ಮುಂಗಾರು ಕೈಕೊಟ್ಟಿದ್ದರ ಪರಿಣಾಮ ಸಾಗರ ತಾಲ್ಲೂಕಿನಲ್ಲಿ ಅಂತರ್ಜಲ ಆಳ ತಲುಪಿ ಪ್ರತಿ ಮನೆ ಇತ್ತಲು, ಮುಂದೆ ತೋಡಿದ ಬಾವಿಗಳಲ್ಲಿ ನೀರು ಕಾಣದೆ ಬರಿದಾಗಿವೆ. ಉಳ್ಳವರು ಮಗದೊಂದು ತೆರೆದ ಬಾವಿಗಳನ್ನು ತೋಡಿದರೇ ಬಡವರು ಸರ್ಕಾರದ ನೆರವನ್ನು ಎದುರು ನೋಡುತ್ತಿದ್ದಾರೆ.

ಪ್ರತಿ ಕುಟುಂಬಕ್ಕೂ ಕುಡಿಯುವ ನೀರು ಒದಗಿಸಲು ಸಾರ್ವಜನಿಕ ಕುಡಿಯುವ ನೀರಿನ ಬಾವಿಗಳ ನಿರ್ಮಾಣ ಕಾರ್ಯದಿಂದಾಗಿ ಒಂದು ಕಡೆ ವಾಸವಾಗಿರುವ 3 ರಿಂದ 4 ನಾಲ್ಕು ಮನೆಗಳಿಗೆ ಒಂದು ಭಾವಿಗಳ ನಿರ್ಮಾಣ ಮಾಡುವುದರಿಂದ ಕುಡಿಯುವ ನೀರನ್ನು ಅವರಿಗೆ ಸಮೀಪದಲ್ಲಿ ಒದಗಿಸಲು ಸಾದ್ಯ ಅದಲ್ಲದೆ ಪಂಚಾಯತ್‌ನಿಂದ ನಿರ್ವಹಣೆಯು ಕಡಿಮೆ ವೆಚ್ಚವಾಗಿರುತ್ತದೆ ಹಾಗೂ ಜನರಿಗೆ ಶುದ್ದ ಕುಡಿಯುವ ನೀರು ಒದಗಿಸಲು ಇದು ಮಹತ್ವವಾಗಿ ಒಂದು ವರದಾನವಾಗಿದೆ

ತಾಲ್ಲೂಕು ಐ.ಇ.ಸಿ ಸಂಯೋಜಕರು, ಸಾಗರ ತಾಲ್ಲೂಕು ಪಂಚಾಯತ್





ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನಲ್ಲಿ ಒಟ್ಟು 35 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 25772/- ಕುಟುಂಬಗಳು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನೊಂದಾಯಿಸಿಕೊಂಡಿದ್ದು, 64751 ಸದಸ್ಯರಿದ್ದಾರೆ.

### ತೆರೆದ ಬಾವಿ ಯಾಕೆ?

ಬಹುತೇಕ ಜಂಬಿಟ್ಟಿಗೆ ಮಣ್ಣನ್ನು ಹೊಂದಿರುವ ಈ ಭಾಗದಲ್ಲಿ ತೆರೆದ ಬಾವಿಗಳ ನಿರ್ಮಾಣಕ್ಕೆ ಅನುಕೂಲ. ಕೊಳವೆ ಬಾವಿಗಳನ್ನು ತೋಡಲು ಭೂಮಿಯ ಆಳದಲ್ಲಿ ಸಡಿಲ ಬಂಡೆಗಲ್ಲು ಹೊಂದಿರುವುದರಿಂದ ಸಫಲವಾಗುವುದಿಲ್ಲ. ಅಲ್ಲೊಂದು ಇಲ್ಲೊಂದು ಸಕ್ಸಸ್ ಆದರೆ ಹೆಚ್ಚು. 2016-17ನೇ ಸಾಲಿನಲ್ಲಿ ತಾಲ್ಲೂಕಿನಾದ್ಯಂತ ಗ್ರಾಮ/ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತೆಗೆಸಿದ ಒಟ್ಟು ಕೊಳವೆ ಸಂಖ್ಯೆ; 37 ಅದರಲ್ಲಿ ಸಫಲವಾದ ಬಾವಿಗಳು 22 ನಷ್ಟವಾದ ಕೊಳವೆ ಬಾವಿಗಳು ಸಂಖ್ಯೆ 15 ಆದ್ದರಿಂದ ಇಂತಹ ಸಮಯದಲ್ಲಿ ಸಾರ್ವಜನಿಕ ಕುಡಿಯುವ ನೀರು ಒದಗಿಸುವುದು ಕಷ್ಟ, ಇದಕ್ಕೆ ಪರ್ಯಾಯವಾಗಿ ತೆರೆದ ಬಾವಿಗಳೆ ಸಫಲ.

### ತೆರೆದ ಬಾವಿಗಳನ್ನು ಎಲ್ಲಿ ತೋಡಬಹುದು:

ಸಾಮಾನ್ಯವಾಗಿ ಸಾರ್ವಜನಿಕ ಬಾವಿಗಳ ಎಲ್ಲಿ ಬೇಕಾದರೂ ತೋಡವುದಕ್ಕೆ ಬರುವುದಿಲ್ಲ ಯಾಕೆಂದರೆ ಸಾಮಾನ್ಯವಾಗಿ ಬೋರೆವೆಲ್‌ಗಳನ್ನು ಕೊರೆಸುವ ಮೊದಲು ನೀರಿನ ಜಲದ ಮೂಲಗಳನ್ನು ಹುಡುಕಿ ನೀರು ಬರುವಂತಹ ಸ್ಥಳಗಳನ್ನೇ ಹುಡುಕಿ ಕೊರೆಸುವಂತೆ ಸಾರ್ವಜನಿಕ ಬಾವಿಗಳನ್ನು ತೋಡುವಾಗ ಸ್ಥಳೀಯವಾಗಿ ಜಲದ ಮೂಲವನ್ನು ಜಲ ಸಂಶೋದಕರ ಮೂಲಕ ನೀರಿನ ಮೂಲಗಳನ್ನು ಹುಡುಕಿ ಅಂತಹ ಸ್ಥಳದಲ್ಲಿ ಮಾತ್ರ ಬಾವಿಗಳನ್ನು ತೋಡಬೇಕು. ಈ ರೀತಿಯಾಗಿ ನಿರ್ಮಾಣ ಮಾಡಲಾಗಿರುವ ಬಾವಿಗಳು ಸಾಮಾನ್ಯವಾಗಿ ವಿಫಲವಾಗುವುದಿಲ್ಲ. ಸ್ಥಳೀಯವಾಗಿ ಈ ಭಾಗದಲ್ಲಿ ಹಳ್ಳಿಯ ಜನರು ಜಲ ಮೂಲವನ್ನು ತೆಂಗಿನಕಾಯಿಯನ್ನು ಅಂಗೈನಲ್ಲಿ ಇರಿಸಿ ಬಾವಿಗಳನ್ನು ನಿರ್ಮಾಣ ಮಾಡಬೇಕಾಗಿರುವ ಭಾಗದಲ್ಲಿ ನಡೆದುಕೊಂಡು ಹೋಗಿ ಪರೀಕ್ಷೆ ಮಾಡಿ ನೀರಿನ ಲಭ್ಯತೆ ಇರುವಿಕೆಯ ಬಗ್ಗೆ ಗುರುತಿಸಿ ಅಂತಹ ಸ್ಥಳಗಳಲ್ಲಿ ಬಾವಿಗಳನ್ನು ತೋಡಲಾಗುತ್ತಿದೆ. ಆ ಮೂಲಕ ಸಾರ್ವಜನಿಕ ಬಾವಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

### ಬಾವಿಗಳ ನಿರ್ಮಾಣ ವಿದ

ಸಾರ್ವಜನಿಕ ಕುಡಿಯುವ ನೀರಿನ ಬಾವಿಗಳ ಬಹುಮುಖ್ಯವಾಗಿ 5 ರಿಂದ 6 ಅಗಲದ ಮತ್ತು 30

**2016-17 ನೇ ಸಾಲಿನಲ್ಲಿ ಸಾಗರ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡಲಾದ ಸಾರ್ವಜನಿಕ ಬಾವಿಗಳ ವಿವರ**

| ತಾಲ್ಲೂಕು | ಸಾಲು | ಕಾಮಗಾರಿಗಳ ಸಂಖ್ಯೆ | ವೆಚ್ಚ ಭರಿಸಲಾದ ಮೊತ್ತ |
|---|---|---|---|
| ಸಾಗರ | 2014-15 | 78 | 49.55452 |
| ಸಾಗರ | 2015-16 | 96 | 51.28163 |
| ಸಾಗರ | 2016-17 | 124 | 70.89097 |



ರಿಂದ 50 ಅಡಿ ಆಳದವರೆಗೆ ಭೂವಿಯನ್ನು ಕೊರೆಯುವ ಮೂಲಕ ನಿರ್ಮಾಣ ಮಾಡಲಾಗುತ್ತದೆ. ಹಾಗೂ ಮಣ್ಣು ಜರಿಯದಂತೆ ಸಿಮೆಂಟಿನಿಂದ ತಯಾರಿಸಲಾದ ರಿಂಗ್‌ಗಳನ್ನು ಒಳಗಡೆ ಆಳವಡಿಸಿ ನಂತರ ನೀರನ್ನು ಮೇಲೆ ಎಳೆಯಲು ಕೈಪಿಡಿ ನಿರ್ಮಾಣ ಮಾಡಿ ರಾಟೆಯನ್ನು ಆಳವಡಿಸ ಲಾಗುತ್ತದೆ. ಪಸ್ತುತ ಒಂದು ಬಾವಿಯನ್ನು ನಿರ್ಮಾಣ ಮಾಡಲು 1.50 ಲಕ್ಷ ರೂಗಳನ್ನು ವ್ಯಯಿಸಲಾಗುತ್ತಿದೆ. ಅದಾಗ್ಯೂ ಕೆಲವೊಂದು ಕಡೆಗಳಲ್ಲಿ ಈ ಮೊತ್ತ ಹೆಚ್ಚಾಗಬಹುದು ಅಥವಾ ಕಡಿಮೆನು ಆಗಬಹುದು. 30 ರಿಂದ 50 ಅಡಿ ಆಗಿದ್ದು ಕೆಲ ಭಾಗದಲ್ಲಿ ಆಳದಲ್ಲಿ ಇನ್ನು ಕೆಲ ಭಾಗದಲ್ಲಿ ಮೇಲ್ಭಾಗದಲ್ಲಿ ಬಾವಿಗಳನ್ನು ತೆರೆಯಲಾಗುತ್ತಿದೆ. ಮದ್ಯದಲ್ಲಿ ನೀರು ಸಿಗುತ್ತದೆ. ಉದ್ಯೋಗ ಖಾತರಿ ಯೋಜನೆಯಡಿ 50;50 ಅನುಪಾತದಡಿ ಶಿವಮೊಗ್ಗ ಜಿಲ್ಲೆ ಸಾರ್ವಜನಿಕ ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

### ಬಾವಿ ನಿರ್ಮಾಣದಲ್ಲಿ ಅಕುಶಲ ಕಾರ್ಮಿಕರ ಪಾತ್ರ:

ಸಾರ್ವಜನಿಕ ಬಾವಿಗಳ ನಿರ್ಮಾಣದಲ್ಲಿ ಆಕುಶಲ ಕಾರ್ಮಿಕರೆ ಬಾವಿಗಳನ್ನು ತೋಡುವಿಕೆಗೆ 4 ಜನ ಕೂಲಿ ಕಾರ್ಮಿಕರು ಬಾವಿಯ ಒಳಗೆ ಇಳಿದು ಮಣ್ಣನ್ನು ಕೊರೆದು ಬುಟ್ಟಿಗೆ ತುಂಬಲು. ಮತ್ತು ಮೇಲ್ಬಗದಲ್ಲಿ 4 ರಿಂದ ಜನ ಕಾರ್ಮಿಕರು ಮಣ್ಣನ್ನು ದಾರದ (ರೋಪ್) ಸಹಾಯದಿಂದ ಮೇಲೆ ಎಳೆಯಲು ಆಕುಶಲ ಕಾರ್ಮಿಕರು ಇರುತ್ತಾರೆ. ನಂತರ ಬಾವಿಯ ರಿಂಗ್‌ಗಳನ್ನು ತಯಾರಿಸಲು ಸಹಾಯ ಕುಶಲ ಕಾರ್ಮಿಕರಿಗೆ ಸಹಾಯಕರಾಗಿ ಆಕುಶಲ ಕಾರ್ಮಿಕರ ಅವಶ್ಯಕತೆ ಇದೆ. ನಂತರ ಬಾವಿಗಳ ಒಳಗೆ ರಿಂಗಗಳನ್ನು ಜೋಡಣೆ ಸಂದರ್ಭದಲ್ಲಿ ಕುಶಲ ಕಾರ್ಮಿಕರೊಂದಿಗೆ ಆಕುಶಲ ಕಾರ್ಮಿಕರ ಅವಶ್ಯಕತೆ ಇದೆ. ನಂತರ ಬಾವಿಗಳ ಕೈಪಿಡಿ ನಿರ್ಮಾಣಕ್ಕೆ ಇಟ್ಟಿಗೆಗಳ ಜೋಡಣೆ ಸಾಗಣಿಕೆ ಮಾಡಲು ಒಟ್ಟಾರೆಯಾಗಿ ಬಾವಿಯ ನಿರ್ಮಾಣದ ಪ್ರಾರಂಭದಿಂದ ಮುಕ್ತಾಯದವರೆಗೆ ಆಕುಶಲ ಕಾರ್ಮಿಕರು ಅಗತ್ಯ ಇದೆ. ಸಾರ್ವಜನಿಕ ಭಾವಿಯ ನಿರ್ಮಾಣದಿಂದ ಒಂದು ಕುಡಿಯುವ ನೀರಿನ ಕಾಮಗಾರಿ ನಿರ್ಮಾಣದ ಜೊತೆಗೆ ಆಕುಶಲ ಕಾರ್ಮಿಕರಿಗೆ ಕೂಲಿ ಒದಗಿಸಲು ಸಾದ್ಯವಾಗಿದೆ.

### ಸಾರ್ವಜನಿಕ ಬಾವಿಗಳ ಉಪಯೋಗ:

ಮಲೆನಾಡಿಗೂ ತಟ್ಟಿದ ಬರ ಗ್ರಾಮೀಣ ಭಾಗದಲ್ಲಿ ಕೈಕೊಡುತ್ತಿರುವ ವಿದ್ಯುತ್‌ನಿಂದ ಪಂಪ್‌ಹೌಸ್ ಮೂಲಕ ನೀರು ಗ್ರಾಮಸ್ಥರಿಗೆ ನಿಗದಿತ ಸಮಯದಲ್ಲಿ ಪೂರ್ಣ ಪ್ರಮಾಣದ ನೀರು ಸರಬರಾಜು ಮಾಡುವುದು ಕಷ್ಟ. 3 ಕುಟುಂಬಗಳಿಗೆ ಒಂದರಂತೆ ನಿರ್ಮಾಣ ಮಾಡಿದ ಬಾವಿಗಳ ನಿರ್ವಹಣೆಯನ್ನು ಆ ಕುಟುಂಬಗಳೇ ನಿರ್ವಹಿಸುತ್ತಿದ್ದಾರೆ. ಶಾಲೆ, ಅಂಗನವಾಡಿ ಕೇಂದ್ರಗಳಲ್ಲಿ ನಿರ್ಮಾಣ ಮಾಡಿದ ತೆರೆದ ಬಾವಿಗಳ ನಿರ್ವಹಣೆಯನ್ನು ಅವರೆ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಗ್ರಾಮ ಪಂಚಾಯಿತಿಗಳ ಪಾತ್ರ ಕೇವಲ ಯೋಜನೆಯಡಿ ಬಾವಿ ನಿರ್ಮಾಣವಷ್ಟೇ ನಿರ್ವಹಣೆ ಜವಾಬ್ದಾರಿಯಲ್ಲಿ ಸಾರ್ವಜನಿಕರಿದ್ದು. ಗ್ರಾಮ ಪಂಚಾಯಿತಿಗಳಿಗೆ ತೆರೆದ ಬಾವಿಗಳ ನಿರ್ವಹಣೆ ಹೊರೆ ಕಡಿಮೆ.

ಒಟ್ಟಾರೆಯಾಗಿ ಮಹತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ಸಾರ್ವಜನಿಕ ಬಾವಿಗಳನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದರಿಂದ ಸಮುದಾಯದ ಎಲ್ಲಾ ವರ್ಗದ ಜನರಿಗೆ ಕುಡಿಯುವ ನೀರನ್ನು ತಲುಪಿಸುವುದುರ ಜೊತೆ ಉದ್ಯೋಕಾಂಕ್ಷಿಗಳಿಗೆ ಉದ್ಯೋಗ ನೀಡಿ ಆ ಮೂಲಕ ನಿರುದ್ಯೋಗ ಪ್ರಮಾಣ ಕಡಿಮೆಗೊಳಿಸ ಲಾಗುತ್ತಿದೆ. ಕೂಲಿ ಕಾರ್ಮಿಕರಿಗೆ ಕೂಲಿಯನ್ನು ನೀಡಲು ಸಹಕಾರಿಯಾಗಿದೆ. ಹಾಗೂ ಯೋಜನೆಯ ಯಶಸ್ವಿ ಅನುಷ್ಟಾನ ಮತ್ತು ಉತ್ತಮವಾದ ಆಸ್ತಿಗಳನ್ನು ಸೃಜನೆ ಮಾಡಲು ಸಹಕಾರಿಯಾಗಿದೆ.

ಲೇಖನ

# ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ನಡೆದು ಬಂದ ಹಾದಿ



ನಿಂಗೇಗೌಡ

ನಿವೃತ್ತ ಪೀಠಾಧಿಕಾರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮಹಾತ್ಮ ಗಾಂಧೀಜಿಯವರ ಸಂಪೂರ್ಣ ಸ್ವರಾಜ್ಯದ ಕಲ್ಪನೆಯು ಭಾರತದ ಪ್ರತಿ ಹಳ್ಳಿಯಲ್ಲಿಯೂ ಸ್ವಯಂ ಆಡಳಿತದ ವ್ಯವಸ್ಥೆಯನ್ನು ರೂಪಿಸುವ ಉದ್ದೇಶವನ್ನು ಒಳಗೊಂಡಿತ್ತು. ಅದರಂತೆ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತಂದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.


## ಸ್ವಾತಂತ್ರ್ಯ ಪೂರ್ವದ ಪಂಚಾಯತ್ ರಾಜ್ ವ್ಯವಸ್ಥೆ :

ಸ್ವಾತಂತ್ರ್ಯ ಪೂರ್ವದಲ್ಲಿದ್ದ ಸ್ಥಳೀಯ ರಾಜರುಗಳ ಸಂಸ್ಥಾನಗಳಲ್ಲಿ ಮತ್ತು ಬ್ರಿಟೀಷ್ ಆಳ್ವಿಕೆಯ ಪ್ರದೇಶಗಳಲ್ಲಿಯೂ ಸ್ಥಳೀಯ ಆಡಳಿತವನ್ನು ಪಂಚರಗಳ ಮುಖಾಂತರ ನಿರ್ವಹಿಸಲಾಗುತ್ತಿತ್ತು. 1882 ರ ನಂತರ ಲಾರ್ಡ್‌ರಿಪ್ಪನ್ ಜಾರಿಗೊಳಿಸಿದ ಆಡಳಿತ ಸುಧಾರಣೆಯ ಫಲವಾಗಿ ಈ ಸ್ಥಳೀಯ ಆಡಳಿತ ವ್ಯವಸ್ಥೆಯ ಮತ್ತಷ್ಟು ಸಧೃಡಗೊಂಡವು. ಗ್ರಾಮೀಣ ಭಾರತದ ಹಳ್ಳಿಗಳಲ್ಲಿ ಗ್ರಾಮದ ಆಡಳಿತ, ಉಸ್ತುವಾರಿ ಹಾಗೂ ರಕ್ಷಣೆಯ ಜವಾಬ್ದಾರಿಯನ್ನು



ಗ್ರಾಮಸ್ಥರೇ ತಮ್ಮಲ್ಲಿ ಆಯ್ಕೆ ಮಾಡಿಕೊಂಡ ಪ್ರಮುಖ 5 ಮತ್ತು ಅದಕ್ಕಿಂತ ಹೆಚ್ಚು ಜನರು ನಿರ್ವಹಿಸುತ್ತಿದ್ದರು. ಅಂತಹ ಗುಂಪಿನ ಪ್ರಮುಖ ಐವರನ್ನು ಪಂಚರೆಂದು ಗುರುತಿಸಲಾಗುತ್ತಿದ್ದು, ಅವರುಗಳು ಕೈಗೊಂಡ ತೀರ್ಮಾನದಂತೆ ಹಳ್ಳಿಯಲ್ಲಿ ಎಲ್ಲಾ ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿತ್ತು. ಆದರೆ ಈ ವ್ಯವಸ್ಥೆಯಲ್ಲಿ ಬಲಿಷ್ಠ ಕೋಮಿನ ಜನಾಂಗದವರು ಆದ್ಯತೆಯನ್ನು ಪಡೆಯುತ್ತಿದ್ದರು. ಆದರು ಕೆಲವೊಂದು ಗ್ರಾಮಗಳಲ್ಲಿ ನ್ಯಾಯ ನಿರ್ಣಯವು ಯಾವುದೇ ಸ್ವಹಿತ, ಸ್ವಜನ ಪಕ್ಷಪಾತ ಹಾಗೂ ಜಾತಿ ಆಧಾರಿತವಾಗಿರುತ್ತಿರಲಿಲ್ಲ. ಇಂತಹ ವ್ಯವಸ್ಥೆಯಲ್ಲಿ ನ್ಯಾಯ ನಿರ್ಣಯ ಸರ್ವಸಮ್ಮತ್ತವಾಗಿರುತ್ತಿತ್ತು.

ಹಳೆಯ ಮೈಸೂರು ಪ್ರಾಂತ್ಯದಲ್ಲಿ ಪ್ರತಿ ಗ್ರಾಮಕ್ಕೆ ಗೌಡ, ಶಾನಭೋಗ(ಕರಣಿಕ), ಪಟೇಲ, ತೋಟಿ ಹಾಗೂ ತಳವಾರ ಎಂಬ ಐದು ಜನ ಪ್ರಮುಖರು ಗ್ರಾಮದ ಒಳಾಡಳಿತ, ನ್ಯಾಯ ನಿರ್ಣಯ ಹಾಗೂ ರಕ್ಷಣೆಯ ಜವಾಬ್ದಾರಿಯನ್ನು ಹೊಂದಿರುತ್ತಿದ್ದರು. ಈ ಐವರ ಸಮ್ಮುಖದಲ್ಲಿ ಊರಿನಲ್ಲಿ ಉಂಟಾಗುವ ಸಮಸ್ಯೆಗಳನ್ನು ಚರ್ಚಿಸಿ ಸರ್ವಸಮ್ಮತ್ತವಾದ ತೀರ್ಪನ್ನು




ನೀಡುತ್ತಿದ್ದರು. ಆದರೆ ಈ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಹಾಗೂ ದುರ್ಬಲ ವರ್ಗದವರಿಗೆ ಪ್ರಾತಿನಿಧ್ಯ ಇರುತ್ತಿರಲಿಲ್ಲ.

**ಸ್ವಾತಂತ್ರ್ಯಾ ನಂತರ ಪಂಚಾಯತ್ ರಾಜ್ ವ್ಯವಸ್ಥೆ:**

ಮಹಾತ್ಮ ಗಾಂಧೀಜಿಯವರ ಸಂಪೂರ್ಣ ಸ್ವರಾಜ್ಯದ ಕಲ್ಪನೆಯು ಭಾರತದ ಪ್ರತಿ ಹಳ್ಳಿಯಲ್ಲಿಯೂ ಸ್ವಯಂ ಆಡಳಿತದ ವ್ಯವಸ್ಥೆಯನ್ನು ರೂಪಿಸುವ ಉದ್ದೇಶವನ್ನು ಒಳಗೊಂಡಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಳ ಹಂತದಿಂದ ರೂಪಿಸಲು ಹಾಗೂ ಅಧಿಕಾರವನ್ನು ಮೇಲಿನ ಹಂತದಿಂದ ತಳ ಹಂತದವರೆಗೆ ವಿಕೇಂದ್ರೀಕರಿಸುವ ಪಂಚಾಯತ್ ಸಂಸ್ಥೆಗಳನ್ನು ರಚಿಸುವ ಮಹಾತ್ವಾಕಾಂಕ್ಷೆಯನ್ನು ಮಹಾತ್ಮ ಗಾಂಧೀಜಿಯವರು ಹೊಂದಿದ್ದರು.

ಸಂವಿಧಾನದ 40ನೇ ಪರಿಚ್ಛೇಧದಲ್ಲಿ “The state shall take steps to organize village panchayath and endow them with such powers and authority as may be necessary to enable them to function as units of self government” ಎಂದು ರಾಜ್ಯ ನಿರ್ದೇಶಿತತ್ವಗಳ ಪಟ್ಟಿಯಲ್ಲಿ ಅಳವಡಿಸಲಾಗಿರುತ್ತದೆ. ಈ ನಿಟ್ಟಿನಿಂದಾಗಿ ಕೇಂದ್ರ ಸರ್ಕಾರದ ಹಂತದಲ್ಲಿ ವಿಕೇಂದ್ರೀಕರಣ ತತ್ವದ ಹಾಗೂ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯ ಪರವಾಗಿದ್ದ, ಎಸ್.ಕೆ. ಡೇ.ರಂತಹ ಮಹನೀಯರುಗಳು ಪಂಚಾಯತ್ ರಾಜ್ ವ್ಯವಸ್ಥೆಗಳನ್ನು ಭಾರತದಲ್ಲಿ ರೂಪಿಸಲು ಹಲವಾರು ದಿಟ್ಟ ಕ್ರಮಗಳನ್ನು ಜಾರಿಗೆ ತಂದಿದ್ದರು.

ಹಳೆಯ ಮೈಸೂರು ಪ್ರಾಂತ್ಯದಲ್ಲಿ ಸರ್ಕಾರ 1949 ರಲ್ಲಿಯೇ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಶಾಸನಬದ್ಧವಾಗಿ ರೂಪಿಸಲು ಪ್ರಥಮವಾಗಿ ವಿ. ವೆಂಕಟಪ್ಪ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಶಿಫಾರಸ್ಸಿನಂತೆ the mysore village panchayath and district boards act, 1952 ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯಲ್ಲಿ 177 ಪ್ರಕರಣಗಳು ಇದ್ದವು ಹಾಗೂ ಇದಕ್ಕಿಂತಲೂ ಹಿಂದೆ ಜಾರಿಯಲ್ಲಿದ್ದ “The Mysore village Panchayath Act, 1926 and the Mysore District Board Act, 1926” ಕಾಯ್ದೆಯನ್ನು ನಿರಸನಗೊಳಿಸಲಾಗಿತ್ತು.

ಹೊಸ ಕಾಯ್ದೆಯನ್ವಯ ಜಿಲ್ಲಾ ಹಂತದಲ್ಲಿ ಜಿಲ್ಲಾ ಬೋರ್ಡ್‌ಗಳು, ತಾಲ್ಲೂಕು ಹಂತದಲ್ಲಿ ತಾಲ್ಲೂಕು ಅಭಿವೃದ್ಧಿ ಸಮಿತಿ ಹಾಗೂ ಪ್ರತಿ ಗ್ರಾಮಕ್ಕೆ ಅಥವಾ ಗ್ರಾಮಗಳ ಗುಂಪಿಗೆ ವಿಲೇಜ್ ಪಂಚಾಯತಿ / ಗ್ರೂಪ್ ಪಂಚಾಯತಿಗಳನ್ನು ಸ್ಥಾಪಿಸಲು ಅವಕಾಶವಿತ್ತು. ಇಂತಹ ಪಂಚಾಯತಿಗೆ ಚುನಾವಣೆಯ ಮೂಲಕ ಸದಸ್ಯರನ್ನು ಆಯ್ಕೆ ಮಾಡಬಹುದಾಗಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಜನ ಸಂಖ್ಯೆಗನುಗುಣವಾಗಿ ಮೀಸಲಾತಿಯನ್ನು ನಿರ್ದಿಷ್ಟಪಡಿಸಲಾಗಿತ್ತು. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿಗೆ ಕನಿಷ್ಠ 1 ಸ್ಥಾನವನ್ನು ಮೀಸಲಿರಿಸಬೇಕಿತ್ತು. ಗ್ರಾಮ ಪಂಚಾಯತಿಗಳಿಗೆ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಕಟ್ಟಡ, ವಾಣಿಜ್ಯ ಉದ್ಯಮ, ಖಾಲಿ ನಿವೇಶನ ಹಾಗೂ ಕೈಗಾರಿಕಾ ಕಟ್ಟಡಗಳ ಮೇಲೆ ತೆರಿಗೆ ವಿಧಿಸುವ ಅವಕಾಶವನ್ನು ಕಲ್ಪಿಸಲಾಗಿತ್ತು. ಪ್ರತಿ ಹಳ್ಳಿಯಲ್ಲಿಯೂ ರಸ್ತೆ, ಚರಂಡಿ ನಿರ್ಮಿಸಲು ನೈರ್ಮಲ್ಯವನ್ನು ಕಾಪಾಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು.

ತಾಲ್ಲೂಕು ಹಂತದಲ್ಲಿ ತಾಲ್ಲೂಕು ಅಭಿವೃದ್ಧಿ ಸಮಿತಿಯ ಉಸ್ತುವಾರಿಯಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಅಧೀನದಲ್ಲಿ ಎಲ್ಲಾ ಅಭಿವೃದ್ಧಿ ಇಲಾಖೆಯ

ವಿಸ್ತರಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ವಿವಿಧ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕರೀಸುವ ಹಾಗೂ ಉಸ್ತುವಾರಿ ಮಾಡುವ ಜವಾಬ್ದಾರಿಯನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸಂಬಂಧಪಟ್ಟ ವಿಸ್ತರಣಾಧಿಕಾರಿಗಳು ನಿರ್ವಹಿಸುತ್ತಿದ್ದರು.

ಜಿಲ್ಲಾ ಹಂತದಲ್ಲಿ ಜಿಲ್ಲಾ ಬೋರ್ಡ್ ಅಸ್ತಿತ್ವದಲ್ಲಿತ್ತು. ಅಂದು ರಾಜ್ಯದಲ್ಲಿ 9 ಜಿಲ್ಲೆಗಳು, ಅಂದರೆ ಬೆಂಗಳೂರು (40), ಮೈಸೂರು (30), ಮಂಡ್ಯ (25), ಹಾಸನ (23), ಶಿವಮೊಗ್ಗ (20), ಚಿಕ್ಕಮಗಳೂರು (20), ಚಿತ್ರದುರ್ಗ (29), ತುಮಕೂರು (40) ಹಾಗೂ ಕೋಲಾರ (34), ಜಿಲ್ಲೆಗಳು ಅಸ್ತಿತ್ವದಲ್ಲಿದ್ದವು. ಆವರಣದಲ್ಲಿ ನಮೂಧಿಸಿರುವ ಸಂಖ್ಯೆಯು ಸದಸ್ಯರುಗಳನ್ನು ಈ ಜಿಲ್ಲಾ ಬೋರ್ಡ್ ಹೊಂದಿದ್ದವು. ಈ ಸದಸ್ಯರುಗಳನ್ನು ಪ್ರತಿ ತಾಲ್ಲೂಕಿನ ಗ್ರಾಮ ಪಂಚಾಯತಿಯ ಸದಸ್ಯರುಗಳು ಚುನಾವಣೆಯ ಮೂಲಕ ಆಯ್ಕೆ ಮಾಡುತ್ತಿದ್ದರು. ಪರಿಶಿಷ್ಟ ಜಾತಿಯವರಿಗೆ ಅವರ ಜನ ಸಂಖ್ಯೆಗನುಗುಣವಾಗಿ ಮೀಸಲಾತಿಯನ್ನು ಕಲ್ಪಿಸ ಲಾಗಿತ್ತು.

ಮೇಲ್ಕಂಡ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಸಧೃಡಗೊಳಿಸಲು 1954 ರಲ್ಲಿ **ಶ್ರೀ ಚಂದ್ರಶೇಖರಯ್ಯ ಸಮಿತಿಯನ್ನು** ರಚಿಸಲಾಗಿತ್ತು. 1957 ರಲ್ಲಿ ರಾಷ್ಟ್ರ ಮಟ್ಟದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸುಧಾರಣೆಗಾಗಿ ಬಲವಂತ್‌ರಾಯ್ ಮೆಹತಾ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ರಾಷ್ಟ್ರ ವ್ಯಾಪ್ತಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸ್ಥಾಪಿಸಲು ಅನುವಾಗುವಂತಹ ಮಹತ್ತರವಾದ ವರದಿಯನ್ನು ಸಲ್ಲಿಸಿತ್ತು. ಇದೇ ಸಮಯದಲ್ಲಿ ರಾಜ್ಯ ಪುನರ್ ವಿಂಗಡಣೆಯಾದ ನಂತರ ಇಡೀ ರಾಜ್ಯಕ್ಕೆ (ವಿಶಾಲ ಕರ್ನಾಟಕ) ಕ್ಕೆ ಅನ್ವಯವಾಗುವಂತೆ ಪಂಚಾಯತ್ ರಾಜ್ ಕಾಯ್ದೆಯನ್ನು ರೂಪಿಸಲು 1962 ರಲ್ಲಿ **ಶ್ರೀ ಕೊಂಡಜ್ಜಿ ಬಸಪ್ಪ** ರವರ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯ ಶಿಫಾರಸ್ಸಿನಂತೆ ಹಳೆಯ ಮೈಸೂರು ರಾಜ್ಯಕ್ಕೆ ಹೊಸದಾಗಿ ಸೇರ್ಪಡೆಯಾದ ವಿವಿಧ ಪ್ರಾಂತ್ಯಗಳಲ್ಲಿ ಅಸ್ತಿತ್ವದಲ್ಲಿದ್ದ **ಕೆಳಕಂಡ ಕಾಯ್ದೆಗಳನ್ನು ಪುನರ್ ಪರಿಶೀಲಿಸಿ "The Mysore (Karnataka) Village Panchayath and District Board Act, 1959" ಕಾಯ್ದೆಯನ್ನು ಜಾರಿಗೊಳಿಸಲಾಗಿತ್ತು.**

- Bombay District Local Boards Act, 1923 and Bombay Village Panchayath Act 1923.
- Madras Boards Act, 1930 and Madras Village Panchayath Act 1950.
- Hyderabad District Boards Act, 1956 and Hyderabad Village Panchayath Act, 1951 and
- Coorg Panchayath Act, 1956.

ಈ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳ ಆಡಳಿತಗಳನ್ನು ನಿರ್ವಹಿಸಲು ಅಂದಿನ ಮೈಸೂರು ಸರ್ಕಾರ "ಅಭಿವೃದ್ಧಿ ಮತ್ತು ಸ್ಥಳೀಯ ಸರ್ಕಾರದ ವಿಭಾಗ" ಹಾಗೂ ಸಾಮಾನ್ಯ ಸೇವೆಗಳು ಎಂಬ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಧಿಸೂಚನೆಯ ಸಂಖ್ಯೆ:GAD 28 ORR 62, Dated: 24-11-1962 ನ್ನು ಜಾರಿಗೊಳಿಸಿತ್ತು. ಇದರನ್ವಯ ಈ ಕೆಳಕಂಡ ಪ್ರಮುಖ ಹುದ್ದೆಗಳ ಜೊತೆಗೆ ಹಲವಾರು ಹುದ್ದೆಗಳನ್ನು ಸೃಜಿಸಲಾಗಿದೆ.

| ಕ್ರ.ಸಂ | ಹುದ್ದೆ ಪದನಾಮ | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ವಿದ್ಯಾರ್ಹತೆ |
|---|---|---|---|---|
| 1 | ಅಭಿವೃದ್ಧಿ ಆಯುಕ್ತರು | 1 | ರೂ.2250.. | ಐ.ಎ.ಎಸ್. |
| 2 | ಉಪ ಅಭಿವೃದ್ಧಿ ಆಯುಕ್ತರು | 1 | ರೂ.800–1800.... | ಆಡಳಿತ ಸೇವೆಗಳು |
| 3 | ಜಿಲ್ಲಾ ಅಭಿವೃದ್ಧಿ ಆಯುಕ್ತರುಗಳು / ಮುನಿಷಿಪಲ್ ಆಯುಕ್ತರುಗಳು | 23 | ರೂ. 350–800 | ಆಡಳಿತ ಸೇವೆಗಳು – ಬಡ್ತಿ |
| 4 | ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು | 180 | ರೂ. 250–500 | ಪದವಿ |
| 5 | ಮುನಿಷಿಪಲ್ ಅಧಿಕಾರಿಗಳು | 15+30 | ರೂ. 150–250 | ಪದವಿ ಎಸ್.ಎಸ್.ಎಲ್.ಸಿ |
| 6 | ಗ್ರಾಮ ಸೇವಕರು | 1400+275 | ರೂ. 110–220 ರೂ. 80–150 | ಪದವಿ ಎಸ್.ಎಸ್.ಎಲ್.ಸಿ |
| 7 | ವಿವಿಧ ವೃಂದದದಲ್ಲಿ ಒಟ್ಟು ಹುದ್ದೆಗಳನ್ನು ಸೂಚಿಸಲಾಗಿದೆ. | —— | —— | |



ಪಂಚಾಯತ್ ರಾಜ್ ಇತಿಹಾಸದಲ್ಲಿ 3 ಹಂತದ ವ್ಯವಸ್ಥೆಗಳನ್ನು ಕಾಣಬಹುದಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆ 1959-64 ರವರೆಗೆ ಕ್ರಿಯಾಶೀಲವಾಗಿತ್ತು. 1965-69 ರವರೆಗೆ ನಿಸ್ತೇಜವಾಗಿತ್ತು. 1969-77 ರವರೆಗೆ ಯಾವುದೇ ಬದಲಾವಣೆಗಳನ್ನು ಕಂಡಿರುವುದಿಲ್ಲ. 1978 ರಲ್ಲಿ **ಅಶೋಕ ಮೆಹತಾ ಸಮಿತಿಯು** ಸಲ್ಲಿಸಿದ ಶಿಫಾರಸ್ಸಿನಂತೆ ರಾಜ್ಯದ ಪಂಚಾಯತ್ ವ್ಯವಸ್ಥೆಯನ್ನು ಪುನರ್ ರೂಪಿಸಲು ರಾಜ್ಯ ಸರ್ಕಾರಗಳು ಚಿಂತನೆ ನಡೆಸಿದವು. ಅಶೋಕ ಮೆಹತಾ ಸಮಿತಿಯು ತನ್ನ ಶಿಫಾರಸ್ಸಿನಲ್ಲಿ 2 ಹಂತದ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತದೆ. ಇದರಿಂದಾಗಿ ಜಿಲ್ಲಾ ಹಂತದಲ್ಲಿ ಜಿಲ್ಲಾ ಪರಿಷತ್‌ಗಳು ಹಾಗೂ ಮಂಡಲ ಪಂಚಾಯತಿಗಳ ಸ್ಥಾಪನೆಗೆ ಚಾಲನೆ ನೀಡಲಾಯಿತು. ಈ ಶಿಫಾರಸ್ಸನ್ನು ಅನುಸರಣೆಗೊಳಿಸಲು ಅಂದಿನ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಮತ್ತು ಕಾನೂನು ಸಚಿವರಾದ ಡಿ.ಕೆ. ನಾಯ್ಕರ್‌ರವರ ಅವಿರತ ಶ್ರಮದಿಂದಾಗಿ ರಾಜ್ಯದಲ್ಲಿ The Karnatak Zilla Parishads, Taluk Panchayath Samitis, Mandal Panchayath and Nyaya Panchayath Act, 1983 ನ್ನು 1987 ರಲ್ಲಿ ಜಾರಿಗೊಳಿಸಲಾಯಿತು. ಈ ಕಾಯ್ದೆಯು ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಹೊಸ ಮನ್ವಂತರಕ್ಕೆ ಬುನಾದಿಯಾಗಿ ಪರಿಣಮಿಸಿತು.

ಈ ಅಧಿನಿಯಮದಲ್ಲಿ ಎರಡು ಹಂತದ ಚುನಾಯಿತ ಸಂಸ್ಥೆಗಳು (ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್) ಹಾಗೂ ತಾಲ್ಲೂಕು ಪಂಚಾಯತಿ ಸಮಿತಿಗಳು ಅಸ್ತಿತ್ವದಲ್ಲಿದ್ದವು. ರಾಜ್ಯದಲ್ಲಿ 2469 ಮಂಡಲ ಪಂಚಾಯತಿಗಳು, 173 ತಾಲ್ಲೂಕು ಪಂಚಾಯತಿ ಸಮಿತಿಗಳು(ಬೆಂಗಳೂರು ನಗರ ಜಿಲ್ಲೆಯ 03 ತಾಲ್ಲೂಕುಗಳನ್ನು ಹೊರತುಪಡಿಸಿ) ಹಾಗೂ 19 ಜಿಲ್ಲಾ ಪರಿಷತ್‌ಗಳು ಅಸ್ತಿತ್ವದಲ್ಲಿದ್ದವು.

ಪ್ರತಿ ಮಂಡಲ ಪಂಚಾಯತಿಯ ಜನಸಂಖ್ಯೆ ಸರಾಸರಿ 8000-12000. ಸರಾಸರಿ 400 ಜನಸಂಖ್ಯೆಗೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕಾಗಿತ್ತು. ಪ್ರತಿ ಮಂಡಲ ಪಂಚಾಯತಿಗೆ ಪ್ರಧಾನ ಮತ್ತು ಉಪ ಪ್ರಧಾನ ಹುದ್ದೆಗಳಿದ್ದು, ಈ ಹುದ್ದೆಗಳಿಗೆ ಇಬ್ಬರು ಚುನಾಯಿತ ಸದಸ್ಯರನ್ನು ಆಯ್ಕೆ ಮಾಡಲು ಅವಕಾಶವಿತ್ತು. ಸರಾಸರಿ 28000 ಜನಸಂಖ್ಯೆಗೆ ಒಬ್ಬ ಪ್ರತಿನಿಧಿಯನ್ನು ಜಿಲ್ಲಾ ಪರಿಷತ್‌ಗೆ ಆಯ್ಕೆ ಮಾಡಲು ಅವಕಾಶವಿತ್ತು. ಈ ಸಂಸ್ಥೆಗಳಿಗೆ 1987 ರ ಜನವರಿಯಲ್ಲಿ ಸಾರ್ವಜನಿಕ ಚುನಾವಣೆಯನ್ನು ನಡೆಸಲಾಗಿತ್ತು.

ಪ್ರತಿಯೊಂದು ಮಂಡಲ ಪಂಚಾಯತಿಯ ಒಟ್ಟು ಸದಸ್ಯರ ಸಂಖ್ಯೆಯ ಪ್ರತಿಶತ 25 ರಷ್ಟು ಸಂಖ್ಯೆಯ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿತ್ತು. ಈ ಮೀಸಲಾತಿಯ ಸ್ಥಾನಗಳ ಪೈಕಿ ಒಂದು ಸ್ಥಾನವನ್ನು ಪ.ಜಾತಿ ಅಥವಾ ಪ.ಜನಾಂಗಗಳಿಗೆ ಸೇರಿದ ಮಹಿಳೆಗೆ ಕಾಯ್ದಿರಿಸಲಾಗಿತ್ತು. ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಯು ಮಂಡಲ ಪಂಚಾಯತಿಗೆ ಚುನಾಯಿತನಾಗದಿದ್ದಾಗ ಜಿಲ್ಲಾ ಪರಿಷತ್ ಅಂತಹ ವರ್ಗಗಳಿಗೆ ಸೇರಿದ ಇಬ್ಬರನ್ನು ಮಂಡಲ ಪಂಚಾಯತಿಗೆ ನಾಮಕರಣ ಮಾಡ ಲಾಗುತ್ತಿತ್ತು. ಪ.ಜಾತಿ ಅಥವಾ ಪ. ಜನಾಂಗ ಗಳಿಗೆ ಅವರುಗಳ ಒಟ್ಟು ಜನಸಂಖ್ಯೆಯ ಆಧಾರದ ಮೇಲೆ ಸ್ಥಾನಗಳನ್ನು ಮೀಸಲಿಡಲಾಗಿತ್ತು ಹಾಗೂ ಪ್ರತಿಶತ 18 ಕ್ಕೆ ಕಡಿಮೆ ಇಲ್ಲದಂತೆ ಸ್ಥಾನಗಳನ್ನು ಮೀಸಲಿಡ ಲಾಗಿತ್ತು. ಗ್ರಾಮ ಸಭೆಗಳನ್ನು ನಡೆಸುವುದನ್ನು ಶಾಸನ ಬದ್ಧಗೊಳಿಸಲಾಗಿತ್ತು. ಅಧಿಕಾರ ವಿಕೇಂದ್ರೀಕರಣದ ತತ್ವವನ್ನು ಅನುಷ್ಠಾನಗೊಳಿಸಿ 20 ಪ್ರಮುಖ ಇಲಾಖೆಗಳಾದ ಕೃಷಿ, ರೇಷ್ಮೆ, ತೋಟಗಾರಿಕೆ,

ಪಶುಸಂಗೋಪನೆ, ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಇಲಾಖೆ, ಸಣ್ಣ ನೀರಾವರಿ ಮುಂತಾದ ಅಭಿವೃದ್ಧಿ ಇಲಾಖೆಗಳ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಪಂಚಾಯತ್ ಸಂಸ್ಥೆಗಳಿಗೆ ವಹಿಸಲಾಗಿತ್ತು. 257 ಯೋಜನಾ ಕಾರ್ಯಕ್ರಮಗಳನ್ನು ಜಿಲ್ಲಾ ಪರಿಷತ್‌ಗೆ ಹಾಗೂ 89 ಯೋಜನಾ ಕಾರ್ಯಕ್ರಮಗಳನ್ನು ಮಂಡಲ ಪಂಚಾಯತಿಗೆ ವರ್ಗಾಯಿಸಲಾಗಿತ್ತು. ಜಿಲ್ಲಾ ಪರಿಷತ್‌ಗೆ ಸಚಿವಾಲಯ ಸ್ವರೂಪದ ಆಡಳಿತ ವ್ಯವಸ್ಥೆಯನ್ನು ರೂಪಿಸಿದ್ದು, ಜಿಲ್ಲಾಧಿಕಾರಿ ಹುದ್ದೆಗೆ ಉನ್ನತವಾದ ಮುಖ್ಯಕಾರ್ಯದರ್ಶಿ ಹುದ್ದೆಯನ್ನು ಪ್ರತಿ ಜಿಲ್ಲಾ ಪಂಚಾಯತಿಯಲ್ಲಿ ಸೃಜಿಸಿ ಆಡಳಿತ ವ್ಯವಸ್ಥೆಯ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳ ಕಾರ್ಯನಿರ್ವಹಣೆ ಮತ್ತು ಯೋಜನೆಗಳ ಅನುಷ್ಠಾನಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಶಾಸನಬದ್ಧವಾದ ಹಣಕಾಸು ಆಯೋಗವನ್ನು ರಚಿಸಲಾಗಿತ್ತು. ಜನಸಂಖ್ಯೆಯ ಆಧಾರದ ಮೇಲೆ ತಲಾನುಧಾನ ಜಿಲ್ಲಾ ಪರಿಷತ್‌ಗಳಿಗೆ ರೂ.2.50 ಹಾಗೂ ಮಂಡಲ ಪಂಚಾಯತಿಗಳಿಗೆ ರೂ.7.50 ರೂಗಳನ್ನು ಬಿಡುಗಡೆ ಮಾಡಲಾಗುತ್ತಿತ್ತು. 1983 ರಲ್ಲಿನ ಕಾಯ್ದೆಯನ್ವಯ ಮೊದಲನೇ ಹಣಕಾಸು ಆಯೋಗವನ್ನು **ಡಾ॥ ಹೊನ್ನಾವರ್,** ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು.

**ಕರ್ನಾಟಕ, ಪಶ್ಚಿಮ ಬಂಗಾಳ, ಕೇರಳ ಹಾಗೂ ರಾಜಸ್ಥಾನಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಪರಿಣಾಮಕಾರಿ ಹಾಗೂ ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿದ ಅಂದಿನ ಪ್ರಧಾನಿ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿಯವರು** ಇಡೀ ರಾಷ್ಟ್ರದಲ್ಲಿ ಸ್ಥಳೀಯ ಸರ್ಕಾರದ ಆಡಳಿತವನ್ನು ಸ್ಥಾಪಿಸಲು ಹಾಗೂ ಅದರ ಮೂಲಕ ದೇಶದ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ಸಂವಿಧಾನಕ್ಕೆ 73 ಮತ್ತು 74 ನೇ ತಿದ್ದುಪಡಿಯನ್ನು ತರುವ ಮೂಲಕ ಸ್ಥಳೀಯ ಸಂಸ್ಥೆಗಳಾದ ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರಾಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಿ ಸಂವಿಧಾನಬದ್ಧ ಅಧಿಕಾರವನ್ನು ನೀಡಲು ಪ್ರಯತ್ನಿಸಿದ್ದರು. ಈ ಉದ್ದೇಶವನ್ನು **ದಿವಂಗತ ನರಸಿಂಹರಾವ್,** ರವರು ತಮ್ಮ ಅಧಿಕಾರದ ಅವಧಿಯಲ್ಲಿ ಜಾರಿಗೆ ತಂದರು. ಇದರಿಂದಾಗಿ ಸಂವಿಧಾನಕ್ಕೆ ಪರಿಚ್ಛೇದ 243 ನೇ ಪ್ರಕರಣಗಳಿಗೆ ತಿದ್ದುಪಡಿ ತಂದು ಸಂವಿಧಾನದ ಭಾಗ IX ರಲ್ಲಿ243(ಎ) ರಿಂದ 243(ಒ) ಗಳನ್ನು ಹಾಗೂ 11ನೇ ಪರಿಶಿಷ್ಠದಲ್ಲಿ ವಿವಿಧ ಅಭಿವೃದ್ಧಿಗೆ ಸಂಬಂಧಿಸಿದ 29 ವಿಷಯಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಹಿಸಲಾಗಿರುತ್ತದೆ.

**ಸಂವಿಧಾನದ 73 ನೇ ತಿದ್ದುಪಡಿಗನುಗುಣವಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ನ್ನು ದಿನಾಂಕ:10-05-1993 ರಿಂದ ಜಾರಿಗೊಳಿಸಲಾಗಿದೆ.** ಈ ಅಧಿನಿಯಮದಲ್ಲಿ 321 ಪ್ರಕರಣಗಳಿರುತ್ತವೆ. ಈ ಅಧಿನಿಯಮದಡಿ 3 ಹಂತದ ಚುನಾಯಿತ ಪಂಚಾಯತ್ ಸಂಸ್ಥೆಗಳಾದ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತಿಗಳು ಕಾರ್ಯ ನಿರ್ವಹಿಸುತ್ತಿವೆ. ಈ ಅಧಿನಿಯಮವನ್ನು ಕಾಲಕಾಲಕ್ಕೆ ಅಗತ್ಯತೆಗನುಗುಣವಾಗಿ ತಿದ್ದುಪಡಿ ಮಾಡಲಾಗಿರುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಜನಸ್ನೇಹಿಯಾಗಿಸಲು, ಭಯಮುಕ್ತ, ವ್ಯಾಜ್ಯಮುಕ್ತ, ಬಯಲು ಬಯಿರ್ದೆಸೆ ಮುಕ್ತ ಹಾಗೂ ತ್ಯಾಜ್ಯಮುಕ್ತವನ್ನಾಗಿಸಲು 2015-2016 ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಮುಖ 88 ಪ್ರಕರಣಗಳಿಗೆ ತಿದ್ದುಪಡಿ ತರಲಾಗಿರುತ್ತದೆ. ಈ ಎಲ್ಲಾ ಹೊಸ ತಿದ್ದುಪಡಿಗಳಿಗೆ ಅವಶ್ಯಕವಾಗಿರುವ ನಿಯಮಗಳನ್ನು ಸಹ ರಚಿಸಲಾಗಿರುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಲು ಪ್ರತ್ಯೇಕ ರಾಜ್ಯ ಚುನಾವಣಾ ಆಯೋಗವನ್ನು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಅನುವಾಗುವಂತೆ ಶಿಫಾರಸ್ಸನ್ನು ಮಾಡಲು ರಾಜ್ಯ ಹಣಕಾಸು ಆಯೋಗವನ್ನು ರಚಿಸಲು ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಯಶೋಗಾಥೆ

# ಶಿರಗುಪ್ಪಿ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳು



ಗೋಪಾಲ ಪಿ. ಮಾಳಿ

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಶಿರಗುಪ್ಪಿ ಗ್ರಾಮವು ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ, ವಿವಿಧ ಪ್ರಶಸ್ತಿಗಳನ್ನು ಪಡೆದು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಶಿರಗುಪ್ಪಿ ಗ್ರಾಮವು ಒಂದು ಚಿಕ್ಕ ಗ್ರಾಮ. ಈ ಗ್ರಾಮವು ಎದುರಿಸಿದ ನೀರಿನ ಸಮಸ್ಯೆಯನ್ನು ಪ್ರಸ್ತಾಪಿಸುತ್ತ ಸನ್ 1982ಕ್ಕಿಂತ ಮೊದಲು ಶಿರಗುಪ್ಪಿ ಗ್ರಾಮದಲ್ಲಿ ಕುಡಿಯುವ ನೀರನ್ನು ತರಲು ಗ್ರಾಮಸ್ಥರು ಗ್ರಾಮದ ಒಂದೇ ಒಂದು ತೆರೆದ ಭಾವಿಯನ್ನು ಅವಲಂಬಿಸಿದ್ದರು, ಅದನ್ನು ಹೊರತು ಪಡಿಸಿದರೆ ಗ್ರಾಮದಿಂದ ನಾಲ್ಕು ಕಿ.ಮೀ ದೂರದಲ್ಲಿರುವ ಕೃಷ್ಣಾ ನದಿಯಿಂದ ನೀರನ್ನು ತಲೆಯ ಮೇಲೆ ಹೊತ್ತು ತರುವ ಪ್ರಸಂಗ. ಗ್ರಾಮದ ಒಟ್ಟು ಜನರ ದಿನ ನಿತ್ಯ ಕಾಯಕ ನೀರು ತರುವ ಕಾಯಕವೆ ತಲೆನೋವಾಗಿ ಪರಿಣಮಿಸಿತ್ತು.




ಈ ಪ್ರಸಂಗವನ್ನು ಸರಕಾರದ ಗಮನಕ್ಕೆ ತಂದಾಗ ಸನ್ 1982–83 ರಲ್ಲಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆ ಹರಿಸುವ ಸಲುವಾಗಿ ಶಿರಗುಪ್ಪಿ ಹಾಗೂ ಜೂಗುಳ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಜನರಿಗೆ ಕುಡಿಯುವ ನೀರನ್ನು ಪೂರೈಸಲು ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ಕೃಷ್ಣಾ ನದಿಯ ಮಧ್ಯ ಬಾಗದಲ್ಲಿ ನೀರಿನ ಇಂಟ್ಯಾಕ್ ವೇಲ್ ನಿರ್ಮಿಸಿ ಅಲ್ಲಿಂದ ನದಿ ದಡದಲ್ಲಿ ಜಾಕವೆಲ್ಲ ನಿರ್ಮಿಸಿ 10 ಎಚ್.ಪಿ ಮೋಟಾರ ಮುಖಾಂತರ ಹಾಗೂ ಕೃಷ್ಣಾ ನದಿಯಿಂದ ಶಿರಗುಪ್ಪಿ ಗ್ರಾಮದ ವರೆಗೆ 4 ಕಿ.ಮೀ. ವರೆಗೆ 6 ಇಂಚ್ ಭೀಡ್ ಪೈಪ್‌ಲೈನ್ ಹಾಕಿಸಿ ಇದರ ಮೂಲಕ ಶಿರಗುಪ್ಪಿ ಗ್ರಾಮದ ಎತ್ತರ ಪ್ರದೇಶವಾದ ಮರಡಿ ಭಾಗದ ಸ್ಥಳದಲ್ಲಿ 2 ಲಕ್ಷ ಮತ್ತು 1 ಲಕ್ಷ ಸಾಮರ್ಥ್ಯವುಳ್ಳ ನೀರಿನ ಟ್ಯಾಂಕ್‌ಗಳನ್ನು ನಿರ್ಮಿಸಿ, ಸದರಿ ಟ್ಯಾಂಕ್‌ಗಳಿಂದ ಗ್ರಾಮದಲ್ಲಿ 6 ಇಂಚ್ ಸಿಮೆಂಟ್ ಪೈಪ್‌ಲೈನ್‌ನ ಮುಖಾಂತರ ಶಿರಗುಪ್ಪಿ ಹಾಗೂ ಜೂಗುಳ ಗ್ರಾಮ ಪಂಚಾಯತಿ

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರಗುಪ್ಪಿ ಗ್ರಾಮ ಪಂಚಾಯತಿ




ವ್ಯಾಪ್ತಿಯಲ್ಲಿನ ಗ್ರಾಮಸ್ಥರಿಗೆ ಕೇವಲ ಸಾರ್ವಜನಿಕ ನಲ್ಲಿಗಳ ಮೂಲಕ 15 ರಿಂದ 20 ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿತ್ತು.

1997–98ರಲ್ಲಿ ವಿಶ್ವ ಬ್ಯಾಂಕ್ ಯೋಜನೆ ಅಡಿಯಲ್ಲಿ 97 ಲಕ್ಷ ಮೊತ್ತದಲ್ಲಿ ಕೃಷ್ಣಾ ನದಿ ದಡದಲ್ಲಿ ಹಳೆ ಜಾಕವೆಲ್ ಮೇಲೆ ಪಂಪ್‌ಹೌಸ್ ನಿರ್ಮಿಸಿ ಅಲ್ಲಿ 22.5 ಎಚ್.ಪಿ ಸಾಮರ್ಥ್ಯದ 1 ಮೋಟಾರ್ ಅಳವಡಿಸಿ ಅಲ್ಲಿಂದ 8 ಇಂಚ್ ಪಿಯುಸಿ ಪೈಪ್‌ಲೈನ್ ಮುಖಾಂತರ 4 ಕಿ.ಮೀ ವರೆಗೆ ಗ್ರಾಮದ ಎತ್ತರದ ಪ್ರದೇಶವಾದ ಕುಡಿಯುವ ನೀರಿನ ಟಾಕಿ ಆವರಣದಲ್ಲಿ ನೀರು ಸಂಗ್ರಹಣ ಟ್ಯಾಂಕ (ತಳಮಟ್ಟದ) ಸ್ಲೋ ಸ್ಯಾಂಡ್ ಫಿಲ್ಟರ್‌ನ 4 ಭಾಗಗಳನ್ನು ನಿರ್ಮಿಸಿ, ನೀರು ಫಿಲ್ಟರ ಆದ ನಂತರ ಮತ್ತೊಂದು ಟ್ಯಾಂಕ್, ಪಂಪಹೌಸ್ ನಿರ್ಮಿಸಿ , ಅಲ್ಲಿ 7.5 ಎಚ್.ಪಿ. ಸಾಮರ್ಥ್ಯದ 2 ಮೋಟರಗಳ ಮುಖಾಂತರ 2.5 ಲಕ್ಷ ಸಾಮರ್ಥ್ಯದ ಜಲ ಸಂಗ್ರಹಾಲಯ ನಿರ್ಮಾಣ ಮಾಡಿ ಅಲ್ಲಿಂದ 6,5,4,3 ಹಾಗೂ 2 ಇಂಚಿನ ಪಿಯುಸಿ ಪೈಪ್‌ಲೈನ್‌ನ ಮುಖಾಂತರ ಗ್ರಾಮದಲ್ಲಿ ಅಂದಾಜು 14 ಕಿ.ಮೀ ಪೈಪ್‌ಲೈನ್‌ನನ್ನು ಶಿರಗುಪ್ಪಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಳವಡಿಸಿ, 1700 ವೈಯಕ್ತಿಕ ನಲ್ಲಿಗಳ ಸಂಪರ್ಕ ಮೂಲಕ ಗ್ರಾಮದ ಮನೆಗಳಿಗೆ ಫಿಲ್ಟರ್ ನೀರು ಪೂರೈಸಲು ಪ್ರಾರಂಭವಾಯಿತು.

ಶಿರಗುಪ್ಪಿ ಗ್ರಾಮದಲ್ಲಿಯ ಹಳೆಯ ಭೀಡಮೇನ ಪೈಪ್‌ಲೈನ್ ಕೆಟ್ಟು ಹೋಗಿದ್ದರಿಂದ ನೆರೆಹಾವಳಿ ನಿಧಿಯಲ್ಲಿ ರಾಜ್ಯ ಸರಕಾರದ ಯೋಜನೆ ಅಡಿಯಲ್ಲಿ ರೂ 24 ಲಕ್ಷ ವೆಚ್ಚದಲ್ಲಿ ಕೃಷ್ಣಾನದಿಯ ದಡದಲ್ಲಿರುವ ಜಾಕವೇಲದಿಂದ ಗ್ರಾಮದ ಕುಡಿಯುವ ನೀರಿನ ಆವರಣದ ನೀರಿನ ಟ್ಯಾಂಕ್‌ವರೆಗೆ (ಡಬ್ಲ್ಯೂ ಟಿ ಪಿ) 8" ಇಂಚಿನ ಪಿ ಯು ಸಿ ಪೈಪ್‌ಲೈನ್‌ವನ್ನು 4ಕಿ.ಮೀವರೆಗೆ ನಿರ್ಮಿಸಲಾಗಿದೆ ಹಾಗೂ ಜಾಕವೇಲದಲ್ಲಿ 22.5 ಎಚ್.ಪಿ ಸಾಮರ್ಥ್ಯದ ಮೋಟಾರ ಅಳವಡಿಸಲಾಗಿದೆ.

### ಜಲ ನಿರ್ಮಲ ಯೋಜನೆ

ಜಲ ನಿರ್ಮಲ ಯೋಜನೆಯಡಿಯಲ್ಲಿ ರೂ.24 ಲಕ್ಷಗಳ ವೆಚ್ಚದಲ್ಲಿ ಡಬ್ಲ್ಯೂಟಿ.ಪಿ ಆವರಣದ ಪಂಪ್‌ಹೌಸ್‌ದಲ್ಲಿ 10 ಎಚ್.ಪಿ ಸಾಮರ್ಥ್ಯದ ಮೋಟಾರು 3 ಲಕ್ಷ ಸಾಮರ್ಥ್ಯದ 1 ಓ.ಎಚ್.ಟಿ ಹಾಗೂ ಗ್ರಾಮದಲ್ಲಿ ಇನ್ನುಳಿದ ಪ್ರದೇಶದಲ್ಲಿ




ಅಂದಾಜು 6 ಕಿ.ಮೀ. ವರೆಗೆ 4, 3, ಗೂ 2 ಇಂಚಿನ ಪಿ ಯು. ಸಿ ಪೈಪ್‌ಲೈನ್ ಮಾಡಲಾಯಿತು ಹಾಗೂ ಉಳಿದ ಪೈಪ್‌ಲೈನ್‌ನನ್ನು ಗ್ರಾಮ ಪಂಚಾಯತಿಯ ಸ್ವಂತ ಸಂಪನ್ಮೂಲಗಳಿಂದ ನಿರ್ಮಿಸಿದ್ದು ಒಟ್ಟು ಗ್ರಾಮದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸರಬರಾಜುವಿಗಾಗಿ 25 ಕಿ. ಮೀ ಉದ್ದ ಪೈಪ್‌ಲೈನ್ ಇರುತ್ತದೆ.

ಗ್ರಾಮದಲ್ಲಿ 1 ದಿನ ಬಿಟ್ಟು 1 ದಿನ 1 ಗಂಟೆಯವರೆಗೆ ನೀರು ಬಿಡಲಾಗುತ್ತದೆ, ಗ್ರಾಮಸ್ಥರು ತಮಗೆ ದಿನಕ್ಕೆ ಪೂರೈಕೆಯಾಗುವಷ್ಟು ನೀರನ್ನು ಸಂಗ್ರಹಿಸಲು ಸಂಗ್ರಹ ತೊಟ್ಟಿಗಳನ್ನು ಬಳಕೆ



ಮಾಡುತ್ತಾರೆ. ಒಂದು ವೈಯಕ್ತಿಕ ನಳಕ್ಕೆ ವಾರ್ಷಿಕ ರೂ. 1000/–ಗಳನ್ನು ನೀರಿನ ಶುಲ್ಕವಾಗಿ ಪಡೆದು ಕೊಳ್ಳುತ್ತಿದ್ದು ನಲ್ಲಿ ಸಂಪರ್ಕ ಪಡೆದುಕೊಳ್ಳುವಾಗ ಮಾತ್ರ ರೂ 500/–ವನ್ನು ನಿರ್ವಹಣಾ ವೆಚ್ಚವಾಗಿ ಚಾರ್ಜ್ ಮಾಡಲಾಗುತ್ತದೆ.

ಆದರೆ ಸದರಿ ಫೀಲ್ಟರ್ ನೀರನ್ನು ನೀರಿನ ಗುಣಮಟ್ಟ ಪರೀಕ್ಷಿಸಲು ಕುಡಿಯುಲು ಯೋಗ್ಯವಲ್ಲದ ಅಶುದ್ದ ನೀರು ಎಂಬ ವರದಿ ಪರಿಗಣಿಸಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ ಸದರಿ ನೀರನ್ನು ದಿನ ಬಳಕೆಗೆ ಮಾತ್ರ ಉಪಯೋಗಿಸಲು ಗ್ರಾಮಸ್ಥರಿಗೆ ತಿಳಿಸಲಾಯಿತು.

ಆರ್.ಓ.ಫಿಲ್ಟರ್ (ಶುದ್ಧ ಕುಡಿಯುವ ನೀರು) ಘಟಕವನ್ನು ರಾಜ್ಯ ಸಭಾ ಸದಸ್ಯರಾದ ಸನ್ಮಾನ್ಯ ಶ್ರೀ ಪ್ರಭಾಕರ ಕೋರೆ ಇವರ ಚಿರಂಜಿವಿ ಶ್ರೀ ಅಮೀತ ಪ್ರಭಾಕರ ಕೋರೆ ಇವರು ಶ್ರೀ ಜನ ಶಕ್ತಿ ಫೌಂಡೇಶನದ ಅಧ್ಯಕ್ಷರು ಚಿಕ್ಕೋಡಿ ಇವರಿಂದ ಜನವರಿ 2014ರಲ್ಲಿ ಗ್ರಾಮ ಪಂಚಾಯತಿ ಶಿರಗುಪ್ಪಿಗೆ ದೇಣಿಗೆ ಮುಖಾಂತರ ನೀಡಿರುತ್ತಾರೆ. ಅಂದಾಜು ಇದರ ಮೊತ್ತ ರೂ.5.00 ಲಕ್ಷ ಇರುತ್ತದೆ.

ಸದರಿ ಡಬ್ಲ್ಯೂ.ಟಿ.ಪಿ ಆವರಣದಲ್ಲಿಯ ಆರ್.ಓ.ಫಿಲ್ಟರ್ ನೀರನ್ನು 2 ರೂ.ಗಳಿಗೆ 20 ಲೀಟರ್‌ನಂತೆ ಎ.ಟಿ.ಡಬ್ಲ್ಯೂ ಸ್ಮಾರ್ಟ್ ಕಾರ್ಡ್ ಮೂಲಕ ಜನರು ನೀರನ್ನು ಪಡೆದುಕೊಳ್ಳುತ್ತಾರೆ. ಅದೇ ಆರ್.ಓ ಫಿಲ್ಟರ್ ನೀರನ್ನು ಜಲ ನಿರ್ಮಲ ಯೋಜನೆ ಅಡಿಯಲ್ಲಿ ಖರೀದಿಸಲಾದ ಜಲ ದೂತ ವಾಹನ ಮೂಲಕ ಗ್ರಾಮದ ಮನೆ ಮನೆಗೆ ಒದಗಿಸಿದರೆ ರೂ.5–00ಕ್ಕೆ 20 ಲೀಟರ್ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಪ್ರಸ್ತುತ ಗ್ರಾಮದಲ್ಲಿ ನೀರಿನ ಬವಣೆ ಇಲ್ಲವೆ ಇಲ್ಲ.

15 ವರ್ಷಗಳ ಹಿಂದೆ ಗ್ರಾಮದ ಜನರು ಕಲುಷಿತ ನೀರನ್ನು ಕುಡಿಯುತ್ತಿದ್ದರಿಂದ ಗ್ರಾಮ ವಾಸಿಗಳಲ್ಲಿ ಕಾಲರಾ, ಟೈಫೈಡ್ ಇತ್ಯಾದಿ ನೀರಿನ ಸಂಬಂದಿತ ರೋಗಗಳಿಂದ ಬಹಳಷ್ಟು ಜನರು ಬಳಲುತ್ತಿದ್ದರು. ಸದ್ಯ ಜನರು ಸ್ವಚ್ಛ ಶುದ್ಧ ಆರ್.ಓ ಫೀಲ್ಟರ್ ನೀರನ್ನು ಕುಡಿಯುತ್ತಿದ್ದರಿಂದ ನೀರಿನ ಸಂಬಂಧಿತ ರೋಗಗಳಿಂದ ದೂರಾಗಿದ್ದು ಗ್ರಾಮದ ಜನರು ಆರೋಗ್ಯದ ಮಟ್ಟ ಉನ್ನತ ಮಟ್ಟದಲ್ಲಿದೆ. ಸ್ವಚ್ಛ ಮತ್ತು ಶುದ್ಧ ಆರ್.ಓ. ಫಿಲ್ಟರ್




ನೀರನ್ನು ಶಿರಗುಪ್ಪಿ ಸುತ್ತಮುತ್ತಲಿನ ಹತ್ತಾರು ಗ್ರಾಮದವರು ಉಪಯೋಗಿಸುತ್ತಿದ್ದಾರೆ.

**ನಿರ್ವಹಣೆ ವ್ಯವಸ್ಥೆ :**

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಚರಂಡಿ ವ್ಯವಸ್ಥೆ ನಿರ್ವಹಣೆಗಾಗಿ ಸ್ವಚ್ಛತಾಗಾರರೆಂದು ಐದು ಜನ ಸಿಬ್ಬಂದಿ ಇದ್ದು ಪ್ರತಿ ದಿನ ಗ್ರಾಮದ ವಾರ್ಡ್‌ಗಳಲ್ಲಿ ಚರಂಡಿಯ ಸ್ವಚ್ಛತೆ ಮಾಡುತ್ತಿರುತ್ತಾರೆ, ಇದಲ್ಲದೆ ಪ್ರತಿ 2, 3 ತಿಂಗಳಿಗೊಮ್ಮೆ ಇತರೆ ಸುಮಾರು 10 ರಿಂದ 15 ಜನರಿಂದ 15 ದಿನಗಳವರೆಗೆ ಗ್ರಾಮದ ಮುಖ್ಯ ಗಟಾರ ಮತ್ತು ಬೀದಿಗಳನ್ನು, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ಗ್ರಾಮ ಪಂಚಾಯತಿಯ ಕಸ ವಿಲೇವಾರಿ ವಾಹನದ ಮೂಲಕ ತೆಗೆದ



ಕಸವನ್ನು ಗ್ರಾಮದ ಹೋರ ಭಾಗದ ತಗ್ಗು ಪ್ರದೇಶದಲ್ಲಿ ಹಾಕಿ ಮುರುಮ ಹಾಕಲಾಗುವುದು. ಗ್ರಾಮಸ್ಥರು ತಮ್ಮ ತಮ್ಮ ಮನೆಗಳ ಮುಂದೆ ಇರುವ ಚರಂಡಿ ಹಾಗೂ ಸುತ್ತ ಮುತ್ತ ಸ್ವಚ್ಛತೆ ಕಾಪಾಡಿಕೊಂಡು ಗ್ರಾಮದ ಸ್ವಚ್ಛತೆಗೆ ಗಮನ ಹರಿಸುತ್ತಾರೆ.

**ಕಸ ವಿಲೇವಾರಿ ವಾಹನ :**

ಗ್ರಾಮ ಪಂಚಾಯತಿಗೆ ನಿರ್ಮಲ ಭಾರತ ಅಭಿಯಾನ ಅಡಿಯಲ್ಲಿ ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಮಾಡಲು ರೂ. 3.00 ಲಕ್ಷಗಳ ವೆಚ್ಚದಲ್ಲಿ ಕಸ ವಿಲೇವಾರಿ ವಾಹನ ಖರೀದಿಸಿದ್ದು, ಸದರಿ ವಾಹನ ಪ್ರತಿನಿತ್ಯ ನಿಯಮಿತವಾಗಿ ವಾರ್ಡ್‌ಗಳಲ್ಲಿ ಮನೆ ಮನೆಗೆ ತೆರಳಿ ಕಸ ಸಂಗ್ರಹಿಸಿ, ಗ್ರಾಮದ ಹೋರ ವಲಯದಲ್ಲಿ ತಗ್ಗು ಪ್ರದೇಶದಲ್ಲಿ ಕಸ ಹಾಕಿ ಸಮತಟ್ಟು ಮಾಡಲಾಗುವುದು. ಸದರಿ ವಾಹನಕ್ಕೆ ಸ್ಪೀಕರ ಕಟ್ಟಿ ಗ್ರಾಮದ ಗ್ರಾಮಸ್ಥರಿಗೆ ಕಸ ಸಂಗ್ರಹಿಸಿ ಇಡಲು ಪ್ರಚಾರ ಮಾಡಲಾಗುವದು. ಅಷ್ಟೇ ಅಲ್ಲದೇ ಸ್ವಚ್ಛ ಹಾಗೂ ಸುಂದರ ಶಿರಗುಪ್ಪಿಗೆ ಕಾಯ್ದು ಕೊಳ್ಳಬೇಕಾದ ನಿಯಮಗಳನ್ನು ಪ್ರಚಾರ ಮಾಡಲಾಗುವುದು.

**ಶೌಚಾಲಯ :**

ಶಿರಗುಪ್ಪಿ ಗ್ರಾಮದ ಜನರು ಮೊದಲು ಬಯಲು ಶೌಚಾಲಯವನ್ನು ಅವಲಂಬಿಸಿದ್ದರು, ಸನ್ 2005–06ರಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ. ಎನ್. ಪ್ರಭಾಕರಪ್ಪ ಇವರ ನೇತ್ರತ್ವದಲ್ಲಿ ಶಿರಗುಪ್ಪಿ ಗ್ರಾಮದಲ್ಲಿ ಬೃಹತ ಪ್ರಮಾಣದ ಜಾತಾದೊಂದಿಗೆ ತಿಳುವಳಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು. ಅಷ್ಟೇ ಅಲ್ಲದೇ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಬೀದಿ ನಾಟಕ, ಶಾಲಾ ಮಕ್ಕಳಿಂದ ಜಾತಾ ಮೂಲಕ, ಪ್ರತಿ ಮನೆ ಮನೆಗೆ ತಿಳುವಳಿಕೆ ಪತ್ರದ ಮೂಲಕ, ನಸುಕಿನ ಜಾವ ಮೈಕ್ ಮೂಲಕ ತಿಳಿವಳಿಕೆ, ವಾರ್ಡ್ ಸಭೆ, ಗ್ರಾಮ ಸಭೆ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಕೂಡಿ ಗ್ರಾಮದ ಪ್ರತಿಯೊಂದು ಮನೆಗೆ ತೆರಳಿ ಬಯಲು ಮಲ ವಿಸರ್ಜನೆಯಿಂದ ಆಗುವ ಹಾನಿಯ ಬಗ್ಗೆ ಹಾಗೂ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡು



ಉಪಯೋಗಿಸುವ ಲಾಭದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ಶೌಚಾಲಯ ನಿರ್ಮಿಸಿಕೊಡಲು ಗ್ರಾಮದಲ್ಲಿಯ ಸಹಕಾರಿ ಬ್ಯಾಂಕ್ ಮೂಲಕ ಸಾಲ ಕೊಡಿಸಿ ಪ್ರಸ್ತುತ 2800 ಕ್ಕೂ ಹೆಚ್ಚು ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿ ಬಯಲು ಶೌಚಾಲಯ ಮುಕ್ತ ಗ್ರಾಮವಾಗಿ ಸನ್ 2010–11 ರಲ್ಲಿ ನಿರ್ಮಲ ಗ್ರಾಮ ಪುರಸ್ಕಾರವನ್ನು ಪಡೆದಿದೆ.

**ಪ್ರಶಸ್ತಿಗಳು :**

1) **ಅಂತರ್‌ರಾಷ್ಟ್ರೀಯ ಗೂಗಲ್ ಪ್ರಶಸ್ತಿ :**
07/03/2010 ಮೊತ್ತ ರೂ. 5.00 ಲಕ್ಷ

2) **ರಾಷ್ಟ್ರೀಯ ಗೌರವ ಗ್ರಾಮ ಸಭಾ ಪ್ರಶಸ್ತಿ :**
24/04/2010 ಮೊತ್ತ ರೂ. 10.00 ಲಕ್ಷ

3) **ನಿರ್ಮಲ ಗ್ರಾಮ ಪುರಸ್ಕಾರ :** 26/04/2010– ಮೊತ್ತ ರೂ.4.40 ಲಕ್ಷ

4) **ನೈರ್ಮಲ್ಯ ಪ್ರಶಸ್ತಿ :** 18/07/2011 ಮೊತ್ತ ರೂ 1.00 ಲಕ್ಷ

5) **ರಜತ ನೈರ್ಮಲ್ಯ :** 18/07/2011 ಮೊತ್ತ ರೂ.2.00 ಲಕ್ಷ

6) **ಗಾಂಧಿ ಗ್ರಾಮ ಪುರಸ್ಕಾರ**–2014–15 : 02/10/2015 ಮೊತ್ತ ರೂ. 5.00 ಲಕ್ಷ

7) **ಪಂಚಾಯತಿ ಸಶಕ್ತಿಕರಣ ಪುರಸ್ಕಾರ** –2014–15 :24/04/2016 ಮೊತ್ತ ರೂ.12.00 ಲಕ್ಷ

8) **ಗಾಂಧಿ ಗ್ರಾಮ ಪುರಸ್ಕಾರ** –2015–16 : 02/10/2016 ಮೊತ್ತ ರೂ. 5.00 ಲಕ್ಷ

**ಪ್ರಶಸ್ತಿಯ ಬಗ್ಗೆ ವಿವರಣೆ, ಪ್ರಶಸ್ತಿ ಮೊತ್ತದಲ್ಲಿ ಕೈಗೊಂಡ ಕಾಮಗಾರಿಗಳ ವಿವರ :**

1. ಅಂತರರಾಷ್ಟ್ರೀಯ ಗೂಗಲ್ ಪ್ರಶಸ್ತಿ ಮೊತ್ತ 5.00 ಲಕ್ಷಗಳನ್ನು ಕುಡಿಯುವ ನೀರಿನ ಫಿಲ್ಟರ ಟ್ಯಾಂಕ್‌ಗಳಲ್ಲಿ ಉಸುಕ ಹಾಕಲು ಮತ್ತು ಟಾಕಿ ಸ್ವಚ್ಚಗೊಳಿಸಲು ಬಳಕೆ ಮಾಡಲಾಗಿದೆ.

2. ರಾಷ್ಟ್ರೀಯ ಗೌರವ ಗ್ರಾಮ ಸಭಾ ಪ್ರಶಸ್ತಿ : 24/04/2010 ಮೊತ್ತ ರೂ.10.00 ಲಕ್ಷ, ನಿರ್ಮಲ ಗ್ರಾಮ ಪುರಸ್ಕಾರ : 26/04/2010– ಮೊತ್ತ ರೂ.4.40 ಲಕ್ಷ, ನೈರ್ಮಲ್ಯ ಪ್ರಶಸ್ತಿ : 18/07/2011, ಮೊತ್ತ ರೂ 1.00 ಲಕ್ಷ, ರಜತ ನೈರ್ಮಲ್ಯ : 18/07/2011 ಮೊತ್ತ ರೂ.2.00 ಲಕ್ಷ, ಈ ನಾಲ್ಕು ಪ್ರಶಸ್ತಿ ಮೊತ್ತಗಳನ್ನು ಗ್ರಾಮ ಪಂಚಾಯತಿಗೆ ಜಲ ನಿರ್ಮಲ ಯೋಜನೆ ಮಂಜೂರಾದ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ವಂತಿಗೆ ಅಂತಾ ಭರಣಾ ಮಾಡಿ, ಗ್ರಾಮದಲ್ಲಿ ಸಿ.ಸಿ.ರಸ್ತೆ, ಡಾಂಬರೀಕರಣ ರಸ್ತೆ, ಚರಂಡಿ, ಪೇವರ್ಸ್ ಮತ್ತು ನೀರಿನ ಉಪಯೋಗ ಕ್ಕಾಗಿ ವೆಚ್ಚ ಮಾಡಿ ಗ್ರಾಮ ಅಭಿವೃದ್ಧಿ ಮಾಡಲಾಗಿದೆ.

3. ಗಾಂಧಿ ಗ್ರಾಮ ಪುರಸ್ಕಾರ–2014–15, ಪಂಚಾಯತಿ ಸಶಕ್ತಿಕರಣ ಪುರಸ್ಕಾರ–2014–15, ಗಾಂಧಿ ಗ್ರಾಮ ಪುರಸ್ಕಾರ–2015–16 ರ ಬಹುಮಾನ ಮೊತ್ತದ ಹಣವನ್ನು 2016–17 ರ ಕ್ರೀಯಾ ಯೋಜನೆ ಪ್ರಕಾರ ಕೆಲಸಗಳು ಪ್ರಗತಿಯಲ್ಲಿವೆ.

**ಅಂಗನವಾಡಿಗಳು :**

ಶಿರಗುಪ್ಪಿ ಗ್ರಾಮದ ವ್ಯಾಪ್ತಿಯಲ್ಲಿ 9 ಅಂಗನವಾಡಿಗಳಿದ್ದು ಪ್ರತಿಯೊಂದು ಅಂಗನವಾಡಿ ಸ್ವಂತ ಕಟ್ಟಡ ಹೊಂದಿದ್ದು. ಪ್ರತಿ ಅಂಗನವಾಡಿಯಲ್ಲಿ ಶೌಚಾಲಯ ಮತ್ತು ನೀರಿನ ವ್ಯವಸ್ಥೆಯಿದ್ದು. ಗ್ರಾಮ ಪಂಚಾಯತಿ ಸೌಕರ್ಯ ಸಮಿತಿಯ ಹಾಗೂ ಬಾಲವಿಕಾಸ ಸಮಿತಿಯು ಅಂಗನವಾಡಿಯ ಕಾರ್ಯ ವೈಖರಿಯನ್ನು ನಿಯಮಿತವಾಗಿ ಗಮನಿಸುತ್ತಿರುತ್ತಾರೆ.

**ಪ್ರಾಥಮಿಕ ಆರೋಗ್ಯ ಕೇಂದ್ರ**

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು, ಸುತ್ತಲಿನ ಜುಗೂಳ, ಶಹಾಪೂರ, ಮಂಗಾವತಿ ಗ್ರಾಮಗಳ ವ್ಯಾಪ್ತಿಗೆ ಹೊಂದಿದೆ. 6 ಬೇಡ್‌ಗಳ ವ್ಯವಸ್ಥೆ ಇರುವ ಕಟ್ಟಡವಿದ್ದು. ಬೆಬಿ ವಾರ್ಮರ, ಆಕ್ಸಿಜನ, ಒಟಿ ಲ್ಯಾಂಪ್ ಮಶಿನ್ ಹೊಂದಿದೆ ಮತ್ತು ಪೋಸ್ಟ್ ಮಾರ್ಟ್ ಕೊಠಡಿ ಹಾಗೂ ಶಾಸಕರ ಸ್ಥಳೀಯ ನಿಧಿಯಿಂದ ಮಾಡಿದ 1 ಆಂಬುಲೆನ್ಸ್ ಇದೆ, ಹಾಗೂ ಸಾಕಷ್ಟು ಔಷಧಿಗಳು ಲಭ್ಯವಿದ್ದು, ನುರಿತ ವೈದ್ಯಾಧಿಕಾರಿಗಳು, ಸಿಬ್ಬಂದಿ ಜನರಿಗೆ ಒಳ್ಳೆಯ ಸೇವೆ ಒದಗಿಸುತ್ತಿದ್ದಾರೆ. ಸಿಬ್ಬಂದಿಗೆ ವಸತಿ ಸೌಕರ್ಯವಿದ್ದು. ಒಟ್ಟು 9 ಜನ ಆಶಾ ಕಾರ್ಯಕರ್ತರು ಗ್ರಾಮದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

ಯಶೋಗಾಥೆ

# ಚಾಂದೋರಿ ಗ್ರಾಮ ಪಂಚಾಯತಿ ಬಯಲು ಶೌಚ ಮುಕ್ತವಾಗಲು ತೆಗೆದುಕೊಂಡ ಕ್ರಮ



ವಿಜಯಶೀಲಾ ಎಸ್.

ಚಾಂದೋರಿ ಗ್ರಾಮ ಪಂಚಾಯತಿಯು ಗ್ರಾಮಸ್ಥರಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿ ಗ್ರಾಮವನ್ನು ಬಯಲು ಶೌಚ ಮುಕ್ತ ಗ್ರಾಮವಾಗಿ ಪರಿವರ್ತಿಸಿದೆ.

## ನಿರ್ಮಲ ಭಾರತ, ನಿರ್ಮಲ ಗ್ರಾಮ:

ಇಡೀ ದೇಶವೇ ಈ ಎರಡು ಕನಸುಗಳು ನನಸಾಗಿಸಲು ಪಣತೊಟ್ಟಿವೆ. ಮಾನ್ಯ ಪ್ರಧಾನ ಮಂತ್ರಿಯವರಿಂದ ಹಿಡಿದು, ಗ್ರಾಮದ ಪ್ರಧಾನ (ಅಧ್ಯಕ್ಷರ)ವರೆಗೂ ಎಲ್ಲರ ಬಾಯಿಯಲ್ಲಿ ಗ್ರಾಮಗಳ ಅಭಿವೃದ್ಧಿಯ ಬಗ್ಗೆ ಬರುವ ಮೊದಲ ಮಾತು ಸ್ವಚ್ಛ, ಸುಂದರ, ಬಯಲು ಶೌಚ ಮುಕ್ತ ನಿರ್ಮಲ ಗ್ರಾಮ.



ಇಂತಹದ್ದೇ ಕನಸನ್ನು ಗುರಿಯಾಗಿಸಿಕೊಂಡು ಅದನ್ನು ಯಶಸ್ವಿಯಾಗಿ ನಿಭಾಯಿಸಿ, ನನಸನ್ನಾಗಿಸಿರುವ ಪಂಚಾಯತಿ ಚಾಂದೋರಿ (ಚಂದ್ರಗಿ). ಬೆಳ್ಳಗಿನ ಬಿಳುಪನ್ನು ಹೊಂದಿರುವ ಚಂದ್ರನ ಹೆಸರನ್ನು ಹೊಂದಿರುವ ಚಾಂದೋರಿ (ಚಂದ್ರಗಿ) ಗ್ರಾಮ ಪಂಚಾಯತಿ ಕರ್ನಾಟಕ ರಾಜ್ಯದ ಮುಕುಟ ಜಿಲ್ಲೆ ಬೀದರನ ಔರಾದ ತಾಲೂಕಿನ ಒಂದು ಪುಟ್ಟ ಗ್ರಾಮ ಪಂಚಾಯತಿ ನಮ್ಮದು.

9 ಜನ ಸದಸ್ಯರನ್ನು ಹೊಂದಿರುವ ಗ್ರಾಮ ಪಂಚಾಯತಿ ಆಡಳಿತವನ್ನು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಚುಕ್ಕಾಣಿ ಹಿಡಿದ ಯುವ, ಉತ್ಸಾಹಿ ಶ್ರೀ. ದೀಪಕ ಪಾಟೀಲ್ ಹೊಸತನವನ್ನು ಹಾಗೂ ಸದಾ

ಪಂಚಾಯತ ಅಭಿವೃದ್ಧಿ ಅಧಿಕಾರಿ, ಚಾಂದೋರಿ ಗ್ರಾಮ ಪಂಚಾಯತ, ತಾ. ಔರಾದ, ಜಿ. ಬೀದರ.



ಆವಿಷ್ಕಾರಿಯುತ ಆಡಳಿತ ನೀಡಬೇಕೆಂಬ ಹಂಬಲ ಹೊಂದಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ.ವಿಜಯಶೀಲಾರವರು ಗ್ರಾಮ ಪಂಚಾಯತಿಯನ್ನು ಬಯಲು ಶೌಚ ಮುಕ್ತವನ್ನಾಗಿ ಮಾಡಲು ತಮ್ಮ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದರು. ಇದರ ಬಗ್ಗೆ ಅನೇಕರಲ್ಲಿ, ಇದು ಕಷ್ಟಕರವೆಂಬ ಅನುಮಾನದ ಹಾಗೂ ಅಸಡ್ಡೆಯ ಮಾತುಗಳು ಮೂಡಿದವು. ಆದರೆ ಇವರ ಕೆಲಸಕ್ಕೆ ಬೆಂಬಲವಾಗಿ ನಿಂತವರು ಸ್ವಚ್ಛ ಭಾರತ ಮಿಶನ್ ಜಿಲ್ಲಾ ನೋಡಲ್ ಅಧಿಕಾರಿಗಳಾದ ಡಾ.ಗೌತಮ ಅರಳಿ ಹಾಗೂ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಪ್ರವೀಣ ಕಾರಭಾರಿ, ಅಲ್ಲದೇ ಅನೇಕರು ಈ ಪುಣ್ಯದ ಕೆಲಸಕ್ಕೆ ಸಹಕರಿಸಿದರು.

**ಗ್ರಾಮ ಪಂಚಾಯತಿ ಚಾಂದೋರಿ ಬಯಲು ಮುಕ್ತವಾಗಲು ತೆಗೆದುಕೊಂಡ ಕ್ರಮಗಳು**

**1) ಜನರ ಮನ ಪರಿವರ್ತನೆ**

ಶೌಚಮುಕ್ತ ಮಾಡಬೇಕಾದರೆ ಮೊದಲು ಬೇಕಾದದ್ದು ಮನಸ್ಸು, ವಾರ್ಡ್ ಸಭೆ, ಗ್ರಾಮ ಸಭೆ, ಬೀದಿ ನಾಟಕ, ಕರ ಪತ್ರಗಳ ಮೂಲಕ ಜನರ ಮನವೊಲಿಸಿ ಅವರನ್ನು ಶೌಚಾಲಯ ನಿರ್ಮಿಸಿಕೊಳ್ಳಲು ಪ್ರೇರೇಪಿಸಿದರು.

**2) ಮೇಸ್ತ್ರಿಗಳ ತರಬೇತಿ**

ಸ್ಥಳೀಯವಾಗಿ ಲಭ್ಯವಾದಂತಹ ಮೇಸ್ತ್ರಿಗಳಿಗೆ ತರಬೇತಿ ಒದಗಿಸುವುದರೊಂದಿಗೆ, ಗ್ರಾಮಸ್ಥರ ಹಾಗೂ ಮೇಸ್ತ್ರಿಗಳ ನಡುವೆ ಒಪ್ಪಂದ ಏರ್ಪಡಿಸಿ ಶೌಚಾಲಯ ನಿರ್ಮಿಸಿಕೊಳ್ಳಲು ಗ್ರಾಮ ಪಂಚಾಯತಿ ಸಹಕರಿಸಿತು.

**3) ಶಾಸಕರ ಸಹಕಾರ**

ಮಾನ್ಯ ಶಾಸಕರಾದ ಶ್ರೀ ಪ್ರಭು ಚೌವ್ಹಾಣ ರವರು ಈ ಶುಭ ಕಾರ್ಯಕ್ಕೆ ಕೈಜೋಡಿಸಿ ತಮ್ಮ ಶಾಸಕರ ನಿಧಿಯಿಂದ ರೂ.5.00 ಲಕ್ಷಗಳ ಅನುದಾನವನ್ನು ಗ್ರಾಮ ಪಂಚಾಯತಿಗೆ ಒದಗಿಸಿ, ನಮ್ಮ ಹೆಮ್ಮೆಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಎಚ್.ಕೆ.ಪಾಟೀಲ್‌ರವರ ಕನಸಿನಂತೆ ಶೌಚಗೃಹ ಹಾಗೂ ಸ್ನಾನಗೃಹ ನಿರ್ಮಿಸಲು ಸಹಾಯ ಮಾಡಿದರು.

**4) ದಂಡ ವಸೂಲಿ**

ಶೌಚಾಲಯ ನಿರ್ಮಾಣ ಜಾರಿಗೊಂಡ ತಕ್ಷಣ ಕಾರ್ಯಪ್ರವರ್ತರಾದ ಗ್ರಾಮ ಪಂಚಾಯತಿ

ಅಧ್ಯಕ್ಷರು ಹಾಗೂ ಪಿ.ಡಿ.ಓ. ಶೌಚಾಲಯ ನಿರ್ಮಿಸಿಕೊಳ್ಳದೇ ಬಯಲಲ್ಲಿ ಹೊಲಸು ಮಾಡುತ್ತಿರುವವರಿಂದ ರೂ.200/- ರಂತೆ ದಂಡ ವಸೂಲು ಮಾಡಲು ಪ್ರಾರಂಭಿಸಿದರು. ಇದು ಜನರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿತು, ಇದರಿಂದ ಅವರು ಶೌಚಾಲಯು ನಿರ್ಮಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದರು.

### 5) ಬಯಲು ಜಾಗಗಳಲ್ಲಿ ಸ್ವಚ್ಛತೆ ಹಾಗೂ ಬೀದಿ ದೀಪಗಳ ಅಳವಡಿಕೆ

ಗ್ರಾಮದ ಹೊಲಸು ಬಯಲು ಜಾಗಗಳನ್ನು ಸ್ವಚ್ಛತಾ ಅಭಿಯಾನದ ಮೂಲಕ ಸ್ವಚ್ಛ ಗೊಳಿಸುವುದರೊಂದಿಗೆ, ಅಂತಹ ಸ್ಥಳಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲಾಯಿತು. ಇದರಿಂದ ಗ್ರಾಮಸ್ಥರು ಹೊಲಸು ಮಾಡುವುದರಿಂದ ಹಿಂಜರಿಯಲು ಪ್ರಾರಂಭಿಸಿ, ಶೌಚಾಲಯ ನಿರ್ಮಿಸಿಕೊಳ್ಳಲು ಮುಂದಾದರು.

### 6) ಕಸದ ತೊಟ್ಟಿಗಳ ನಿರ್ಮಾಣ

ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಪ್ರತಿ ಬೀದಿಗಳಲ್ಲಿ, ಮುಖ್ಯ ರಸ್ತೆಗಳಲ್ಲಿ ಕಸದ ತೊಟ್ಟಿಗಳ ನಿರ್ಮಾಣ ಮಾಡಿ, ಕಸವನ್ನು ಸೂಕ್ತವಾಗಿ ವಿಲೇವಾರಿ ಮಾಡುವ ಕ್ರಮ ಕೈಗೊಳ್ಳಲಾಯಿತು.

### 7) ಶುದ್ಧ ಕುಡಿಯುವ ನೀರಿನ ಘಟಕ

ಗ್ರಾಮಸ್ಥರಿಗೆ ಸ್ವಚ್ಛತೆಯ ಜೊತೆಗೆ ಶುದ್ಧ ಕುಡಿಯುವ ನೀರಿನ ಅವಶ್ಯಕತೆಯನ್ನು ಮನಗಂಡು, ಗ್ರಾಮ ಪಂಚಾಯತಿಯು 1000 ಲೀಟರ್ ಸಾಮರ್ಥ್ಯದ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಿ, ಶುದ್ಧ ಕುಡಿಯುವ ನೀರನ್ನು ಗ್ರಾಮಸ್ಥರಿಗೆ ಒದಗಿಸಲು ಪ್ರಾರಂಭಿಸಲಾಯಿತು.

### ಬಯಲು ಶೌಚ ಮುಕ್ತ ಗ್ರಾಮ ಪಂಚಾಯತಿಯ ಗರಿ

ಸುಮಾರು 1153 ಶೌಚಾಲಯುಗಳ ನಿರ್ಮಾಣದ ಗುರಿ ಹೊಂದಿದ ಗ್ರಾಮ ಪಂಚಾಯತಿ ಸೆಪ್ಟೆಂಬರ್ 17 ರಂದು ಜಿಲ್ಲಾ ಪಂಚಾಯತಿ ವತಿಯಿಂದ ಬಯಲು ಶೌಚ ಮುಕ್ತ ಗ್ರಾಮ ಪಂಚಾಯತಿ ಎಂದು ಘೋಷಿಸಲ್ಪಟ್ಟು, ರಾಜ್ಯದ ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಿಂದ ಗಾಂಧಿ ಜಯಂತಿಯಂದು ಅರಮನೆಯ ಮೈದಾನದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ. ದೀಪಕ ಪಾಟೀಲ್ ಹಾಗೂ ಪಿ.ಡಿ.ಓ. ಶ್ರೀಮತಿ ವಿಜಯಶೀಲಾ ಇವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

### ಬೇರೆ ಗ್ರಾಮ ಪಂಚಾಯತಿಗಳಿಗೆ ಮಾದರಿ ಚಾಂದೋರಿ

ಸುಸಜ್ಜಿತ ಕಟ್ಟಡ, ಸಭಾ ಭವನ, ಇಂಟರ್‌ನೆಟ್ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಸುಂದರ ಆವರಣದಲ್ಲು ಉದ್ಯಾನವನದ ನಿರ್ವಹಣೆಯ ಮೂಲಕ ಜಿಲ್ಲೆಯ ಇತರೆ ಗ್ರಾಮ ಪಂಚಾಯತಿಗಳಿಗೆ ಚಾಂದೋರಿ ಮಾದರಿ ಎನಿಸಿಕೊಂಡಿದೆ. ಈಗ ಬೇರೆ ಗ್ರಾಮ ಪಂಚಾಯತಿಗಳಿಂದ ಅಧ್ಯಕ್ಷರು, ಸದಸ್ಯರು, ಸಾರ್ವಜನಿಕರು ನಮ್ಮ ಗ್ರಾಮ ಪಂಚಾಯತಿಗೆ ಭೇಟಿ ನೀಡಿ, ನಮ್ಮ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದರೊಂದಿಗೆ ಇದರಿಂದ ಸ್ಫೂರ್ತಿಯನ್ನು ಪಡೆಯುತಿದ್ದಾರೆ.

ಒಟ್ಟಾರೆ ಗ್ರಾಮಗಳ ಅಭಿವೃದ್ಧಿಗೆ ಮನಸ್ಸು ಮಾಡಿ ದುಡಿದರೆ, ಎಂತಹ ಕನಸು ನನಸಾಗಬಲ್ಲದು, ಇದಕ್ಕೆ ತಾಜಾ ಉದಾಹರಣೆ **ನಮ್ಮ ಮಾದರಿ ಹಾಗೂ ಬಯಲು ಶೌಚ ಮುಕ್ತ ಗ್ರಾಮ ಪಂಚಾಯತಿ ಚಾಂದೋರಿ.**

ವರದಿ



ರಾಚಯ್ಯ ಚೌಕಿಮಠ

> ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳ ಸಮಾಲೋಚನಾ ಸಭೆಯನ್ನು ನಡೆಸಿದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಎಲ್ಲರೂ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಕರೆ ನೀಡಿದರು.

### ರಾಜ್ಯದ ಎಲ್ಲಾ ಜಿ.ಪಂ.ಅಧ್ಯಕ್ಷರುಗಳ ಸಭೆಯ ವರದಿ

# ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡಿರುವುದು ಕರ್ನಾಟಕ ಸರ್ಕಾರದ ಪಾತ್ರ ದೇಶಕ್ಕೆ ಮಾದರಿಯಾಗಲಿ

ಭಾರತ ಸಂವಿಧಾನದ 73ನೇ ತಿದ್ದುಪಡಿಯ ಆಶೋತ್ತರಗಳಂತೆ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಇತ್ತೀಚೆಗೆ ಕೆಲವು ಪ್ರಶಂಸನಾರ್ಹ ಹಾಗೂ ದೇಶಕ್ಕೆ ಮಾದರಿಯಾಗುವಂತಹ ಪ್ರಮುಖ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುತ್ತದೆ. ಅವುಗಳಲ್ಲೊಂದಾದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ಅದರಲ್ಲಿರುವ ಪ್ರಮುಖ 88 ಕಲಂಗಳಿಗೆ ತಿದ್ದುಪಡಿ ಮಾಡಿರುವಂತದ್ದು, ಇದರೊಂದಿಗೆ ಗಾಂಧಿ ಸಾಕ್ಷಿ ಕಾಯಕ ತಂತ್ರಾಶದ



ಮೂಲಕ ಬಿಲ್ಲನ್ನು ಪಾವತಿಸುವುದರೊಂದಿಗೆ ಪಾರದರ್ಶಕತೆಯನ್ನು ಕಾಯ್ದುಕೊಂಡಿರುವುದು, ವಿವಿಧ ಇಲಾಖೆಗಳ 100 ಸೇವೆಗಳನ್ನು ಒದಗಿಸುವ ಬಾಪೂಜಿ ಸೇವಾ ಕೇಂದ್ರಗಳ ಸ್ಥಾಪನೆ, ತಾಲ್ಲೂಕು ಪಂಚಾಯತಿ ಹಾಗೂ ಅಭಿವೃದ್ಧಿ ಸಮಿತಿಗಳು ಮತ್ತು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಹಾಗೂ ಅಭಿವೃದ್ಧಿ ಯೋಜನೆ ಸಮಿತಿಯ ರಚನೆ, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ರಾಜ್ಯ ಸಚಿವರ ಸ್ಥಾನಮಾನ ಮತ್ತು ಉಪಾಧ್ಯಕ್ಷರುಗಳಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಿರುವುದು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರುಗಳಿಗೆ ಗೌರವಧನವನ್ನು ಇಮ್ಮಡಿಗೊಳಿಸಿರುವುದು ಇತ್ಯಾದಿ ಗಮನಾರ್ಹ ಕಾರ್ಯಗಳನ್ನು ಮಾಡುತ್ತಾ ಮುನ್ನಡೆಯುತ್ತಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ನಿರ್ದೇಶನದಂತೆ ಪ್ರತಿ 3

ಜಿಲ್ಲಾ ಪಂಚಾಯತ್ ಶಾಖೆ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ತಿಂಗಳಿಗೊಮ್ಮೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರರೊಂದಿಗೆ ಸಮಾಲೋಚನೆ ನಡೆಸಲು ತೀರ್ಮಾನಿಸಲಾಗಿದೆ. ಅದರಂತೆ, ದಿನಾಂಕ:28-12-2016 ರಂದು ಬೆಳಿಗ್ಗೆ 11.00 ಗಂಟೆಗೆ ವಿಕಾಸಸೌಧದ 4ನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 422ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳೊಂದಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳ ಅಭಿವೃದ್ಧಿಯ ಕುರಿತು ಚರ್ಚಿಸಿರುತ್ತಾರೆ. ಈ ಸಭೆಯಲ್ಲಿ ನಡೆದಿರುವ ಕೆಲವು ಅಂಶಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಉತ್ಸುಕನಾಗಿದ್ದೇನೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳ ಸಮಾಲೋಚನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಾನ್ಯ ಸಚಿವರಾದ ಶ್ರೀ. ಎಚ್.ಕೆ ಪಾಟೀಲರವರು ಎಲ್ಲರನ್ನು ಉದ್ದೇಶಿಸಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿದರು:

ಸದ್ಯ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಂದೊದಗಿದ್ದು, ಇದನ್ನು ಎದುರಿಸುವುದು ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಅಗ್ನಿ ಪರೀಕ್ಷೆಯಾಗಿಬಿಟ್ಟಿರುತ್ತದೆ. ಈ ನಿಟ್ಟಿನಲ್ಲಿ ಎಲ್ಲರ ಸ್ಪಂದನೆ ಅತ್ಯಗತ್ಯವಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ ತಿದ್ದುಪಡಿ ಮಾಡಿ, ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನವನ್ನು ನೀಡಲಾಗಿದ್ದು, ಈ ರೀತಿ ಸ್ಥಾನಮಾನಗಳನ್ನು ನೀಡುವಾಗ ಅನೇಕ ತೊಡಕುಗಳನ್ನು ನಿವಾರಿಸಲಾಗಿದೆ. ಆದ್ದರಿಂದ ಈ ಅಧಿಕಾರವನ್ನು ತಾವೆಲ್ಲರೂ ಚಲಾಯಿಸಬೇಕು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಂತೆ ತಾಲ್ಲೂಕು ಪಂಚಾಯತಿಗಳಿಗೆ ಭೇಟಿ ನೀಡಿ ಪ್ರಗತಿಯನ್ನು ಪರಿಶೀಲಿಸಬೇಕೆಂದು ತಿಳಿಸಿದರು. ಕಾನೂನನ್ನು ತುಂಬಾ ಪರಿಣಾಮಕಾರಿಯನ್ನಾಗಿ ಮಾಡಿದ್ದು, ಅದನ್ನು ತಾವು ತಿಳಿದು ಕಾರ್ಯ ನಿರ್ವಹಿಸಬೇಕು. ಕಾನೂನಿನಲ್ಲಿ ಏನಾದರೂ ತಿದ್ದುಪಡಿ ಮಾಡಬೇಕಾಗಿದ್ದಲ್ಲಿ ಮಾತ್ರ ಸರ್ಕಾರ ಮೇಲ್ಮನವಿ ಪ್ರಾಧಿಕಾರದಂತೆ ವರ್ತಿಸುತ್ತದೆಂದು ತಿಳಿಸಿದರು. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರುಗಳು ಸ್ವಯಂಪ್ರೇರಿತರಾಗಿ ಜವಾಬ್ದಾರಿಗಳನ್ನು ತೆಗೆದುಕೊಂಡು ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ನಿವಾರಣೆ ಮಾಡಬೇಕೆಂದು ತಿಳಿಸಿದರು. ಈಗಾಗಲೇ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು, ಇವರು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಕ್ಕೆ ತಿದ್ದುಪಡಿ ನಂತರ ಸಾಕಷ್ಟು ಹೊಸ ರೂಪ ಪಡೆದುಕೊಂಡಿರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಬಗ್ಗೆ ತರಬೇತಿಗಳನ್ನು ನೀಡುತ್ತಿದ್ದು, ಇದರ ಸುದುಪಯೋಗವನ್ನು ಪಡೆದುಕೊಳ್ಳಲು ಹಾಗೂ ಈ ಕಾಯ್ದೆಯ ಬಗ್ಗೆ ಹೆಚ್ಚಿನ ಅಧ್ಯಯನವನ್ನು ಮಾಡಬೇಕೆಂದು ತಿಳಿಸಿದರು.

ಸರ್ಕಾರದ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದ ಬಗ್ಗೆ ಸರ್ಕಾರ ಹಾಗೂ ಜಿಲ್ಲಾ ಪಂಚಾಯತಿಗಳ ಮಧ್ಯೆ ಪರಸ್ಪರ ಸಂಪರ್ಕ ಏರ್ಪಡಲು ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ 2 ತಿಂಗಳಿಗೊಮ್ಮೆ ಪತ್ರ ಬರೆಯುವುದಾಗಿ ತಿಳಿಸಿದರು. ಈ ಪತ್ರಗಳಿಗೆ ಸೂಕ್ತ ರೀತಿಯಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಸ್ಪಂದನೆ ಅತ್ಯಗತ್ಯವೆಂದು ತಿಳಿಸಿದರು. ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯತಿವಾರು "ನಮ್ಮ ಗ್ರಾಮ ನಮ್ಮ ಯೋಜನೆ" ಕಾರ್ಯಕ್ರಮದ ನಿರೀಕ್ಷಿತಾ ಯೋಜನೆಯನ್ನು ರೂಪಿಸಲು 60,000 ಸಭೆಗಳನ್ನು ನಡೆಸಿ ಯೋಜನೆಯನ್ನು ಸಿದ್ಧಪಡಿಸಲಾಗಿದ್ದು, ಇದರಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರ ಪಾಲ್ಗೊಳುವಿಕೆ ಕಡಿಮೆಯಾಗಿದೆಯೆಂದು ತಿಳಿಸಿದರು. ಈ ಯೋಜನೆಯು ಪೂರ್ಣ ಪ್ರಮಾಣದ ವಿಕೇಂದ್ರಿಕರಣ ಯೋಜನೆಯಾಗಿದ್ದು, ಸರ್ಕಾರದ ಯಾವುದೇ ಅನುದಾನವಿಲ್ಲದಿದ್ದರೂ ಸಹ ಪ್ರತಿ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ 72 ವಿವಿಧ ರೀತಿಯ

ಒಟ್ಟು 1,11,000 ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಧ್ಯವೆಂದು ತಿಳಿದು ಬಂದಿದೆ. ಈ ಯೋಜನೆಯು ಸಂಪೂರ್ಣ ವಿಕೇಂದ್ರಿಕರಣಕ್ಕೆ ನಾಂದಿಯೆಂದು ತಿಳಿಸಿದರು. ಇದರಿಂದ ಗ್ರಾಮೀಣ ಭಾಗದ ಜನರ ಭಾಗವಹಿಸುವಿಕೆಯ ಸಾಮರ್ಥ್ಯದಲ್ಲಿ ಬದಲಾವಣೆಯನ್ನು ಕಾಣಬಹುದಾಗಿರುತ್ತದೆಂದು ತಿಳಿಸಿದರು.

ಅಕ್ಟೋಬರ್ 2018ರ ವೇಳೆಗೆ ರಾಜ್ಯವನ್ನು ಬಯಲು ಬಹಿರ್ದಸೆ ಮುಕ್ತ ರಾಜ್ಯವನ್ನಾಗಿ ಘೋಷಿಸುವಲ್ಲಿ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ, ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳು ಅದರಲ್ಲಿಯೂ ಮಹಿಳಾ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಪ್ರಮುಖವಾಗಿದೆಯೆಂದು ತಿಳಿಸಿ, ಎಲ್ಲರೂ ಈ ನಿಟ್ಟಿನಲ್ಲಿ ಕೆಲಸವನ್ನು ಮಾಡಬೇಕೆಂದು ಹಾಗೂ ಜಿಲ್ಲಾ ಪಂಚಾಯತಿಗಳು ಶೌಚಾಲಯ ನಿರ್ಮಾಣದ ಪ್ರಗತಿ ಪರಿಶೀಲನೆ ಮಾಡಬೇಕೆಂದು ಸಹ ನಿರ್ದೇಶನ ನೀಡಿದರು. 4023 ಗ್ರಾಮ ಪಂಚಾಯತಿಗಳಲ್ಲಿ ಬಾಪೂಜಿ ಸೇವಾ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ಇಲ್ಲಿಯುವರೆವಿಗೂ ಅಂದಾಜು 13ಲಕ್ಷ ಆರ್.ಟಿ.ಸಿಗಳನ್ನು ವಿತರಿಸಲಾಗಿದೆಯೆಂದು ತಿಳಿಸಿ, ಈ ನಿಟ್ಟಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹೆಚ್ಚಿನ ಪಾತ್ರವನ್ನು ವಹಿಸಿದ್ದು, ಅವರ ಕಾರ್ಯ ವೈಖರಿಯನ್ನು ಶ್ಲಾಘಿಸಿದರು.

ಸರ್ಕಾರದ ಕೆಲಸ ವಿಧಾನಸೌಧದಿಂದ ಪ್ರಾರಂಭವಾಗಿ ಗ್ರಾಮ ಪಂಚಾಯತಿಗಳ ಮಟ್ಟಕ್ಕೆ ತಲುಪುವುದಕ್ಕೆ ಹೆಚ್ಚಿನ ಸಮಯವಾಗುತ್ತಿರುವುದರಿಂದ ವಿಕೇಂದ್ರಿಕರಣವನ್ನು ಈಗಾಗಲೇ ಕಾರ್ಯಗತಗೊಳಿಸಿದ್ದು, ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿರುತ್ತದೆ. ಅಂದರೆ, ಗ್ರಾಮ ಪಂಚಾಯತಿಗಳು ಸರಿಯಾದ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ಉಸ್ತುವಾರಿ ನಡೆಸಬೇಕೆಂದು ತಿಳಿಸಿದರು. ತಾವು ರಾಜ್ಯದ ಅಭಿವೃದ್ಧಿಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಕರ್ತವ್ಯ ನಿರ್ವಹಿಸಲು ತಮಗೆ ಬಹಳ ದೊಡ್ಡ ಅವಕಾಶ ದೊರೆತಿದ್ದು ಅದರ ಸದ್ಬಳಕೆಯನ್ನು ಮಾಡಿಕೊಳ್ಳಬೇಕೆಂದು ತಿಳಿಸಿದರು. ಶುದ್ಧ ಕುಡಿಯುವ ನೀರನ್ನು ಒದಗಿಸುವಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರ ಪಾತ್ರ ಬಹು ದೊಡ್ಡದಾಗಿದೆ ಎಂದು ತಿಳಿಸಿದರು. ಶಾಸಕರ ನಿಧಿ ಹಾಗೆಯೇ ಜಿಲ್ಲಾ ಪಂಚಾಯತಿ ಅಧ್ಯಕ್ಷರ ನಿಧಿಯ ಬೇಡಿಕೆಯು ಸೂಕ್ತವಲ್ಲವೆಂದು ತಿಳಿಸಿದರು.

ಸಭಾಧ್ಯಕ್ಷರ ಪ್ರಾಸ್ತಾವಿಕ ಭಾಷಣದ ನಂತರ ಈ ಕೆಳಕಂಡ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು ತಮ್ಮ ಕುಂದು ಕೊರತೆಗಳ ಬಗ್ಗೆ ಮಾನ್ಯ ಸಚಿವರೊಂದಿಗೆ ಚರ್ಚಿಸಿ ಉತ್ತರಗಳನ್ನು ಪಡೆದುಕೊಂಡರು. ಅದರ ವಿವರ ಈ ಕೆಳಕಂಡಂತೆ ಇದೆ.

ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಾ, ಹಿಂದಿನ ಸಾಲುಗಳ ಬಾಕಿ ಬಿಲ್ಲುಗಳ ಪಾವತಿ ಇರುವುದರಿಂದ 2016–17ನೇ ಸಾಲಿನಲ್ಲಿ ಯಾವುದೇ ಹೊಸ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬಾಕಿ ಬಿಲ್ಲುಗಳ ಪಾವತಿಗಾಗಿ ಅನುದಾನವನ್ನು ಬಿಡುಗಡೆಗೊಳಿಸಬೇಕೆಂದು ಕೋರಿದರು. ಇದಕ್ಕೆ ಮುಖ್ಯ ಅಭಿಯಂತರರು, ಪಿ.ಆರ್.ಇ.ಡಿ.ರವರು ಉತ್ತರ ಕನ್ನಡ, ಉಡುಪಿ ಮತ್ತು ಕೆಲವು ಜಿಲ್ಲೆಗಳಲ್ಲಿ ಕಾಮಗಾರಿಗಳು ಮುಂದುವರೆದ ಕಾಮಗಾರಿಗಳಾಗಿದ್ದು, ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಈಗಾಗಲೇ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡ, ಆದರೆ ಕಾಮಗಾರಿಗಳು ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ಕೈಬಿಟ್ಟು, ಅಗತ್ಯ ಕಾಮಗಾರಿಗಳ ವಿವರಗಳನ್ನು ಫೆಬ್ರವರಿ 1, 2017ರೊಳಗೆ ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಿದರು. ಈ ರೀತಿ ಪ್ರಾರಂಭಿಸದ ಕಾಮಗಾರಿಗಳನ್ನು ಕೈಬಿಟ್ಟು ಕುಡಿಯುವ ನೀರಿನ ಕಾಮಗಾರಿಗಳ ಅನುದಾನದಲ್ಲಿ ಶೇ.10ರಷ್ಟು

ಅನುದಾನವನ್ನು ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಮೀಸಲಿಡಬೇಕಾಗಿದ್ದು, ಇದಕ್ಕೆ ಸಂಬಂಧಿಸಿದ ಸುತ್ತೋಲೆಯನ್ನು ಹೊರಡಿಸಬೇಕೆಂದು ಮಾನ್ಯ ಸಚಿವರು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಅಭಿಯಂತರರು ಹಾಗೂ ಆಯುಕ್ತರಿಗೆ ಸೂಚಿಸಿದರು.

ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಮಾತನಾಡುತ್ತಾ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ಕಲ್ಲು ಬಂಡೆಗಳಿಂದ ಕೂಡಿದ್ದು ಹಾಗೂ ಬರಪೀಡಿತ ಜಿಲ್ಲೆಗಳೆಂದು ಘೋಷಿತವಾಗಿವೆ. ಈ ಜಿಲ್ಲೆಗಳಲ್ಲಿ ಶೌಚಾಲಯಗಳನ್ನು ಕೊಪ್ಪಳ ಜಿಲ್ಲೆಯ ಮಾದರಿಯಲ್ಲಿ ನಿರ್ಮಿಸಲು ಒಂದು ಶೌಚಾಲಯಕ್ಕೆ ರೂ.35,000/- ರಿಂದ ರೂ.40,000/- ಗಳಾಗುತ್ತದೆಂದು ಅಂದಾಜಿಸಲಾಗಿದ್ದು, ಇದಕ್ಕೆ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿದರು. ಮಾನ್ಯ ಸಚಿವರು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಅಭಿಯಂತರರು ಹಾಗೂ ಆಯುಕ್ತರು ಇವರು ಕೊಪ್ಪಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೊಂದಿಗೆ ಚರ್ಚಿಸಿ ರೂ.30000/- ಗಳಂತೆ ಬಿಡುಗಡೆಗೊಳಿಸಲು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಚಿತ್ರದುರ್ಗ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಮಾತನಾಡುತ್ತಾ ಚಿತ್ರದುರ್ಗ ಜಿಲ್ಲೆಯು ಸಹಿತ ಬರಪೀಡಿತ ಜಿಲ್ಲೆಯಾಗಿದ್ದು, ಜಿಲ್ಲೆಯಲ್ಲಿ ಒಟ್ಟು 189 ಗ್ರಾಮ ಪಂಚಾಯತ್‌ಗಳಲ್ಲಿ ಸುಮಾರು 1439 ಹಳ್ಳಿಗಳಿದ್ದು, ಪ್ರತಿ ಹಳ್ಳಿಗೆ ಕುಡಿಯುವ ನೀರಿನ ಸರಬರಾಜಿಗಾಗಿ ಗ್ರಾಮೀಣ ಜನತೆಯ ಕೋರಿಕೆಯ ಮೇರೆಗೆ ಬೋರ್‌ವೆಲ್‌ಗಳನ್ನು ಕೊರೆಸಲಾಗಿದ್ದು, ಇದರಲ್ಲಿ ಸುಮಾರು 721 ಬೋರ್‌ವೆಲ್‌ಗಳು ವಿಫಲವಾಗಿರುತ್ತವೆ. ಇವುಗಳನ್ನು ಸರಿಪಡಿಸಲು ಯಾವ ರೀತಿ ಅನುದಾನ ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರನ್ನು ಕೋರಿದರು. ಇದಕ್ಕೆ ಮಾನ್ಯ ಸಚಿವರು ಈ ಎಲ್ಲಾ ಬೋರ್‌ವೆಲ್‌ಗಳನ್ನು ಕೊರೆಸಲು ಪರವಾನಿಗೆಯನ್ನು ಪಡೆಯಲಾಗಿತ್ತೇ ಎಂದು ಪ್ರಶ್ನಿಸಿದರು. ಒಂದು ವೇಳೆ ಗ್ರಾಮದ ಜನತೆಗೆ ಕುಡಿಯುವ ನೀರಿನ ತೀರಾ ಕೊರತೆ ಇದೆ ಎಂದು ತಮಗೆ ಜಿಲ್ಲಾ ಪಂಚಾಯತಿಯಲ್ಲಿ ಭೇಟಿ ನೀಡಿ ಒತ್ತಾಯಿಸಿದ್ದಲ್ಲಿ ನಿಜವಾಗಿಯೂ ಬೋರ್‌ವೆಲ್ ಕೊರೆಯಬೇಕಾಗಿದ್ದಲ್ಲಿ ಕೊರೆಯಿಸಲು ಅನುಮತಿಸುವುದಾಗಿ ತಿಳಿಸಿದರು.

ರಾಮನಗರ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮಾತನಾಡುತ್ತಾ ರಾಮನಗರ ಜಿಲ್ಲೆಯ ಕುಡಿಯುವ ನೀರಿನ ಕಾಮಗಾರಿಗಳ ಪೈಕಿ 37 ಕಾಮಗಾರಿಗಳಿಗೆ ಬೇರೆ ಬೇರೆ ಲೆಕ್ಕ ಶೀರ್ಷಿಕೆಗಳಲ್ಲಿ ಎರಡು ಬಾರಿ ಅನುದಾನ ಬಿಡುಗಡೆಯಾಗಿರುವುದನ್ನು ಮಾನ್ಯ ಸಚಿವರ ಗಮನಕ್ಕೆ ತಂದರು. ಅದಕ್ಕೆ ಮಾನ್ಯ ಸಚಿವರು ಇದನ್ನು ಪರಿಶೀಲಿಸಿ ಕ್ರಮಕೈಗೊಳ್ಳಬೇಕೆಂದು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಅಭಿಯಂತರರು ಹಾಗೂ ಆಯುಕ್ತರು ಇವರಿಗೆ ಸೂಚಿಸಿದರು.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ರಾಜ್ಯದಲ್ಲಿ ಕುಡಿಯುವ ನೀರು ಸಮಸ್ಯೆ ಹೆಚ್ಚಾಗುತ್ತಿದ್ದು, ಈ ನಿಟ್ಟಿನಲ್ಲಿ ಬೋರ್‌ವೆಲ್‌ಗಳನ್ನು ಪರವಾನಗಿ ಇಲ್ಲದೆ ಕೊರೆಸುತ್ತಿರುವ ಬಗ್ಗೆ ಸಮಗ್ರವಾಗಿ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು ಸಭೆಯ ಗಮನಕ್ಕೆ ತಂದಾಗ, ಈ ಕಾಮಗಾರಿಗಳು ಗುತ್ತಿಗೆದಾರರ ಆಧಾರಿತ ಕಾಮಗಾರಿಗಳಾಗದೇ, ಎಲ್ಲಿ ಗ್ರಾಮೀಣ ಜನರಿಗೆ ಅವಶ್ಯಕತೆ ಇದೆಯೋ ಅಲ್ಲಿ ಮಾತ್ರ ಬೋರ್‌ವೆಲ್‌ಗಳನ್ನು ಕೊರೆಸಬಹುದಾಗಿದ್ದು, ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಬೋರ್‌ವೆಲ್‌ಗಳನ್ನು ಕೊರೆಸುವ ಮುನ್ನ ಆಯಾ ಗ್ರಾಮ ಪಂಚಾಯತಿಗಳ ಗಮನಕ್ಕೆ

ತರಬೇಕು ಎನ್ನುವ ಸರ್ಕಾರದ ಸುತ್ತೋಲೆಯನ್ನು ಮತ್ತಷ್ಟು ಬಲಿಷ್ಟಪಡಿಸಿ ಹೊಸ ಸುತ್ತೋಲೆಯನ್ನು ಹೊರಡಿಸಬೇಕೆಂದು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಅಭಿಯಂತರರು ಹಾಗೂ ಆಯುಕ್ತರಿಗೆ ಮಾನ್ಯ ಸಚಿವರು ಸೂಚಿಸಿದರು.

ಜಿಲ್ಲೆಗಳಲ್ಲಿ ಬರಗಾಲದ ಜೊತೆಗೆ ಬೇಸಿಗೆಯು ಸಮೀಪಿಸುತ್ತಿರುವುದರಿಂದ ಬಾಕಿಯಿರುವ ನೀರಿನ ಬವಣೆಯನ್ನು ನಿವಾರಿಸಲು ಪ್ರತಿ ಜಿಲ್ಲಾ ಪಂಚಾಯತಿಗೆ ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳು ಒತ್ತಾಯಿಸಿದರು. ಮಾನ್ಯ ಸಭಾಧ್ಯಕ್ಷರು ಮಾತನಾಡಿ ಪ್ರತಿ ಜಿಲ್ಲಾ ಪಂಚಾಯತಿಗೆ ತುರ್ತಾಗಿ ಬಾಕಿಯಿರುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ರೂ.50.00 ಲಕ್ಷಗಳ ಅನುದಾನವನ್ನು ಆಯಾ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಅಭಿಯಂತರರು ಹಾಗೂ ಆಯುಕ್ತರಿಗೆ ತಿಳಿಸಿದರು.

ಜಿಲ್ಲಾ ಪಂಚಾಯತಿಗಳಿಗೆ ವಾರ್ಷಿಕವಾಗಿ 2011ರ ಜನಗಣತಿಯ ಪ್ರಕಾರ ಜನಸಂಖ್ಯೆ ಆಧಾರಿತವಾಗಿ ನೀಡಲಾಗುತ್ತಿರುವ ಶಾಸನಬದ್ಧ ಅಭಿವೃದ್ಧಿ ಅನುದಾನವನ್ನು ಜಿಲ್ಲಾ ಪಂಚಾಯತಿ ಅಧ್ಯಕ್ಷರು ತುರ್ತು ಪರಿಸ್ಥಿತಿಗಳಲ್ಲಿ ವಿನಿಯೋಗಿಸಬಹುದಾಗಿದ್ದು, ಈ ವಿಷಯವಾಗಿ ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2013 ದಿನಾಂಕ:17-07-2013 ರಲ್ಲಿ ಆದೇಶವನ್ನು ಹೊರಡಿಸಲಾಗಿದ್ದು, ಈ ಆದೇಶದಲ್ಲಿ ಯಾವೆಲ್ಲ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬಹುದು ಎಂಬುದರ ಬಗ್ಗೆ ಪರಿಶೀಲಿಸಿ ಸೇರ್ಪಡೆ ಮಾಡಿ ಪರಿಷ್ಕೃತ ಆದೇಶವನ್ನು ಹೊರಡಿಸಬೇಕೆಂದು ಮಾನ್ಯ ಸಚಿವರು ನಿರ್ದೇಶಕರು(ಪಂ.ರಾಜ್-2) ಇವರಿಗೆ ಆದೇಶಿಸಿದರು.

ಮುಂದುವರೆದು, ಜಿಲ್ಲಾ ಪಂಚಾಯತಿ ಅಧ್ಯಕ್ಷರ ಒಕ್ಕೂಟದ ಅಧ್ಯಕ್ಷರು ಮಾತನಾಡಿ ವಾರ್ಷಿಕವಾಗಿ 2011ರ ಜನಗಣತಿಯ ಪ್ರಕಾರ ಜನಸಂಖ್ಯೆ ಆಧಾರಿತವಾಗಿ ನೀಡಲಾಗುತ್ತಿರುವ ಶಾಸನಬದ್ಧ ಅಭಿವೃದ್ಧಿ ಅನುದಾನವು ಸಾಕಾಗುತ್ತಿಲ್ಲವೆಂದು ಇದನ್ನು ಕನಿಷ್ಠ ರೂ.5.00 ಕೋಟಿಗಳಿಗೆ ಹೆಚ್ಚಿಸಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತಂದರು. ಇದೇ ರೀತಿ ತಾಲ್ಲೂಕು ಪಂಚಾಯತಿಗಳ ಅನುದಾನವನ್ನು ರೂ.2.00 ಕೋಟಿಗಳಿಗೆ ಹೆಚ್ಚಿಸಬೇಕೆಂದು, ಗ್ರಾಮ ಪಂಚಾಯತಿಗಳ ಶಾಸನಬದ್ಧ ಅನುದಾನವನ್ನು ಕ್ರಮವಾಗಿ ರೂ.15.00 ಲಕ್ಷ ಮತ್ತು ರೂ.17.00 ಲಕ್ಷಗಳಿಗೆ ಹೆಚ್ಚಿಸಬೇಕೆಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಮಾನ್ಯ ಸಚಿವರು ಮಾತನಾಡಿ ಈ ಬೇಡಿಕೆಗಳು ಮತ್ತು ಇತರೇ ಬೇಡಿಕೆಗಳೊಂದಿಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಲು ರಚಿಸಲಾಗುವ ನಿಯೋಗದಲ್ಲಿ ಕೆಲವು ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳು ಇರಬಹುದು ಎಂದು ತಿಳಿಸಿದರು.

ಚಿತ್ರದುರ್ಗ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಮಾತನಾಡಿ, ಈಗ ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರ ಗೃಹ ದೂರವಾಣಿಗಳು ಕಾರ್ಯ ನಿರ್ವಹಿಸುತ್ತಿಲ್ಲ ಹಾಗೂ ಸುಮಾರು ಅಧ್ಯಕ್ಷರು ಗೃಹ ದೂರವಾಣಿಗಳನ್ನು ಬಳಸುತ್ತಿಲ್ಲ. ಜಿಲ್ಲೆಯಾದ್ಯಂತ ಕಾಮಗಾರಿಗಳ ವೀಕ್ಷಣೆಗಾಗಿ ಪ್ರವಾಸ ಹೆಚ್ಚಾಗಿ ಕೈಗೊಳ್ಳುತ್ತಿರುವುದರಿಂದ ಮೊಬೈಲ್‌ಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಿರುವುದರಿಂದ, ಗೃಹ ದೂರವಾಣಿಗೆ ಬದಲು ಮೊಬೈಲ್ ಬಿಲ್ಲು ಮರುಪಾವತಿಗಾಗಿ ಅನುಮತಿಯನ್ನು ನೀಡಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತಂದರು. ಇದಕ್ಕೆ ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರು ತಮ್ಮ ಸಹಮತಿಯನ್ನು ಸೂಚಿಸಿದರು. ಮಾನ್ಯ ಸಚಿವರು ಮಾತನಾಡಿ, ಸದರಿ ಗೃಹ ದೂರವಾಣಿಯ ಸರ್ಕಾರಿ ಆದೇಶವನ್ನು ಕೂಲಂಕಷವಾಗಿ ಪರಿಶೀಲಿಸಿ, ಗೃಹ ದೂರವಾಣಿಯ

ಬದಲು ಮೊಬೈಲ್ ಬಿಲ್ಲಿನ ಮರು ಪಾವತಿಗಾಗಿ ಪರಿಷ್ಕೃತ ಆದೇಶವನ್ನು ಹೊರಡಿಸಬೇಕೆಂದು ನಿರ್ದೇಶಕರು (ಪಂ.ರಾಜ್-2) ರವರಿಗೆ ಸೂಚಿಸಿದರು.

ರಾಮನಗರ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಜಿಲ್ಲಾ ಪಂಚಾಯತಿಗಳಲ್ಲಿ ಮತ್ತು ತಾಲ್ಲೂಕು ಪಂಚಾಯತಿ ಕಛೇರಿಗಳಲ್ಲಿ ಅಧಿಕಾರಿ/ಸಿಬ್ಬಂದಿ ವರ್ಗದವರ ಸಂಖ್ಯೆ ಕಡಿಮೆ ಇರುವ ಬಗ್ಗೆ ಮಾತನಾಡಿ ನಿವೃತ್ತ ಅಧಿಕಾರಿ/ ಸಿಬ್ಬಂದಿ ವರ್ಗದವರನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಸಲುವಾಗಿ ಸೂಕ್ತ ನಿರ್ದೇಶನವನ್ನು ನೀಡಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತಂದರು. ಇದಕ್ಕೆ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷರು ತಮ್ಮ ಸಹಮತಿಯನ್ನು ಸೂಚಿಸಿದರು. ಈ ಬಗ್ಗೆ ಮಾನ್ಯ ಸಚಿವರು ಮಾತನಾಡುತ್ತಾ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಕಛೇರಿಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ನಿವೃತ್ತ ಅಧಿಕಾರಿ/ಸಿಬ್ಬಂದಿ ವರ್ಗದವರನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ ವಿಸ್ತಾರವಾದ ಸರ್ಕಾರಿ ಸುತ್ತೋಲೆಯನ್ನು ಇನ್ನು ಒಂದು ವಾರದೊಳಗೆ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಹಾಗೂ ಅಧ್ಯಕ್ಷರಿಗೆ ರವಾನಿಸಬೇಕೆಂದು ಆಡಳಿತ ಶಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ ಚಾಮರಾಜನಗರ ಜಿಲ್ಲೆಯಲ್ಲಿ ಭೂ ಮಾಪನ ತಜ್ಞರಿಗೆ ನೀಡಿರುವ ಉಪಕರಣವನ್ನು ಕೋರೆಯಿಸಲಾದ ಬೋರ್‌ವೆಲ್‌ಗಳ ಮೇಲೆ ಇಟ್ಟಾಗ ಅದರ ಆಳ ಮತ್ತು ಕೇಸಿಂಗ್ ಪೈಪ್ ಎಲ್ಲಿ ಅಳವಡಿಸಲಾಗಿದೆ ಎಂಬುದು ತಿಳಿದುಬರುತ್ತದೆ. ಇದು ಸುಧಾರಿತ ಆವೃತ್ತಿಯ ಉಪಕರಣವಾಗಿದ್ದು ಇದನ್ನು ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಒದಗಿಸುವುದು, ಅವಶ್ಯಕತೆ ಇರುವಲ್ಲಿ ತಾಲ್ಲೂಕು ಪಂಚಾಯತಿಗಳಿಗೆ ಒಂದರಂತೆ ಒದಗಿಸುವುದು ಸೂಕ್ತವೆಂದು ತಿಳಿಸಿದರು. ಇದಕ್ಕೆ ಎಲ್ಲಾ ಜಿಲ್ಲಾ ಪಂಚಾಯತಿ ಅಧ್ಯಕ್ಷರು ತಮ್ಮ ಸಹಮತಿಯನ್ನು ಸೂಚಿಸಿದರು. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ವಹಿಸುವಂತೆ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಅಭಿಯಂತರರು ಹಾಗೂ ಆಯುಕ್ತರಿಗೆ ತಿಳಿಸಿದರು.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಹಾಸನ, ಬೆಳಗಾವಿ ಮತ್ತು ಚಾಮರಾಜನಗರ ಜಿಲ್ಲೆಗಳ ಜಿಲ್ಲಾ ಪಂಚಾಯತಿ ಅಧ್ಯಕ್ಷರು ತಮಗೆ ಹೊಸ ವಾಹನವನ್ನು ಖರೀದಿ ಮಾಡಲು ಇನ್ನು ಆದೇಶ ಬಂದಿಲ್ಲವೆಂದು ಮಾನ್ಯ ಸಚಿವರ ಗಮನಕ್ಕೆ ತಂದರು. ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ ಶಾಖೆ) ಇವರು ಮಾತನಾಡುತ್ತಾ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಸಾಮಾನ್ಯವಾಗಿ ರೂ.16.00 ಲಕ್ಷಗಳ ವೆಚ್ಚದಲ್ಲಿ ಹೊಸ ವಾಹನವನ್ನು ಖರೀದಿಸುವ ಸಲುವಾಗಿ ಆದೇಶವನ್ನು ಹೊರಡಿಸಲಾಗುವುದು. ಈ ಸಂಬಂಧವಾಗಿರುವ ಕಡತವು ಆರ್ಥಿಕ ಇಲಾಖೆಯಲ್ಲಿ ಬಾಕಿ ಇದ್ದು, ಆ ಇಲಾಖೆಯಿಂದ ಕಡತ ಸ್ವೀಕೃತವಾದ ಕೂಡಲೇ ಸೂಕ್ತ ಆದೇಶವನ್ನು ಹೊರಡಿಸ ಲಾಗುವುದೆಂದು ಸಭೆಯ ಗಮನಕ್ಕೆ ತಂದರು.

ರಾಜ್ಯ ಸರ್ಕಾರವು ಜಾರಿಗೊಳಿಸಿರುವ ಮೇಲ್ಕಂಡ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಕಾರ್ಯ ರೂಪಕ್ಕೆ ತಂದಲ್ಲಿ ಕರ್ನಾಟಕ ರಾಜ್ಯವು ಸಹಿತ ದೇಶದಲ್ಲಿಯೇ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿರುವ ಇತರ ರಾಜ್ಯಗಳೊಂದಿಗೆ ಸರಿ ಸಮಾನಾಗಿ ನಿಲ್ಲಬಹುದಾಗಿದೆ. ಅಧಿಕಾರ ವಿಕೇಂದ್ರೀಕರಣದ ಅಧ್ಯಯನ ನಡೆಸುತ್ತಿರುವ ಪಂಚಾಯತ್ ರಾಜ್ ಮಂತ್ರಾಲಯದ 2017ರ ಪ್ರಥಮ ಶ್ರೇಣಿಯನ್ನು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪಡೆದುಕೊಳ್ಳಲಿ ಎಂಬ ಆಶಯದೊಂದಿಗೆ ದೂರದೃಷ್ಟಿಯನ್ನಿಟ್ಟು ಕೊಂಡಿದ್ದೇನೆ.

ಕವಿಯ(ಕ್ಷ) ಪ್ರಶ್ನೆ?

# ಸಾಮಾಜಿಕ ಜಾಲತಾಣಗಳನ್ನು ಬಳಸುವತ್ತ...

ಇಂದಿನ ಆಧುನಿಕ ಜಗತ್ತಿನಲ್ಲಿ ಎಲ್ಲಾ ವ್ಯವಹಾರಗಳು ವಿಧ್ಯುನ್ಮಾನ ಸಂವಹನವಾಗುತ್ತಾ ಸಾಗಿದೆ. ಪ್ರಚಲಿತದಲ್ಲಿರುವ ಮುದ್ರಣ ಮಾಧ್ಯಮ ನಿಧಾನವಾಗಿ ಕರಗುತ್ತಾ ಸರ್ವವೂ ವಿದ್ಯನ್ಮಾನವಾಗುತ್ತಿವೆ. ಹಾಗಾಗಿಯೇ ಸಂವಹನಕ್ಕಾಗಿ ವಿವಿದ ಜಾಲತಾಣಗಳನ್ನು ಇಂದಿನ ಯುವ ಪೀಳಿಗೆ ನೆಚ್ಚಿಕೊಂಡಿವೆ ಹಾಗೂ ಮೆಚ್ಚಿಕೊಂಡಿವೆ.

ಆದರೆ ಇಂತಹ ಸಾಮಾಜಿಕ ಜಾಲತಾಣಗಳನ್ನು ವಿನಿಮಯವಾಗುತ್ತಿರುವ ವಿಚಾರ ವಿನಿಮಯಗಳ ಕುರಿತು ನಾವು ಚಿಂತಿಸಬೇಕಾಗಿದೆ. ಯಾವುದೋ ವೈಯಕ್ತಿಕ ದ್ವೇಷ, ಸಾಮಾಜಘಾತುಕ ಸುಳ್ಳು ಸುದ್ದಿಗಳು, ಬೆದರಿಕೆಯೊಡ್ಡುವ ಪ್ರಯತ್ನಗಳು, ನಿಷ್ಪ್ರಯೋಜಕ ಮಾಹಿತಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದನ್ನು ನಾವಿಂದು ಕಾಣಬಹುದಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವಿಚಾರ ವಿನಿಮಯಗೊಳ್ಳುವ ಮಾಹಿತಿಗಳು ಅತ್ಯಂತ ವೇಗದೊಂದಿಗೆ ಪರಿಣಾಮ ಬೀರುವುದರಿಂದ ಈ ಬಗ್ಗೆ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.



## ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1. ಯಾವುದೋ ಒಳ್ಳೆ ಗಳಿಗೆಯಲ್ಲಿ ಹಂಚಿಕೊಂಡ ವಿವರಗಳನ್ನು ಮತ್ತೊಂದು ಸಂದರ್ಭದಲ್ಲಿ ವೈಯಕ್ತಿಕ ದ್ವೇಷಕ್ಕಾಗಿ ದುರ್ಬಳಕೆ ಮಾಡಿಕೊಂಡು ಇಂತಹ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟ ಕಾರಣ ಎಷ್ಟೋ ಜೀವಗಳು ಸಂಕಷ್ಟಪಡುತ್ತಿರುವುದು/ ಜೀವ ಕಳೆದುಕೊಂಡಿರುವುದು ಉಚಿತವೇ?
2. ವೈಯಕ್ತಿಕ ದ್ವೇಷಕ್ಕಾಗಿ ಸಾಮಾಜಿಕ ಜಾಲತಾಣಗಳ ಮೂಲಕ ಮತ್ತೊಬ್ಬರನ್ನು ಹಿಂಸಿಸುವುದು ಎಷ್ಟರ ಮಟ್ಟಿಗೆ ಸರಿ?
3. ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿರುವ ಇಂದಿನ ಯುವ ಸಮೂಹ ಈ ಬಗ್ಗೆ ಚಿಂತಿಸುವುದು ಒಳ್ಳೆಯದಲ್ಲವೇ?
4. ತಂದೆ ತಾಯಂದಿರು, ಗುರುಗಳು ಮುಂತಾದ ಹಿರಿಯರೊಂದಿಗೆ ವೈಯಕ್ತಿಕ ಒಡನಾಟವಿಟ್ಟುಕೊಂಡಲ್ಲಿ ಇಂದಿನ ಯುವ ಸಮೂಹಕ್ಕೆ ಹಿರಿಯರ ಅನುಭವಗಳು ದಾರಿದೀಪವಾಗುವುದಿಲ್ಲವೇ?
5. ಸಾಮಾಜಿಕ ಜಾಲತಾಣಗಳಲ್ಲಿ ಆರೋಗ್ಯಕರ ವಿಚಾರವಿನಿಮಯಗಳನ್ನಷ್ಟೇ ಹಂಚಿಕೊಂಡಲ್ಲಿ ಒಂದು ಉತ್ತಮ ಆರೋಗ್ಯಕರ ಸಮಾಜ ರೂಪುಗೊಳ್ಳುವುದಿಲ್ಲವೇ?

**ಶ್ರೀನಿವಾಸ ವಿ.**
ನಂ.6, 13ನೇ ಅಡ್ಡರಸ್ತೆ, ಕೇತಮಾರನಹಳ್ಳಿ,
ರಾಜಾಜಿನಗರ, ಬೆಂಗಳೂರು 560010

ಕಾವ್ಯ ವಿಕಾಸ

# "ಕಟ್ಟೋಣ ಶೌಚಾಲಯ ಮುಕ್ತ ನಾಡ"

ಕಟ್ಟೋಣ ಬಾರೋ ಗೆಳೆಯ ಶೌಚಾಲಯ ಮುಕ್ತ ನಾಡ
ಹಳ್ಳಿ ಹಳ್ಳಿಗಳಲ್ಲಿ, ಮನೆ ಮನೆಗಳಲ್ಲಿ, ಬೀದಿ ಬೀದಿಗಳಲಿ
ಶಾಲೆ ಶಾಲೆಗಳಲಿ, ಅಂಗನವಾಡಿ ಕೇಂದ್ರಗಳಲಿ, ಗ್ರಂಥಾಲಯಗಳಲಿ
ಕಟ್ಟೋಣ ಬಾರೋ ಗೆಳೆಯ ಶೌಚಾಲಯ ನಾಡ||

ಅಕ್ಕ ತಂಗಿಯರೇ, ಅಣ್ಣ ತಮ್ಮಂದರೇ, ಬಂಧುಗಳೇ,
ಸ್ನೇಹ ಬಳಗವೇ ಸರ್ಕಾರದ ಪ್ರಮುಖ ಯೋಜನೆಯಾದ
ನಿರ್ಮಲ ಭಾರತದ ಸುಂದರ ನಾಡಾಗಲು
ಕಟ್ಟೋಣ ಬಾರೋ ಗೆಳೆಯ ಶೌಚಾಲಯ ಮುಕ್ತ ನಾಡ||

ಗ್ರಾಮೀಣ ಸಮುದಾಯದ ಮೂಡನಂಬಿಕೆಗೆ
ಕಡಿವಾಣಹಾಕಿ ಚಿತ್ರಿಚಿತ್ರ, ಕರಪತ್ರವ ನೀಡಿ ಸ್ವಚ್ಛಭಾರತದ
ಯೋಜನೆಯ ಕಾರ್ಯ ಪ್ರತಿಜನತೆಗೂ ತಿಳಿಯಲು
ಕಟ್ಟೋಣ ಬಾರೋ ಗೆಳೆಯ ಶೌಚಾಲಯ ಮುಕ್ತ ನಾಡ||

ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಯ
ಸರ್ವ ಸದಸ್ಯರ ಸಹಕಾರದಲಿ, ಜನಪ್ರತಿನಿಧಿಗಳ ಮುಂದಾಳತ್ವದಲಿ
ಸರ್ಕಾರದ ವಿವಿಧ ಇಲಾಖೆಗಳ ಸಹಕಾರದಲಿ
ಕಟ್ಟೋಣ ಬಾರೋ ಗೆಳೆಯ ಶೌಚಾಲಯ ಮುಕ್ತ ನಾಡ||

ಭರತಖಂಡದಲಿ ಬದಲಾಗಲು ಕರ್ನಾಟಕ ರಾಜ್ಯವು
ಭೂಪಟದಲ್ಲಿ ಉತ್ತುಂಗದಲ್ಲಿರಲು ಎಲ್ಲರ ಸಹಕಾರ
ಸಹಬಾಳ್ವೆಯಿಂದ, ಭಾವೈಕ್ಯತೆಯ ಮಂತ್ರವ ಹೇಳುತ
ಸುಂದರ, ಚಂದದ ನಾಡನುನ ಹಸನಾಗಲು ಪಣತೊಟ್ಟು
ಕಟ್ಟೋಣ ಬಾರೋ ಗೆಳೆಯ ಶೌಚಾಲಯ ಮುಕ್ತ ನಾಡ||

ಬಿ.ಎ.ರಾಜಪ್ಪ ನಿಬಗೂರು
ಸ್ವಚ್ಛತಾ ಪ್ರೇರಕರು, ಬಿದರಕೆರೆ ಗ್ರಾಮ ಪಂಚಾಯತಿ,
ಜಗಳೂರು ತಾಲೂಕು, ದಾವಣಗೆರೆ 577521.

ಸುತ್ತೋಲೆ

# ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 15–12–2016.

ಸಂ.ಗ್ರಾಅಪ 1103 ಗ್ರಾಪಂಅ 2016 (ಭಾಗ)

## ಸುತ್ತೋಲೆ

**ವಿಷಯ** : ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ಮುಂಬಡ್ತಿ ಕೋಟಾದ ಹುದ್ದೆಗಳಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ** : ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 759 ಗ್ರಾಪಂಅ 2014 ದಿನಾಂಕ: 01–09–2016

***********

ಉಲ್ಲೇಖ(1) ರ ಸರ್ಕಾರದ ಪತ್ರದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ಮುಂಬಡ್ತಿ ಕೋಟಾದಡಿ ಖಾಲಿ ಇರುವ ಹುದ್ದೆಗಳಿಗೆ ಮುಂಬಡ್ತಿ ಮೂಲಕ ಮಾತ್ರ ಭರ್ತಿ ಮಾಡಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ.

ಆದಾಗ್ಯೂ ಸದರಿ ವೃಂದಗಳ ಮುಂಬಡ್ತಿ ಕೋಟಾದಡಿ ಹುದ್ದೆಗಳು ಖಾಲಿ ಇದ್ದು, ಅರ್ಹ ನೌಕರರು ಲಭ್ಯವಿದ್ದರೂ ಉದ್ದೇಶ ಪೂರ್ವಕವಾಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮುಂಬಡ್ತಿ ನೀಡದಿರುವ ಬಗ್ಗೆ ಹಾಗೂ ಖಾಲಿ ಇರುವ ಹುದ್ದೆಗಳಿಗೆ ಶೀಘ್ರವಾಗಿ ಮುಂಬಡ್ತಿ ನೀಡುವ ಬಗ್ಗೆ ಇತ್ತೀಚಿಗೆ ಬೆಳಗಾವಿಯಲ್ಲಿ ನಡೆದ ಕರ್ನಾಟಕ ವಿಧಾನ ಮಂಡಲ ಅಧಿವೇಶನದಲ್ಲಿ ಹಲವಾರು ಶಾಸಕರುಗಳು ಪ್ರಸ್ತಾಪಿಸಿದ್ದು, ಮಾನ್ಯ ಸಚಿವರು ಮುಂಬಡ್ತಿ ಕೋಟಾದಡಿ ಖಾಲಿ ಇರುವ ಹುದ್ದೆಗಳಿಗೆ ಮುಂಬಡ್ತಿ ನೀಡಲು ಕೂಡಲೇ ಕ್ರಮ ಕೈಗೊಳ್ಳುವುದಾಗಿ ಸದನದಲ್ಲಿ ಉತ್ತರ ನೀಡಿರುತ್ತಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆದ್ಯತಾ ಯೋಜನೆಗಳಾದ ಸ್ವಚ್ಛ ಭಾರತ ಅಭಿಯಾನ, ಎಂ.ಜಿ.ಎನ್.ಆರ್.ಇ.ಜಿ.ಎ., ಕುಡಿಯುವ ನೀರು ಸರಬರಾಜು ವ್ಯವಸ್ಥೆ, ಪಡಿತರ ಚೀಟಿ ವಿತರಣೆ ಮತ್ತು ಗ್ರಾಮ ಪಂಚಾಯತಿಯ ಪ್ರಕಾರ್ಯಗಳು ಇತ್ಯಾದಿಗಳನ್ನು ಅನುಷ್ಠಾನಗೊಳಿಸುವ ಹೊಣೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಮೇಲಿದ್ದು, ಮುಂಬಡ್ತಿ ಕೋಟಾದಡಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡುವ ಅವಶ್ಯಕತೆ ಇರುತ್ತದೆ.

ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು, 2008, ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು 2012 ಮತ್ತು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು 2014 ರನ್ವಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1, ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ಮುಂಬಡ್ತಿ ಕೋಟಾದಡಿ ಖಾಲಿ ಇರುವ ಹುದ್ದೆಗಳಿಗೆ ಮುಂಬಡ್ತಿ ಮೂಲಕ ಮಾತ್ರ ಜೇಷ್ಠತೆ

ಮತ್ತು ಅರ್ಹತೆ ಆಧಾರದ ಮೇಲೆ ನಿಯಮಾನುಸಾರ ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮ ವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತೊಮ್ಮೆ ಸೂಚಿಸಿದೆ.

1. ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ಶೇ 35 ರಷ್ಟು ಮುಂಬಡ್ತಿ ಕೋಟಾದ ಹುದ್ದೆಗಳನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1 ವೃಂದದ ಅರ್ಹ ನೌಕರರಿಂದ ಭರ್ತಿ ಮಾಡತಕ್ಕದ್ದು.

2. ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1 ವೃಂದದ ಶೇ 50 ರಷ್ಟು ಮುಂಬಡ್ತಿ ಕೋಟಾದ ಹುದ್ದೆಗಳನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದಬಲಕ್ಕನುಸಾರವಾಗಿ 3:2 ರ ಅನುಪಾತದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1 ವೃಂದದ ಮೊದಲನೇ 3 ಖಾಲಿ ಹುದ್ದೆಗಳನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2 ರವರಿಗೆ ಹಾಗೂ ತದನಂತರದ 4 ಮತ್ತು 5 ನೇ ಖಾಲಿ ಹುದ್ದೆಗಳಿಗೆ ದ್ವಿತೀಯ ದರ್ಜೆ ಲೆಕ್ ಸಹಾಯಕರಿಂದ  ಭರ್ತಿ ಮಾಡತಕ್ಕದ್ದು.

3. ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2 ವೃಂದದ ಶೇ 70 ರಷ್ಟು ಹುದ್ದೆಗಳಿಗೆ ಹಿಂದಿನ ವಿಲೇಜ್ ಪಂಚಾಯತಿಗಳು ಅಥವಾ ಮಂಡಲ ಪಂಚಾಯತಿಗಳು ಅಥವಾ ಗ್ರಾಮ ಪಂಚಾಯತಿಗಳಲ್ಲಿ ಪೂರ್ಣಾವಧಿ ಕಾರ್ಯದರ್ಶಿ, ಲೆಕ್ಕಿಗರು, ಗುಮಾಸ್ತರು, ಬೆರಳಚ್ಚುಗಾರರು, ಬಿಲ್‌ಕಲೆಕ್ಟರ್‌ಗಳಾಗಿ ಸೇವೆ ಸಲ್ಲಿಸಿರುವ ನೌಕರರಿಂದ ನೇಮಕಾತಿ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.

4. ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ಶೇ 30 ರಷ್ಟು ಹುದ್ದೆಗಳಿಗೆ ಹಿಂದಿನ ವಿಲೇಜ್ ಪಂಚಾಯತಿಗಳು ಅಥವಾ ಮಂಡಲ ಪಂಚಾಯತಿಗಳು ಅಥವಾ ಗ್ರಾಮ ಪಂಚಾಯತಿಗಳಲ್ಲಿ ಪೂರ್ಣಾವಧಿ ಕಾರ್ಯದರ್ಶಿ, ಲೆಕ್ಕಿಗರು, ಗುಮಾಸ್ತರು, ಬೆರಳಚ್ಚುಗಾರರು, ಬಿಲ್‌ಕಲೆಕ್ಟರ್‌ಗಳಾಗಿ ಸೇವೆ ಸಲ್ಲಿಸಿರುವ ನೌಕರರಿಂದ ನೇಮಕಾತಿ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.

5. ಮೇಲ್ಕಂಡ ಪ್ರಕ್ರಿಯೆಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ:15–01–2017 ರೊಳಗೆ ಮುಗಿಸಿ ದಿನಾಂಕ: 20–01–2017 ರೊಳಗೆ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಸಂ.ಗ್ರಾಅಪ/27/ಗ್ರಾಪಂಸಿ/2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 09–12–2016

## ಸುತ್ತೋಲೆ

**ವಿಷಯ** : ರಾಜ್ಯದಲ್ಲಿನ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆ ಪಾವತಿ ಮಾಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ.

**ಉಲ್ಲೇಖ** :
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 27 ಗ್ರಾಪಂಸಿ 2015 ದಿನಾಂಕ: 09–03–2016.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಾಇ 71 ಎಲ್‌ಡಬ್ಲ್ಯೂಎ 2015 ದಿನಾಂಕ: 04–08–2016.
3. ಸರ್ಕಾರದ ಇದೇ ಸಮಸಂಖ್ಯೆಯ ಪತ್ರ ದಿನಾಂಕ:01–09–2016.

**********

ಸರ್ಕಾರವು ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸುವಂತೆ ಆಗಿಂದಾಗ್ಗೆ ನಿರ್ದೇಶನಗಳನ್ನು ನೀಡಿದ್ದರೂ ಕನಿಷ್ಠ ವೇತನವನ್ನು ನಿಗದಿತ ಸಮಯದಲ್ಲಿ ಪಾವತಿಸದಿರುವುದು ಕಂಡು ಬಂದಿರುವುದರಿಂದ ರಾಜ್ಯದ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆಯನ್ನು ಪ್ರತಿ ತಿಂಗಳ 05ನೇ ತಾರಿಖೀನೊಳಗಾಗಿ ತಪ್ಪದೆ ವೇತನ ಪಾವತಿ ಮಾಡಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಆಯಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಯಾ ಜಿಲ್ಲೆಯ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ, ಯಾವ ಯಾವ ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಠ ವೇತನ ನೀಡುತ್ತಿಲ್ಲವೆಂಬ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ, ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ಪಾವತಿಸುತ್ತಿರುವ ಬಗ್ಗೆ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ ರವರು ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಮಾಡಿ ಕನಿಷ್ಠ ವೇತನ ಪಾವತಿಸದವರ ವಿರುದ್ಧ ಕ್ರಮ ಕೈಗೊಳ್ಳಲು ಉಲ್ಲೇಖ(1) ರ ಸರ್ಕಾರದ ಸುತ್ತೋಲೆಯಲ್ಲಿ ಸವಿವರವಾಗಿ ತಿಳಿಸಲಾಗಿದೆ.

ಉಲ್ಲೇಖ(2) ರ ಕಾರ್ಮಿಕ ಇಲಾಖೆಯ ಅಧಿಸೂಚನೆಯಲ್ಲಿ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ ಕರ್ನಾಟಕ ರಾಜ್ಯಾದ್ಯಾಂತ "ನಗರ ಸ್ಥಳೀಯ ಸಂಸ್ಥೆಗಳು" ಹಾಗೂ "ಪಟ್ಟಣ ಮತ್ತು ಗ್ರಾಮ ಪಂಚಾಯತಿ ಸಂಸ್ಥೆಗಳು" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಾಂಕ:04–08–2016 ರಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಲಾಗಿದೆ. ಅದರಂತೆ ಉಲ್ಲೇಖ (3) ರ ಸರ್ಕಾರದ ಪತ್ರದಲ್ಲಿ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ರಾಜ್ಯದಲ್ಲಿನ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕನಿಷ್ಟ ವೇತನ ಮತ್ತು ತುಟ್ಟಿಭತ್ಯೆಯನ್ನು ಪಾವತಿ ಮಾಡಲು ಕ್ರಮ ತೆಗೆದುಕೊಳ್ಳುವಂತೆ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ.

ಇತ್ತೀಚಿಗೆ ಬೆಳಗಾವಿಯಲ್ಲಿ ನಡೆದ ಕರ್ನಾಟಕ ವಿಧಾನ ಮಂಡಲ ಅಧಿವೇಶನದಲ್ಲಿ ಹಲವಾರು ಶಾಸಕರುಗಳು ಗ್ರಾಮ ಪಂಚಾಯತಿ ನೌಕರರಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆ ನೀಡದಿರುವ ಬಗ್ಗೆ ಪ್ರಸ್ತಾಪಿಸಿದ್ದು, ಮಾನ್ಯ ಸಚಿವರು ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆ ಪಾವತಿಸಲು ಕೂಡಲೇ ಕ್ರಮ ಕೈಗೊಳ್ಳುವುದಾಗಿ ಸದನದಲ್ಲಿ ಉತ್ತರ ನೀಡಿರುತ್ತಾರೆ.

ಸರ್ಕಾರದಿಂದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಶಾಸನಬದ್ಧ ಅನುದಾನದಲ್ಲಿ ಶೇ 40 ರಷ್ಟು ಅನುದಾನವನ್ನು ಗ್ರಾಮ ಪಂಚಾಯತಿ ನೌಕರರ ವೇತನಕ್ಕಾಗಿ ಉಪಯೋಗಿಸುವುದರ ಜೊತೆಗೆ ಗ್ರಾಮ ಪಂಚಾಯತಿ ನೌಕರರಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ವೇತನ ಮತ್ತು ತುಟ್ಟಿಭತ್ಯೆ ಪಾವತಿಸಲು ಕೊರತೆಯಾಗುವ ವೇತನವನ್ನು ಗ್ರಾಮ ಪಂಚಾಯತಿಯ ವಾರ್ಷಿಕ ಆದಾಯದ ಶೇ 40 ರಷ್ಟನ್ನು ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ಉಪಯೋಗಿಸಿಕೊಳ್ಳಲು ಗ್ರಾಮ ಪಂಚಾಯತಿಗಳು ಕ್ರಮ ವಹಿಸುವಂತೆ ತಿಳಿಸಿದೆ.

ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ಪಾವತಿಸಲು ಕರ್ತವ್ಯಲೋಪವೆಸಗಿರುವ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ವಿರುದ್ಧ ದುರ್ವತನೆ ಎಂದು ಪರಿಗಣಿಸಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರನ್ವಯ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕರ್ನಾಟಕ ಸಿವಿಲ್ ಸೇವಾ (ಸಿಸಿಎ) ನಿಯಮಗಳು, 1957 ರನ್ವಯ ಶಿಸ್ತು ಕ್ರಮ ಜರುಗಿಸತಕ್ಕದೆಂದು ಮತ್ತೊಮ್ಮೆ ತಿಳಿಸಿದೆ.

ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ಪಾವತಿಸುತ್ತಿರುವ ಬಗ್ಗೆ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ ರವರು ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಮಾಡಿ ಕನಿಷ್ಠ ವೇತನ ಪಾವತಿಸದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಹ ತಿಳಿಸಿದೆ. ಈ ವಿಷಯದಲ್ಲಿ ಯಾವುದೇ ಲೋಪ ಕಂಡು ಬಂದ ಪಕ್ಷದಲ್ಲಿ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ (ಅಭಿವೃದ್ಧಿ) ರವರನ್ನು ವೈಯಕ್ತಿಕ ಜವಾಬ್ದಾರರನ್ನಾಗಿ ಮಾಡಲಾಗುವುದೆಂದೂ ಸಹ ಮತ್ತೊಮ್ಮೆ ತಿಳಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಜವಾಬ್ದಾರಿಗಳನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿದೆ.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪಕಾರ್ಯದರ್ಶಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತೊಮ್ಮೆ ತಿಳಿಸಿದೆ.

**(ಎಂ.ಕೆ. ಕೆಂಪೇಗೌಡ)**
ನಿರ್ದೇಶಕರು (ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2016–17ನೇ ಸಾಲಿನ ರಾಜ್ಯದಲ್ಲಿನ ತೀವ್ರ ಬರ ಪರಿಸ್ಥಿತಿಯನ್ನು ನಿಭಾಯಿಸಲು ಉಪಯುಕ್ತ ಕೆರೆಗಳ ಹೂಳೆತ್ತಲು "ಕೆರೆ ಸಂಜೀವಿನಿ–2" ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ: :

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:61:ಆರ್‌ಆರ್‌ಸಿ:2016, ದಿನಾಂಕ: 2.5.2016.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:61:ಆರ್‌ಆರ್‌ಸಿ:2016, ದಿನಾಂಕ: 5.5.2016, 10.5.2016 ಮತ್ತು 18.5.2016.
3. ಆರ್ಥಿಕ ಇಲಾಖೆಯ ಕಂಡಿಕೆ ಟಿಪ್ಪಣಿ ಸಂಖ್ಯೆ: ಆಇ 501 ವೆಚ್ಚ–6/2016 ದಿನಾಂಕ 29.11.2016.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:159:ಆರ್‌ಆರ್‌ಸಿ:2016, ದಿನಾಂಕ: 05.12.2016.
5. ಆದೇಶ ಸಂಖ್ಯೆ:ಆರ್‌ಡಿ:259:ಟಿಎನ್‌ಆರ್:2016, ದಿನಾಂಕ 06.10.2016.
6. ಆದೇಶ ಸಂಖ್ಯೆ:ಆರ್‌ಡಿ:259:ಟಿಎನ್‌ಆರ್:2016(ಭಾ–1), ದಿನಾಂಕ 06.10.2016.
7. ಆದೇಶ ಸಂಖ್ಯೆ:ಆರ್‌ಡಿ:259:ಟಿಎನ್‌ಆರ್:2016(ಭಾ–1), ದಿನಾಂಕ 29.10.2016.

**********

**ಪ್ರಸ್ತಾವನೆ:**

ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೆರೆಸಂಜೀವಿನಿ ಯೋಜನೆಯನ್ನು ಮೇಲೆ ಓದಲಾದ 1 ರ ಆದೇಶದಲ್ಲಿ ಉತ್ತರ ಒಳನಾಡಿನ 12 ಜಿಲ್ಲೆಗಳ ವ್ಯಾಪ್ತಿಯ ಬರಪೀಡಿತ ಪ್ರದೇಶಗಳೆಂದು ಘೋಷಿಸಿದ 62 ತಾಲ್ಲೂಕುಗಳಲ್ಲಿ ತಲಾ ರೂ.50.00 ಲಕ್ಷಗಳಂತೆ 410 ಕೆರೆಗಳು ಹಾಗೂ 75 ತಾಲ್ಲೂಕುಗಳಲ್ಲಿ ತಲಾ ರೂ.25.00 ಲಕ್ಷಗಳ ಅನುದಾನದಲ್ಲಿ 415 ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ಜಾರಿಗೆ ತರಲಾಗಿರುತ್ತದೆ. ಅದರಂತೆ ಸದರಿ ಯೋಜನೆಯಡಿಯಲ್ಲಿ ಕೆರೆಗಳ ಹೂಳು ತೆಗೆಯುವ ಮೂಲಕ ನೀರು ಸಂಗ್ರಹಣ ಸಾಮರ್ಥ್ಯ ವೃದ್ಧಿಯಾಗಿ ಅಂತರ ಜಲಮಟ್ಟ ಹೆಚ್ಚಿಸಿ ತನ್ಮೂಲಕ ಜನ–ಜಾನುವಾರುಗಳಿಗೆ ಕುಡಿಯುವ ನೀರಿಗೆ ಅನುಕೂಲ ಕಲ್ಪಿಸಲು ಮತ್ತು ಕೆರೆ ಒತ್ತು ಕಾಮಗಾರಿಯನ್ನು ಜೆ.ಸಿ.ಬಿ.ಯಂತಹ ಯಂತ್ರೋಪಕರಣಗಳನ್ನು ಬಳಸಿ ಕಾಮಗಾರಿಗಳನ್ನು ಕೈಗೊಳ್ಳಲು ಕೆಟಿಟಿಪಿ ಕಾಯ್ದೆಯ ಕಲಂ–4(ಎ) ರಡಿ ವಿನಾಯಿತಿ ನೀಡಿ ಅವಕಾಶ ಕಲ್ಪಿಸಲಾಗಿತ್ತು.

ಪ್ರಸ್ತುತ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ತೀವ್ರವಾದ ಬರಗಾಲ ಮುಂದುವರೆದಿರುವುದರಿಂದ, ಮೇಲೆ ಓದಲಾದ–5, 6 ಮತ್ತು 7ರಲ್ಲಿ ಕಂದಾಯ ಇಲಾಖೆಯು ಹೊರಡಿಸಿದ ಆದೇಶಗಳಲ್ಲಿ ರಾಜ್ಯದ 139 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿರುತ್ತದೆ. ಅಲ್ಲದೆ ಬರ ಪೀಡಿತ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬಹುತೇಕ ಜಲ ಮೂಲಗಳಲ್ಲಿ ಸಂಗ್ರಹಣೆ ಕುಸಿತಗೊಂಡು ಸಾಕಷ್ಟು ಕಡೆ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುತ್ತದೆ. ಅದರಲ್ಲಿಯೂ ಕುಡಿಯುವ ನೀರಿನ ಪ್ರಮುಖ ಮೂಲವಾದ ಮಹತ್ವದ ಕೆರೆಗಳು ಬತ್ತಿ ಹೋಗಿರುವುದು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ. ಈ

ಸನ್ನಿವೇಶದಲ್ಲಿ ಕೆರೆ ಸಂಜೀವಿನಿ ಕಾರ್ಯಕ್ರಮವನ್ನು ಪುನ: ಮುಂದುವರೆಸಿ ಉಪಯುಕ್ತ ಕೆರೆಗಳ ಹೂಳೆತ್ತುವ ಕೆಲಸವನ್ನು ಆದ್ಯತೆಯ ಮೇಲೆ ತೆಗೆದುಕೊಂಡು ಮಳೆಗಾಲ ಪ್ರಾರಂಭವಾಗುವ ಮುನ್ನವೇ ಪೂರ್ಣಗೊಳಿಸಿದಲ್ಲಿ ಮಾತ್ರ ಮಳೆಗಾಲದಲ್ಲಿ ಕೆರೆಗಳಿಗೆ ನೀರು ಸಂಗ್ರಹಣೆಗೊಂಡು ಕೆರೆಯ ನೀರಿನ ಸಂಗ್ರಹಣಾ ಸಾಮರ್ಥ್ಯ ವೃದ್ಧಿಯಾಗುತ್ತದೆ ಮತ್ತು ಬರಗಾಲವನ್ನು ಸಮರ್ಥವಾಗಿ ನಿಭಾಯಿಸಲು ಸಹಕಾರಿಯಾಗುತ್ತದೆ. ಅದಕ್ಕಾಗಿ ಕೆರೆ ಸಂಜೀವಿನಿ–2 ಕಾರ್ಯಕ್ರಮವನ್ನು ಜಾರಿಗೆ ತರಲು ಸರ್ಕಾರವು ಉದ್ದೇಶಿರುತ್ತದೆ. ಹಾಗೂ ಮುಖ್ಯ ಅಭಿಯಂತರರು , ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರು ನೀಡಿದ ವರದಿಯಂತೆ ಕೆರೆ ಸಂಜೀವಿನಿ–1 ರ ಕಾರ್ಯಕ್ರಮದಡಿ ಅನುಮೋದನೆಗೊಂಡು ಇನ್ನೂ ಆರಂಭಗೊಳ್ಳದಿರುವ 172 ಕೆರೆಗಳನ್ನು ರೂ.9.32 ಕೋಟಿಗಳ ಮೊತ್ತದಲ್ಲಿ ಹಾಗೂ ಕೆರೆ ಸಂಜೀವಿನಿ–1 ರ ಕಾರ್ಯಕ್ರಮದಡಿ ಆರಂಭಗೊಂಡು ಪ್ರಗತಿಯಲ್ಲಿರುವ 179 ಕೆರೆಗಳನ್ನು ರೂ.12.44 ಕೋಟಿಗಳ ಮೊತ್ತವೂ ಸೇರಿ ಒಟ್ಟು ರೂ.21.76 ಕೋಟಿಗಳಲ್ಲಿ ಕೆರೆ ಸಂಜೀವಿನಿ–2 ಕಾರ್ಯಕ್ರಮದಡಿ ಕೈಗೆತ್ತಿಕೊಳ್ಳುವ ಅವಶ್ಯವಿರುತ್ತದೆ ಮತ್ತು ಹೊಸದಾಗಿ ಆಯ್ಕೆ ಮಾಡುವ ಕೆರೆಗಳನ್ನು ರೂ.28.24 ಕೋಟಿಗಳ ಮೊತ್ತದಲ್ಲಿ ಹೊಸದಾಗಿ ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕೆರೆ ಸಂಜೀವಿನಿ–2 ಕಾರ್ಯಕ್ರಮವನ್ನು ಜಾರಿಗೆ ತರಲು ತೀರ್ಮಾನಿಸಿದೆ. "ಕೆರೆ ಸಂಜೀವಿನಿ–2" ಯೋಜನೆಯಡಿ ತುರ್ತಾಗಿ ಕಾಲಮಿತಿಯೊಳಗೆ ಕೈಗೊಳ್ಳಲು ಕೆರೆಗಳ ಹೂಳೆತ್ತುವ ಕಾರ್ಯಕ್ರಮಗಳನ್ನು ಜೆ.ಸಿ.ಬಿ.ರೀತಿಯ ಯಂತ್ರೋಪಕರಣಗಳನ್ನು ಬಳಸಲು ಷರತ್ತುಬದ್ಧ ಅನುಮತಿಯನ್ನು ಮೇಲೆ ಓದಲಾದ–4ರ ಸರ್ಕಾರಿ ಆದೇಶದಲ್ಲಿ ನಿಡಲಾಗಿರುತ್ತದೆ.

ಪ್ರಸ್ತುತ ಮೇಲೆ ಓದಲಾದ–3ರ ಆರ್ಥಿಕ ಇಲಾಖೆಯ ಸಹಮತಿಯಲ್ಲಿ ಹೊಸದಾಗಿ ರೂ.2448.00ಲಕ್ಷಗಳಲ್ಲಿ ಕೆರೆ ಸಂಜೀವಿನಿ–2ರ ಕಾರ್ಯಕ್ರಮದಡಿಯಲ್ಲಿ ರಾಜ್ಯದ ಬರಪೀಡಿತ 130 ತಾಲ್ಲೂಕುಗಳ ವ್ಯಾಪ್ತಿಯ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಕೆರೆಗಳನ್ನು ಆಯ್ಕೆ ಮಾಡಿ ಹೂಳೆತ್ತುವ ಕಾರ್ಯಕ್ರಮಗಳು ಸೇರಿ ಅಭಿವೃದ್ಧಿಪಡಿಸಲು ಗ್ರಾಮೀಣ ವಿಧಾನಸಭಾ ಕ್ಷೇತ್ರವಾರು ಅನುದಾನವನ್ನು ಹಂಚಿಕೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 159 : ಆರ್‌ಆರ್‌ಸಿ : 2016, ದಿನಾಂಕ: 02.01.2017.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕೆರೆ ಸಂಜೀವಿನಿ–2ರ ಕಾರ್ಯಕ್ರಮದಡಿಯಲ್ಲಿ ರಾಜ್ಯದ ಬರಪೀಡಿತ 130 ತಾಲ್ಲೂಕುಗಳ ವ್ಯಾಪ್ತಿಯ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಕೆರೆಗಳನ್ನು ಆಯ್ಕೆ ಮಾಡಿ ಹೂಳೆತ್ತುವ ಕಾರ್ಯಕ್ರಮಗಳು ಸೇರಿ ಅಭಿವೃದ್ಧಿಪಡಿಸಲು ಗ್ರಾಮೀಣ ವಿಧಾನಸಭಾ ಕ್ಷೇತ್ರವಾರು ಅನುದಾನವನ್ನು ಅನುಬಂಧದಲ್ಲಿರುವಂತೆ ಒಟ್ಟು ರೂ.2448.00ಲಕ್ಷಗಳು ಹಂಚಿಕೆ ಮಾಡಿ ಅದರಂತೆ ಕಾರ್ಯಕ್ರಮವನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 501 ವೆಚ್ಚ–6 2016 ದಿನಾಂಕ:29–11–2016 ರನ್ವಯ ನೀಡಿದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

**ಷರತ್ತುಗಳು:–**

1. ಈ ಯೋಜನೆಯನ್ನು "ಕೆರೆ ಸಂಜೀವಿನಿ–2" ಎಂದು ಕರೆಯಲಾಗುವುದು. ಈ ಯೋಜನೆಯಡಿ ಕುಡಿಯುವ ನೀರಿನ ಮೂಲವಾದ ಮಹತ್ವದ ಕೆರೆಗಳ ಹೂಳನ್ನು ಮುಂಬರುವ ಬೇಸಿಗೆ ಮುಕ್ತಾಯದೊಳಗೆ ಯಂತ್ರೋಪಕರಣ ಬಳಸಿ ಹೂಳೆತ್ತಿ ಸದರಿ ಕೆರೆಗಳ ಸಂಗ್ರಹಣಾ ಸಾಮರ್ಥ್ಯವನ್ನು ಹಾಗೂ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಮಹತ್ವದ ಉದ್ದೇಶ ಹೊಂದಲಾಗಿದೆ.
2. ಕೆರೆ ಸಂಜೀವಿನಿ–2 ಕಾರ್ಯಕ್ರಮಕ್ಕೆ ಹೊಸದಾಗಿ ರೂ.2448.00 ಲಕ್ಷಗಳ ಮೊತ್ತಕ್ಕೆ 130 ತಾಲ್ಲೂಕುಗಳ ವ್ಯಾಪ್ತಿಯ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಅನುಬಂಧದಲ್ಲಿ ನಿಗಧಿಪಡಿಸಿರುವ ಅನುದಾನದ ಮಿತಿಯೊಳಗೆ ಹೊಸದಾಗಿ ಕೆರೆಗಳನ್ನು ಆಯ್ಕೆ ಮಾಡಿ ಅನುಷ್ಠಾನಗೊಳಿಸುವುದು. ಬೆಂಗಳೂರು ನಗರ ಜಿಲ್ಲೆಯ 4

ತಾಲ್ಲೂಕುಗಳು ಹಾಗೂ ವಿಜಯಪುರ ಜಿಲ್ಲೆಯ 5 ತಾಲ್ಲೂಕುಗಳಿಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

3. ಕೆರೆ ಸಂಜೀವಿನಿ–2 ಕಾರ್ಯಕ್ರಮಕ್ಕೆ ರಾಜ್ಯ ವಿಪತ್ತು ನಿರ್ವಹಣಾ ಸಮಿತಿಯು ಉಪಗ್ರಹ ಚಿತ್ರಾಧಾರಿತ ಕೆರೆಗಳ ದತ್ತಾಂಶ ಪಟ್ಟಿಯನ್ನು ಹೊಂದಿರುವ ಕರ್ನಾಟಕ ದೂರಸಂವೇದಿ ಅನ್ವಯಿಕ ಕೇಂದ್ರದವರಿಂದ ಪಡೆದು ಉಪಯುಕ್ತ ಕೆರೆಗಳ ಪಟ್ಟಿಯನ್ನು ಆಯ್ಕೆ ಮಾಡುವುದು.

4. ಕೆರೆ ಸಂಜೀವಿನಿ–2 ಯೋಜನೆಯಡಿ 2016–17ನೇ ಸಾಲಿನಲ್ಲಿ ಬರಪೀಡಿತವೆಂದು ಘೋಷಣೆಯಾಗಿರುವ 130 ತಾಲ್ಲೂಕುಗಳ ವ್ಯಾಪ್ತಿಯ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಕೆರೆಗಳನ್ನು ಆಯ್ಕೆ ಮಾಡುವುದು.

5. ಕೆರೆ ಸಂಜೀವಿನಿ–2 ಯೋಜನೆಯಡಿ ಗ್ರಾಮೀಣ ಪ್ರದೇಶಗಳ ಕೆರೆಗಳನ್ನು ಕೈಗೆತ್ತಿಕೊಳ್ಳಬಹುದು.

6. ಸ್ಥಳೀಯ ರೈತರು ಕೆರೆ ಹೂಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಸಾಗಾಣಿಕೆ ಮಾಡಲು ಇಚ್ಛಿಸುವಂತಹ ಕೆರೆಗಳಲ್ಲಿ ಮಾತ್ರ ಹೂಳು ತೆಗೆಯುವ ಕಾಮಗಾರಿ ಕೈಗೆತ್ತಿಕೊಳ್ಳತಕ್ಕದ್ದು.

7. ಆಯ್ಕೆ ಮಾಡಕೊಂಡ ಕೆರೆಯ ಕಾಮಗಾರಿಯನ್ನು ಉದ್ಯೋಗ ಖಾತ್ರಿ ಯೋಜನೆಯಡಿ ತೆಗೆದುಕೊಂಡಿರದ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದೃಢೀಕರಿಸುವುದು.

8. ಬೇರೆ ಬೇರೆ ಇಲಾಖೆಗಳಿಂದ ತೆಗೆದುಕೊಳ್ಳುತ್ತಿರುವ ಕೆರೆ ಹೂಳೆತ್ತುವ ಕಾಮಗಾರಿಗಳಿಗೂ (ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಸೇರಿದಂತೆ) ಹಾಗೂ ಕೆರೆ ಸಂಜೀವಿನಿ–2 ಕಾರ್ಯಕ್ರಮದಡಿ ತೆಗೆಯುವ ಕಾಮಗಾರಿಗೂ ಅತೀ ವ್ಯಾಪ್ತಿ (ಲೀಡ್) ಆಗದಂತೆ ನೋಡಿಕೊಳ್ಳುವುದು ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿ ಆಗಿರುತ್ತದೆ.

9. ಕೆರೆ ಸಂಜೀವಿನಿ–2 ಯೋಜನೆಯಡಿ ಕೈಗೊಳ್ಳುವ ಕೆರೆ ಹೂಳೆತ್ತುವ ಕಾಮಗಾರಿಗಳಿಗೆ ಜೆ.ಸಿ.ಬಿ. ರೀತಿಯ ಯಂತ್ರಗಳನ್ನು ಪ್ರತೀ ಘಂಟೆಗೆ ಬಾಡಿಗೆಯ ಆಧಾರದ ಮೇಲೆ ಪಡೆದುಕೊಂಡು ವೆಚ್ಚವನ್ನು ಭರಿಸುವುದು. ಯಾವುದೇ ಕಾರಣಕ್ಕೂ ಕೆರೆ ಹೂಳು ಸಾಗಾಣಿಕೆ ವೆಚ್ಚವನ್ನು ಭರಿಸತಕ್ಕದ್ದಲ್ಲ.

10. ಅಂದಾಜು ಸಿದ್ದಪಡಿಸುವಾಗ ಕೆರೆ ಹೂಳು ತೆಗೆಯುವುದನ್ನು ಇಲಾಖೆಯ ಅನುಸೂಚಿತ ದರದಂತೆ (ಡಿ.ಇಸ್.ಆರ್) ಮಾಡದೆ, ಜೆ.ಸಿ.ಬಿ. ರೀತಿಯ ಯಂತ್ರೋಪಕರಣಗಳ ಗಂಟೆವಾರು ಬಾಡಿಗೆ ದರ ಹಾಗೂ ಅದರಿಂದ ಆಗುವ ಪ್ರತೀ ಘಂಟೆ ಕೆಲಸವನ್ನು ಹಾಗೂ ಕೆರೆ ಹೂಳಿನ ಪರಿಮಾಣವನ್ನು ಪರಿಗಣಿಸಿ ಅಂದಾಜು ಪತ್ರಿಕೆಯನ್ನು ತಯಾರು ಮಾಡತಕ್ಕದ್ದು. ಕಾಮಗಾರಿಯ ಅಂದಾಜನ್ನು ಸಣ್ಣ ನೀರಾವರಿ, ಲೋಕೋಪಯೋಗಿ ಹಾಗೂ ಮತ್ತಿತರೆ ಇಲಾಖೆಗಳ ಯಾವುದೇ ಅನುಸೂಚಿತ ದರದಂತೆ ತಯಾರಿಸತಕ್ಕದ್ದಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸಲಾಗಿದೆ.

11. ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗವು ಅನುಷ್ಠಾನ ಇಲಾಖೆ ಆಗಿರುತ್ತದೆ.

12. ಕಾಮಗಾರಿಯ ಅಂದಾಜನ್ನು ಸಿದ್ದಪಡಿಸುವ ಮತ್ತು ಕಾಮಗಾರಿಗಳ ಮೇಲುಸ್ತುವಾರಿ ಮಾಡುವುದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿ ಆಗಿರುತ್ತದೆ.

13. ಕೆರೆ ಸಂಜೀವಿನಿ–2 ಯೋಜನೆಗೆ ಹೆಚ್ಚುವರಿ ರಾಜ್ಯ ವಿಪತ್ತು ನಿರ್ವಹಣೆ ನಿಧಿಯಿಂದ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಬಿಡುಗಡೆ ಮಾಡುವುದು.

14. ತದನಂತರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬರದ ತೀವ್ರತೆಗೆ ಅನುಗುಣವಾಗಿ ಮತ್ತು ಬತ್ತಿ ಹೋಗಿರುವ ಉಪಯುಕ್ತ ಕೆರೆಗಳ ಸಂಖ್ಯೆಗೆ ಅನುಗುಣವಾಗಿ ತೀವ್ರ ಬರದಿಂದ ಬಳಲುತ್ತಿರುವ ಜಿಲ್ಲೆಗೆ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡುವುದು.

15. ಈ ಯೋಜನೆಯ ಕಾಮಗಾರಿಗಳಿಗೆ ಬಾಡಿಗೆ ಆಧಾರದಲ್ಲಿ ಜೆ.ಸಿ.ಬಿ. ರೀತಿಯ ಯಂತ್ರೋಪಕರಣಗಳನ್ನು ಪಡೆಯುವುದಕ್ಕೆ ಕೆ.ಟಿ.ಟಿ.ಪಿ. ಕಾಯ್ದೆಯಕಲಂ 4(ಎ) ರಡಿ ವಿನಾಯಿತಿಯನ್ನು ನೀಡಲಾಗಿದೆ.

16. ಕೆರೆ ಸಂಜೀವಿನಿ–1 ರ ಕಾರ್ಯಕ್ರಮದಡಿ ಮಳೆ ಕಾರಣದಿಂದ ಆರಂಭಗೊಳ್ಳದಿರುವ 172 ಕೆರೆಗಳು ಹಾಗೂ ಪ್ರಗತಿಯಲ್ಲಿದ್ದು ಸ್ಥಗಿತಗೊಂಡ 179 ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮವನ್ನು ಕೆರೆ ಸಂಜೀವಿನಿ–2 ರಡಿ ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:159:ಆರ್ಆರ್ಸಿ:2016, ದಿ:05.012.2016ರಲ್ಲಿ ಸೂಚಿಸಿರುವಂತೆ ರೂ.21.76 ಕೋಟಿಗಳ ಮಿತಿಯೊಳಗೆ ಕೈಗೆತ್ತಿಕೊಳ್ಳುವುದು.

17. ಕೆರೆ ಸಂಜೀವಿನಿ–2 ರಡಿ ಹೊಸದಾಗಿ ಆಯ್ಕೆ ಮಾಡುವ ಕೆರೆಗಳ ಕಾರ್ಯಕ್ರಮಕ್ಕೆ ರೂ.28.24 ಕೋಟಿಗಳನ್ನು ಸೇರಿ ರೂ.50.00 ಕೋಟಿಗಳ ಮೊತ್ತ ನಿಗಧಿಪಡಿಸದ್ದು, ಅದರಂತೆ ಜಿಲ್ಲಾ ಪಂಚಾಯಿತಿಗಳಿಗೆ ಕೆರೆ ಸಂಜೀವಿನಿ–2 ರ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನವನ್ನು ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಬಳಸುವುದು. ವೆಚ್ಚ ಮಾಡಿದ್ದಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಡಾ. ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.



ಮಾನ್ಯ ಗ್ರಾಅ ಮತ್ತು ಪಂ.ರಾಜ್ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್ ಹಾಗೂ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಾದ ಡಾ॥ ಎನ್.ನಾಗಾಂಬಿಕಾ ದೇವಿರವರ ಅಧ್ಯಕ್ಷತೆಯಲ್ಲಿ ದಿನಾಂಕ:21.01.2017 ರಂದು 2017–18ನೇ ಸಾಲಿನ ಆಯವ್ಯಯ ಕುರಿತು ಪೂರ್ವಭಾವಿ ಸಭೆ.




ಗ್ರಾಮೀಣಾಭಿವೃದ್ಧಿ ಇಲಾಖೆ, ಜಾರ್ಖಂಡ್ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ದಿನಾಂಕ:22.01.2017ರಂದು ಇಲಾಖೆಗೆ ಸಂಬಂಧಿಸಿದಂತೆ ಮಾಹಿತಿ ಹಂಚಿಕೊಳ್ಳುತ್ತಿರುವ ನಿರ್ದೇಶಕರು ಪಂ.ರಾಜ್‌ರವರಾದ ಶ್ರೀ ಎಂ.ಕೆ.ಕೆಂಪೇಗೌಡ.

# KARNATAKA VIKAS : FEBRUARY 2017

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
RNI No. : 28103 / 1974 Total No. Pages 52, Posted at Bengaluru PSO, Mysore Road, Bengaluru
Date of Publication : on 9th, 10th, 11th of every month.




Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Mubarak Ahmed**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00